ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಜ್ಯದ ಭವಿಷ್ಯ ಬದಲಿಸುವ ಹೂಡಿಕೆದಾರರ ಸಮಾವೇಶ

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಇನ್ವೆಸ್ಟ್ ಕರ್ನಾಟಕ-2025 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾ ವೇಶ ಹೊಸ ಚಿಂತನೆಯ ನಾಯಕತ್ವ, ಉದ್ಯಮ ಮತ್ತು ರಾಜ್ಯ ಸರಕಾರದ ಮಧ್ಯೆ ಪಾಲುದಾರಿಕೆ ಹೆಚ್ಚಿಸುವ ವೇದಿಕೆಯಾಗಿ ಕಾರ್ಯನಿರ್ವ ಹಿಸುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ವಿವರಪುಟ→3

INVEST KARNATAKA

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಎಂ.ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಉತ್ತರ ಕರ್ನಾಟಕದ ಪ್ರಗತಿಗೆ ಮಹತ್ತರ ಹೆಜ್ಜೆಯಾಗಿ ಏಕಸ್ ಇನ್‌ಫ್ರಾ ಹುಬ್ಬಳ್ಳಿ ಕ್ಲಸ್ಟರ್‌ನಲ್ಲಿ
ಎಫ್‌ಎಂಸಿಜಿ ಉತ್ಪಾದನಾ ವ್ಯವಸ್ಥೆಯನ್ನು ಉದ್ಘಾಟಿಸುತ್ತಿರುವುದು

ಇನ್ವೆಸ್ಟ್ ಕರ್ನಾಟಕ 2025 | ಪ್ರಗತಿಯ ಮರುಕಲ್ಪನೆ | ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ | ಬೆಂಗಳೂರು ಅರಮನೆ ಬೆಂಗಳೂರು 12 ರಿಂದ 14 ಫೆಬ್ರವರಿ 2025

ಪ್ರಗತಿಯ ನೂತನ ಪರ್ವ ಆರಂಭ

ಕರ್ನಾಟಕವು ಪ್ರಗತಿಯ ಮರುಕಲ್ಪನೆಯಲ್ಲಿ ಮುಂಚೂಣಿಯ ಪಾತ್ರ ವಹಿಸಿದೆ. ಇನ್ವೆಸ್ಟ್ ಕರ್ನಾಟಕ 2025 ರಲ್ಲಿ ಜಾಗತಿಕ ಖ್ಯಾತನಾಮರು ತಂತ್ರಜ್ಞಾನ ಆಧಾರಿತ, ಪರಿಸರ ಸ್ನೇಹಿ, ಸಮಗ್ರ ಮತ್ತು ಸದೃಢ ಪ್ರಗತಿಯ ಬಗ್ಗೆ ತಮ್ಮ ದೃಷ್ಟಿಕೋನವನ್ನು ಹಂಚಿಕೊಳ್ಳಲಿದ್ದಾರೆ

ಉದ್ಘಾಟನೆ: 11 ಫೆಬ್ರವರಿ 2025, ಸಂಜೆ 4 ಗಂಟೆಗೆ

ಪ್ರಗತಿಯ ಮರುಕಲ್ಪನೆ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಳ್ಳಲಿರುವ ಜಾಗತಿಕ ದಾರ್ಶನಿಕರು



ಶ್ರೀ ಜಾರ್ಜ್ ಎ. ಪಪಂದ್ರೆಯೊ
ಗ್ರೀಸ್ ದೇಶದ ಮಾಜಿ ಪ್ರಧಾನಮಂತ್ರಿಗಳು

ಶ್ರೀ ಮಾರ್ಟಿನ್ ಲೂಂಡ್‌ಸ್ಟೆಟ್
ಅಧ್ಯಕ್ಷರು, ಎಬಿ ವೊಲ್ವೋ ಮತ್ತು
ಸಿಇಓ, ವೊಲ್ವೋ ಗ್ರೂಪ್

ಶ್ರೀ ಸೆಬಾಸ್ಟಿಯನ್ ಟ್ರೂನ್
ಸಂಸ್ಥಾಪಕರು, ಗೂಗಲ್ ಎಕ್ಸ್

ಶ್ರೀಮತಿ ಆ್ಯನ್ ಡಂಕಿನ್
ಮಾಜಿ ಮುಖ್ಯ ವಾರ್ತಾಧಿಕಾರಿ
ಯು.ಎಸ್. ಇಂಧನ ಇಲಾಖೆ

ಶ್ರೀ ಮಾಂಟೆಕ್ ಸಿಂಗ್ ಅಹ್ಲುವಾಲಿಯ
ಭಾರತೀಯ ಅರ್ಥಶಾಸ್ತ್ರಜ್ಞರು, ಮಾಜಿ ಉಪಾಧ್ಯಕ್ಷರು
ಭಾರತ ಯೋಜನಾ ಆಯೋಗ

ಶ್ರೀ ಶಶಿ ತರೂರ್
ಮಾನ್ಯ ಲೋಕಸಭಾ ಸದಸ್ಯರು
ತಿರುವನಂತಪುರಂ

ಶ್ರೀ ಆಕಿಸ್ ಎವ್ಯಾಂಜಿಲಿಡಿಸ್
ಸಹ ಸಂಸ್ಥಾಪಕರು ಮತ್ತು
ಮುಖ್ಯಸ್ಥರು - ಮಾರ್ಕೆಟಿಂಗ್, ನತಿಂಗ್

ಶ್ರೀ ಪ್ರಶಾಂತ್ ಪ್ರಕಾಶ್
ಸ್ಥಾಪಕ ಪಾಲುದಾರರು
ಆಕ್ಸೆಲ್ ಇಂಡಿಯಾ

ಶ್ರೀ ನಿಖಿಲ್ ಕಾಮತ್
ಸಹ ಸಂಸ್ಥಾಪಕರು, ಝೆರೋಧ
ಟ್ರೂ ಬೀಕನ್ ಮತ್ತು ಗೃಹಾಸ್

ಶ್ರೀ ಶೇಖರ್ ಗುಪ್ತ
ಮುಖ್ಯ ಸಂಪಾದಕರು
ದಿ ಪ್ರಿಂಟ್

ಶ್ರೀಮತಿ ಕಿರಣ್ ರಾವ್
ಚಲನಚಿತ್ರ ನಿರ್ದೇಶಕರು,
ನಿರ್ಮಾಪಕರು ಹಾಗೂ ಬರಹಗಾರರು

ಶ್ರೀಮತಿ ಇವಾನ್ ವಾಟ್ಸನ್
ಎಕ್ಸಿಕ್ಯೂಟಿವ್ ಡೀನ್
ಪಾರ್ಸನ್ಸ್ ಸ್ಕೂಲ್ ಆಫ್ ಡಿಸೈನ್

...ಮತ್ತು ಹಲವರು

ಪ್ರಮುಖ ಕಾರ್ಯಕ್ರಮಗಳು

ಭವಿಷ್ಯದ ನಾವೀನ್ಯತೆ ವಸ್ತುಪ್ರದರ್ಶನ
ನಾವೀನ್ಯತೆಗಳ ಅನ್ವೇಷಣೆ

ಎಸ್‌ಎಂಇ ಸಂಪರ್ಕ
ಕರ್ನಾಟಕದ ಎಸ್‌ಎಂಇ ಗಳು
ಉತ್ತೃಷ್ಟಗೊಳ್ಳಲು ಒಂದು ವೇದಿಕೆ

ವೆಂಚುರೈಸ್ - 2ನೇ ಆವೃತ್ತಿ
ಭಾರತದ ಪ್ರಮುಖ
ನವೋದ್ಯಮ ಜಾಗತಿಕ ಸ್ಪರ್ಧೆ

ಮುಖ್ಯಾಂಶಗಳು

100+ ಭಾಷಣಕಾರರು | 30+ ಗೋಷ್ಠಿಗಳು | 19+ ಪಾಲುದಾರ ದೇಶಗಳು | 150+ ಪ್ರದರ್ಶಕರು

ಉದ್ಘಾಟನಾ ಸಮಾರಂಭ ಹಾಗೂ ಎಲ್ಲಾ ಗೋಷ್ಠಿಗಳ ನೇರ ಪ್ರಸಾರವನ್ನು ಇಲ್ಲಿ ವೀಕ್ಷಿಸಬಹುದು:
https://www.youtube.com/@InvestKarnataka_KUM

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು.
-ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ

ಗುಂಜನ್ ಕೃಷ್ಣ, ಭಾ.ಆ.ಸೇ
ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕಾರ್ಯಕ್ರಮದ ವಿವರಗಳಿಗಾಗಿ

ಸಮಾಚಾರ ಸಣ್ಣದಲ್ಲ

ತಮ್ಮನ ಕಾಫಿ ಕಳವಿಗೆ, ಹೊಂಚು ಹಾಕಿದ ಅಣ್ಣ

ಸಕಲೇಶಪುರ: ಕಾಫಿಗೆ ಹಿಂದೆಂದೂ ಕಾಣದ ಬಂಗಾರದ ಬೆಲೆ ಬಂದಿದ್ದರಿಂದ ಫಸಲು ಇರುವ ರೈತರು ಖುಷಿ ಪಡುತ್ತಿದ್ದಾರೆ. ಆದರೆ ಇಲ್ಲದವರು ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ. ಈ ನಡುವೆ ಕಡಿಮೆ ಮಾಲು ಇದ್ದರೂ, ಕೈ ತುಂಬ ಹಣ ಕಿಸೆ ಸೇರಲಿದೆ ಎಂದುಕೊಂಡ ಖದೀಮರು ಕಾಫಿ ಕಳವು ಮಾಡುವುದನ್ನೇ ಕಸುಬಾಗಿಸಿಕೊಂಡಿದ್ದಾರೆ. ಹೀಗಾಗಿ ಕಾಫಿ ಕಳವು ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅಚ್ಚರಿ ಎಂದರೆ ಸ್ವಂತ ತಮ್ಮ ಮನೆಯ ಮುಂದೆ ಒಣಗಲು ಹಾಕಿದ್ದ ಕಾಫಿ ಕಳ್ಳತನಕ್ಕೆ ಅಣ್ಣನೇ ಯತ್ನಿಸಿರುವ ಘಟನೆ ತಾಲೂಕಿನ ಅರಕೆರೆ ಗ್ರಾಮದಲ್ಲಿ ನಡೆದಿದೆ. ಕಳೆದ ಮೂರು ವರ್ಷಗಳಿಂದ ಕಾಫಿ ಕಳ್ಳತನ ನಡೆಯುತ್ತಲೇ ಇತ್ತು. ಈ ಬಾರಿ ಕಾಫಿಗೆ ಅಧಿಕ ಬೆಲೆ ಬಂದಿದ್ದರಿಂದ ದಿ.ಎ.ಸಿ.ಬಸವರಾಜು ಪುತ್ರ ಪವನ್ ಸಿಸಿಟಿವಿ ಅಳವಡಿಸಿದ್ದರು. ಕಾಫಿ ಕೊಯ್ಲು ಮಾಡಿ ಮನೆಯ ಮುಂದೆ ಒಣಗಲು ಹಾಕಿದ್ದರು. ರಾತ್ರಿ ವೇಳೆ ಪ್ಲಾಸ್ಟಿಕ್ ಚೀಲ ಹಿಡಿದು ಕಾಫಿ ಬೀಜ ಕದಿಯಲು ಅಣ್ಣ ಎ.ಸಿ.ಮಂಜುನಾಥ್ ಬಂದಿದ್ದಾರೆ. ಈ ವೇಳೆ ಸಿಸಿಟಿವಿ ನೋಡುತ್ತಲೇ ಸ್ಥಳದಿಂದ ಮಂಜುನಾಥ್ ಕಾಲ್ಕಿತ್ತಿದ್ದಾರೆ. ಅಕ್ಕಪಕ್ಕದಲ್ಲೇ ಸಹೋದರರ ಮನೆಗಳಿದ್ದು ದೊಡ್ಡಪ್ಪನ ವಿರುದ್ಧ ಪವನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಕಾಂಗ್ರೆಸ್ ಸೇವಾದಳ ಕಾರ್ಯಕಾರಿಣಿ ಸಭೆ

ಹಾಸನ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳ ಮೈಸೂರು ವಿಭಾಗದ ಕಾರ್ಯಕಾರಿಣಿ ಸಭೆ ಹಾಸನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಎನ್.ಬಿ. ದಿನೇಶ್, ಸೇವಾದಳ ಕಾಂಗ್ರೆಸ್ ಪಕ್ಷದ ಅಂಗ ಸಂಸ್ಥೆಯಾಗಿದೆ. ತನ್ನ ಯುವ ಶಕ್ತಿಯಿಂದ ಹೋರಾಟಕ್ಕೆ ಕೊಡುಗೆ ನೀಡುತ್ತಾ ಬಂದಿದೆ. ಪಕ್ಷ ಸೇರ್ಪಡೆಯ ಮುಖಾಂತರವೇ ಆಗಬೇಕೆಂದಿಲ್ಲ. ಸೇವಾದಳದ ಕಾರ್ಯಕರ್ತರಾಗಿ ಸಹಾ ದೇಶಕ್ಕೆ ಕೊಡುಗೆಗಳನ್ನು ನೀಡಬಹುದು ಎಂದರು. ರಾ.ಕಾರ್ಯದರ್ಶಿ ವೇಣುಗೋಪಾಲ್, ರಾಜ್ಯ ಮುಖ್ಯ ಸಂಘಟಕ ರಾಮಚಂದ್ರ, ಮಹಿಳಾ ಘಟಕದ ಗಿರಿಜಾ ಹೂಗಾರ, ಮುಖ್ಯ ತರಬೇತುದಾರ ವಿಶ್ವನಾಥ್, ಹತ್ತು ಜನ ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಿದ್ದರು.

ಸೇವೆಗಾಗಿ ಪ್ರಶಸ್ತಿ : ಅರ್ಜಿ ಆಹ್ವಾನ

ತುಮಕೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಏಪ್ರಿಲ್ 5ರಂದು ಡಾ. ಬಾಬು ಜಗಜೀವನರಾಂ ಜಯಂತಿ ಹಾಗೂ ಏಪ್ರಿಲ್ 14ರಂದು ಡಾ. ಬಿ.ಆರ್ ಅಂಬೇಡ್ಕರ್ ಜಯಂತಿಯಂದು ಪ್ರಶಸ್ತಿ ನೀಡಲಾಗುವುದು. ಆಸಕ್ತರು ಅಗತ್ಯ ದಾಖಲಾತಿಗಳೊಂದಿಗೆ ಫೆ.27ರೊಳಗಾಗಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಹಾಯಕ ನಿರ್ದೇಶಕ(ಗ್ರೇಡ್-1) ಶಿವಣ್ಣ ವಿ.ಎಸ್. ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಓದು ಇಂದು

ತುಮಕೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಫೆಬ್ರವರಿ 11ರಂದು ಬೆಳಗ್ಗೆ 10:30 ಗಂಟೆಗೆ ತುವಿವಿಯ ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಓದು ಆಯೋಜಿಸಲಾಗಿದೆ. ರಸಪ್ರಶ್ನೆ, ಪ್ರಬಂಧ, ಕವನ ವಾಚನ, ಆಶುಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ವಿಜೇತರಿಗೆ ಬಹುಮಾನ ವಿತರಣೆಯಿದೆ. ಕುಲಪತಿ ಪ್ರೊ: ಎಂ. ವೆಂಕಟೇಶ್ವರಲು ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಅಶೋಕ ಎನ್. ಛಲವಾದಿ ಅಧ್ಯಕ್ಷತೆವಹಿಸುವರು. ಕಾನೂನು ಸಲಹೆಗಾರ ಡಾ: ಬಾಬಾ ಸಾಹೇಬ್ ಜಿನರಾಳ್ಕರ್ ಹಾಗೂ ಆನಂದ್ ಪಬ್ಲಿಕೇಶನ್‌ನ ಲೇಖಕ ಮತ್ತು ಪ್ರಕಾಶಕ ಶಂಕರಾನಂದ್ ಎಂ.ವಿ. ಅವರು ಉಪನ್ಯಾಸ ನೀಡಲಿದ್ದಾರೆ.

ಲೋಕ ಕಲ್ಯಾಣಕ್ಕಾಗಿ ಯಾಗ ಸಂಪನ್ನ

ತುಮಕೂರು: ಜಗದ್ಗುರು ಅನಂತ ಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ ಯವರ ದಿವ್ಯಸಾನ್ನಿಧ್ಯದಲ್ಲಿ ಜೋಲುಮಾರನಹಳ್ಳಿಯ ಶ್ರೀ ಕಾಳಿಕಾಕಮಟೇಶ್ವರ ದೇಗುಲದ ಯಾಗಶಾಲೆಯಲ್ಲಿ ಯಜುರ್ವೇದ ಪ್ರೋಕ್ತ ಶ್ರೀರುದ್ರ ಮಂತ್ರ ಪಾರಾಯಣದೊಂದಿಗೆ ವಿದ್ವಾನ್ ಚಂದ್ರೇಶ ಶರ್ಮಾ ಅವರ ಆಧ್ವರ್ಯದಲ್ಲಿ ಲೋಕ ಕಲ್ಯಾಣಕ್ಕಾಗಿ ಯಾಗ ಸಂಪನ್ನವಾಯಿತು. ಗ್ರಾಮಾಂತರ ಶಾಸಕ ಬಿ ಸುರೇಶ್ ಗೌಡರು ಜಗದ್ಗುರುಗಳ ಅನುಗ್ರಹ ಮಂತ್ರಾಕ್ಷತೆಗೆ ಪಾತ್ರರಾದರು. ಸಾವಿರಾರು ಭಕ್ತ ಸಮೂಹ ಯಾಗದ ಪೂರ್ಣಾಹುತಿಯನ್ನು ಕಣ್ತುಂಬಿಕೊಂಡರು.

{ಡಾ.ಎಂ.ಸಿ.ಸುಧಾಕರ್} ಶಿಕ್ಷಣ ಸಚಿವ

ಮನುಷ್ಯನ ಸುಸ್ಥಿರ ಆರೋಗ್ಯಕ್ಕೆ ರಾಗಿ, ನವಣೆ, ಹಾರಕ, ಸಾಮೆ, ನೆಲ್ಲಕ್ಕಿ, ಬರುಗು, ಕೊರಲೆ, ಊದಲು, ಸಜ್ಜೆ ಮತ್ತು ಜೋಳ ಹೀಗೆ ಹಲವು ಸಿರಿಧಾನ್ಯಗಳಲ್ಲಿನ ಪೌಷ್ಠಿಕಾಂಶಗಳು ಸಹಕಾರಿಯಾಗಿವೆ. ಫೈಬರ್ ಯುಕ್ತ, ಕ್ಯಾಲ್ಸಿಯಂ, ಪ್ರೋಟೀನ್ ಯುಕ್ತ ಇತರ ಖನಿಜಾಂಶಗಳಿವೆ.

ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳ | ಸಚಿವ ಡಾ.ಎಂ.ಸಿ ಸುಧಾಕರ್ ಚಾಲನೆ

ಸಿರಿಧಾನ್ಯ ಸಿರಿವಂತರ ಆಹಾರ

ಬಾಗೇಪಲ್ಲಿ: ಸಿರಿಧಾನ್ಯಗಳಲ್ಲಿ ವಿಟಮಿನ್, ಪ್ರೋಟೀನ್ ಹೇರಳವಾಗಿದ್ದು, ಉತ್ತಮ ಸಮತೋಲನ ಆರೋಗ್ಯಕ್ಕಾಗಿ ಸಿರಿಧಾನ್ಯಗಳನ್ನು ಬಳಕೆ ಮಾಡುವುದು ಉತ್ತಮ, ಸಿರಿಧಾನ್ಯಗಳ ಬಳಸುತ್ತಿದ್ದ ನಮ್ಮ ಪೂರ್ವಜರು ಆರೋಗ್ಯವಂತರಾಗಿದ್ದರು ಎಂದು ಡಾ.ಎಂ.ಸಿ ಸುಧಾಕರ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಬಾಗೇಪಲ್ಲಿ ಸರಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ, ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳ ಹಾಗೂ ಫಲಪುಷ್ಪ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಬಡವರ ಆಹಾರವಾಗಿರುವಂತಹ ಸಿರಿಧಾನ್ಯಗಳು ಈಗ ಸಿರಿವಂತರ ಆಹಾರ ಆಗಿರುವುದು ಕಂಡುಬರುತ್ತಿದೆ. ಸಿರಿಧಾನ್ಯಗಳಿಗೆ ಹಿಂದಿನಿಂದ ನಮ್ಮ ಪೂರ್ವಿಕರು ಹೆಚ್ಚು ಒತ್ತು ನೀಡುತ್ತಿದ್ದರು. ಇಂದು ಅದನ್ನು ನಾವು ಕೈಬಿಟ್ಟಿದ್ದೇವೆ. ಇಂದು ಸೂಪರ್ ಫುಡ್‌ಗಳ ಪಟ್ಟಿಯಲ್ಲಿ ಸಿರಿಧಾನ್ಯಗಳು ಸೇರುತ್ತಿವೆ. ಸಿರಿಧಾನ್ಯಗಳನ್ನು ಬೆಳೆದ ನಂತರ ಅದಕ್ಕೆ ತಕ್ಕಂತೆ ಸೂಕ್ತವಾದ ಮಾರುಕಟ್ಟೆಯ ಬೆಲೆ ಸಿಗುವುದಿಲ್ಲವೆಂದು ಭಾವಿಸಿ ಬೇರೆ ಬೆಳೆಗಳನ್ನು ಬೆಳೆಯುವ ಕಡೆಗೆ ಸಾಗುತ್ತಿದ್ದೇವೆ. ಕಾಲ ಬದಲಾದಂತೆ ಆಹಾರ ಪದಾರ್ಥಗಳ ಕಾರಣದಿಂದ ನಮ್ಮೆಲ್ಲರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸರಕಾರ ಇದಕ್ಕೆ ಉತ್ತೇಜನ ನೀಡಿ ಪ್ರೋತ್ಸಾಹ ಧನ ನೀಡುತ್ತಿದೆ ಎಂದರು.

ಸಿರಿಧಾನ್ಯಗಳ ಬೆಳೆ ನಮ್ಮ ದೇಶೀಯ ವ್ಯವಸಾಯ ಪದ್ಧತಿಯಾಗಿದೆ. ಈ ಪದ್ಧತಿಗೆ ಸುಮಾರು 5 ಸಾವಿರ ವರ್ಷಗಳ ಇತಿಹಾಸವಿದೆ. ಆದ್ದರಿಂದ ರೈತರು ಸಿರಿಧಾನ್ಯಗಳ ಕೃಷಿಗೆ ಒಲವು ತೋರಬೇಕು ಎಂದು ಮನವಿ ಮಾಡಿದರು.

ಬಾಗೇಪಲ್ಲಿ ಸುತ್ತ ಮುತ್ತಲಿನ ಬರಡು ಭೂಮಿಯನ್ನು ಕೈಗಾರಿಕೆ ಉದ್ದೇಶಕ್ಕೆ 600 ಎಕರೆ ಮೀಸಲಿಡಲು ಅಂತಿಮ ಅಧಿಸೂಚನೆಯಾಗಿದೆ. ರೈತರಿಗೆ ಒಳ್ಳೆಯ ಭೂ ಸ್ವಾಧೀನ ಪರಿಹಾರವನ್ನು ಕೊಡಿಸಲು ಬಾಗೇಪಲ್ಲಿ ಶಾಸಕರಾದ ಎಸ್.ಎನ್ ಸುಬ್ಬಾರೆಡ್ಡಿ ಅವರು ಪ್ರಯತ್ನ ಮಾಡುತ್ತಿದ್ದಾರೆ. ವ್ಯವಸಾಯ ಪದ್ಧತಿಯು ಬೆಳೆಯಬೇಕು ರೈತರು ಬದುಕಬೇಕು ಎಂದರು.

ಶಾಸಕ ಎಸ್.ಎನ್ ಸುಬ್ಬಾರೆಡ್ಡಿ ಮಾತನಾಡಿ, ಎಚ್.ಎನ್ ವ್ಯಾಲಿಯ ಮುಖಾಂತರ ಮಾರ್ಚ್ ಏಪ್ರಿಲ್ ವೇಳೆಗೆ ನೀರು ತರುವ ಪ್ರಯತ್ನ ಮಾಡಲಾಗುತ್ತಿದೆ. 2028 ಅವಧಿಯೊಳಗೆ ಎತ್ತಿನಹೊಳೆ ನೀರು ತಂದು ಬಾಗೇಪಲ್ಲಿಯನ್ನು ಹಸಿರಾಗಿಸುವ ಆಶಯವಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎನ್. ರಮೇಶ್, ಪುರಸಭೆ ಅಧ್ಯಕ್ಷ ಎ.ಶ್ರೀನಿವಾಸ್, ಉಪಾಧ್ಯಕ್ಷೆ ಸುಜಾತಮ್ಮ ನರಸಿಂಹ ನಾಯ್ಡು, ಜಿಲ್ಲಾಧಿಕಾರಿ ಪಿ ಎನ್ ರವೀಂದ್ರ, ಜಿಪಂ ಸಿಇಒ ಪ್ರಕಾಶ್ ಜಿ.ಟಿ.ನಿಟ್ಟಾಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಕೃಷಿ ಇಲಾಖೆಯ ಕೃಷಿ ಜಂಟಿ ನಿರ್ದೇಶಕಿ ಜಾವೀದಾ ನಾಸಿಮ್ ಖಾನಂ, ತೋಟಗಾರಿಕೆ ಉಪ ನಿರ್ದೇಶಕಿ ಎಂ.ಗಾಯತ್ರಿ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ತಿಮ್ಮಂಪಲ್ಲಿ ಚೌಡರೆಡ್ಡಿ, ತಾಪಂ ಇಒ ಜಿ.ವಿ ರಮೇಶ್, ಕೆಡಿಪಿ ಸದಸ್ಯ ಮಂಜುನಾಥ್‌ಹಾಜರಿದ್ದರು.

ಬಾಗೇಪಲ್ಲಿಯಲ್ಲಿ ನಡೆದ ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳ ಹಾಗೂ ಫಲಪುಷ್ಪ ಪ್ರದರ್ಶನವನ್ನುಸಚಿವ ಡಾ.ಎಂ.ಸಿ ಸುಧಾಕರ್ ಉದ್ಘಾಟಿಸಿದರು.

ಬೇಡಿಕೆ ಈಡೇರಿಕೆಗಾಗಿ ಗ್ರಾಪಂ ಸಿಬ್ಬಂದಿ ಮುಷ್ಕರ

ತುಮಕೂರು: ಕಂದಾಯ ಇಲಾಖೆಯ ಗ್ರಾಮ ಆಡಳಿತಾಧಿಕಾರಿಗಳಿಗೆ ಕಚೇರಿ, ಕಾಲ ಕಾಲಕ್ಕೆ ಬಡ್ತಿ, ಕೆಲಸದ ಭದ್ರತೆ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳು(ವಿಎಒ) ಕೇಂದ್ರ ಸಂಘದ ಕರೆಯ ಮೇರೆಗೆ ಕೆಲಸಕ್ಕೆ ಸಾಮೂಹಿಕ ರಜೆ ನೀಡಿ,ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಎದುರು ಎಲ್ಲಾ ಗ್ರಾಮ ಆಡಳಿತ ಅಧಿಕಾರಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ಆಪ್‌ಗಳನ್ನು ಅನ್ ಇನ್‌ಸ್ಟಾಲ್ ಮಾಡಿ, ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಸುಸಜ್ಜಿತ ಕಚೇರಿ, ಗುಣಮಟ್ಟದ ಪೀಠೋಪಕರಣ, ಮೊಬೈಲ್, ಅದಕ್ಕೆ ಬೇಕಾದ ಸಿಮ್ ಮತ್ತು ಡಾಟಾ, ಲ್ಯಾಪ್ ಟಾಪ್ ಮತ್ತು ಪ್ರಿಂಟರ್‌ಗಳನ್ನು ನೀಡಬೇಕೆಂಬ ಮನವಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಅಧೀಕ್ಷಕರಿಗೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಶಾಖೆಯ ಅಧ್ಯಕ್ಷ ಎಸ್.ದೇವರಾಜು, ಗ್ರಾಮ ಆಡಳಿತ ಅಧಿಕಾರಿಗಳು ಅನುಭವಿಸುತ್ತಿರುವ ತೊಂದರೆಗಳನ್ನು ಪರಿಹರಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಸರಕಾರ ಸ್ಪಂದಿಸದ ಕಾರಣ ಮೊದಲ ಹಂತದ ಮುಷ್ಕರವನ್ನು ಕೈಗೊಳ್ಳಲಾಗಿತ್ತು. ಅಂದಿನ ಕಂದಾಯ ಇಲಾಖೆಯ ಪ್ರಧಾನ ಕಾರ್ಯ ದರ್ಶಿ ಭರವಸೆ ನೀಡಿದ ನಂತರ ವಾಪಸ್ ಪಡೆಯಲಾಗಿತ್ತು. ಆದರೆ ಮೂರು ತಿಂಗಳು ಕಳೆದರೂ ಸರಕಾರ ಕೆಲಸ ಸಣ್ಣ, ಪುಟ್ಟ ಬೇಡಿ ಕೆಗಳನ್ನು ಈಡೇರಿಸಿ, ಪ್ರಮುಖ ಬೇಡಿಕೆಗಳ ಕಡೆಗೆ ಗಮನವನ್ನೇ ಹರಿಸಿಲ್ಲ ಎಂದರು.

ಪ್ರತಿಭಟನೆಯಲ್ಲಿ ಸಂಘದ ತುಮಕೂರು ಜಿಲ್ಲಾ ಶಾಖೆಯ ಪದಾಧಿಕಾರಿಗಳಾದ ಎನ. ರವಿಕುಮಾರ್, ಎನ್.ಜಿ.ಪುರುಷೋತ್ತಮ್, ಖಜಾಂಚಿ ರಾಘವೇಂದ್ರಸ್ವಾಮಿ, ಗೌರವಾಧ್ಯಕ್ಷ ಹೇಮಂತಕುಮಾರ್, ಕಲ್ಲೇಶ್, ಸುಮತಿ, ರವಿಕುಮಾರ್, ಜಗದೀಶ್, ಬಸವರಾಜು, ರಾಜೇಶ್, ನವೀನ್‌ಕುಮಾರ್, ಕಾಂತರಾಜು, ವೆಂಕಟೇಶ್, ಪ್ರಸನ್ನಕುಮಾರ್ ಇದ್ದರು.

ಗ್ರಾಮ ಆಡಳಿತಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಚೇರಿ ಎದುರು ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಖಾತೆ ಮಾಡಲಿಕ್ಕೆ ಲಂಚ: ಲೋಕಾ ಬಲೆಗೆ ಬಿದ್ದ ವಿಎ

ಕೋಲಾರ: ಇಲ್ಲಿನ ಉಪ ವಿಭಾಗಾಧಿಕಾರಿ ಕಚೇರಿ ಕೇಸ್‌ವರ್ಕರ್ ಕಚೇರಿಯಲ್ಲೇ 20 ಸಾವಿರ ರೂ. ಲಂಚ ಪಡೆಯುವಾಗ ಹಣದ ಸಮೇತ ಲೋಕಾ ಬಲೆಗೆ ಸಿಲುಕಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಎಸಿ ಕಚೇರಿ ಗ್ರಾಮ ಲೆಕ್ಕಾಧಿಕಾರಿ ಕೋಮಲ ಬಂಧಿತ ಸಿಬ್ಬಂದಿ.

ಮುಳಬಾಗಲು ತಾಲೂಕು ಉತ್ತನೂರು ಗ್ರಾಮದ ರೈತ ಸುರೇಶ್ ಎಂಬುವರ ತಂದೆ ಮೃತಪಟ್ಟಿದ್ದು ಕುಟುಂಬದ ಐವರಿಗೆ ಪೌತಿ ಖಾತೆ ಮಾಡಲು 50 ಸಾವಿರ ಲಂಚಕ್ಕೆ ಬೇಡಿಕೆ ಇರಿಸಿದ್ದು 20 ಸಾವಿರಕ್ಕೆ ಕೆಲಸ ಮಾಡಿಕೊಡಲು ಸಮ್ಮತಿಸಿದ್ದರು. ಅದಂತೆ ಹಣ ನೀಡುವಾಗ ಸೋಮವಾರ ಕೋಕಾ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಲೋಕಾಯುಕ್ತ ಎಸ್ಪಿ ಧನಂಜಯ ಮತ್ತು ಇನ್‌ಸ್ಪೆಕ್ಟರ್ ರೇಣುಕ ದಾಳಿ ನಡೆಸಿದ್ದಾರೆ.

ಏನಿದು ಪ್ರಕರಣ:

ಎರಡು ವರ್ಷದ ಹಿಂದೆ ಮುಳಬಾಗಲು ಸಿವಿಲ್ ನ್ಯಾಯಾಲಯದಲ್ಲಿ ಐವರು ಮಕ್ಕಳ ಹೆಸರಿಗೆ ಖಾತೆ ಮಾಡಿಕೊಡಲು ನ್ಯಾಯಾಧೀಶರು ಆದೇಶ ಹೊರಡಿಸಿದ್ದರು. ಮುಳಬಾಗಲು ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿದಾಗ ಕಡತ ಕೋಲಾರದ ಎಸಿ ಕಚೇರಿಗೆ ಬಂದಿತ್ತು. ಹಣ ನೀಡಲಿಲ್ಲವೆಂದು ಕ್ವಯರಿ ಹಾಕಿ ಪುನಃ ಫೈಲು ತಹಸೀಲ್ದಾರ್ ಕಚೇರಿಗೆ ವಾಪಸ್ ಹಾಕಲಾಗಿತ್ತು. ಸರಿಪಡಿಸಿ ಕೋಲಾರಕ್ಕೆ ಕಳುಹಿಸಲಾಗಿತ್ತು. ಈ ಬಾರಿ ಹಣ ನೀಡದೆ ಹೋದರೆ ಪುನಃ ಕ್ವಯರಿ ಹಾಕುವುದಾಗಿ ಗ್ರಾಮಲೆಕ್ಕಾಧಿಕಾರಿ ಕೋಮಲ ಬೆದರಿಕೆ ಹಾಕಿದ್ದರು. ರೋಸಿ ಹೋದ ಅರ್ಜಿದಾರ ಸುರೇಶ್ ಅಂತಿಮವಾಗಿ ಲೋಕಾಯುಕ್ತ ಬಾಗಿಲು ತಟ್ಟಿದ್ದರು.

ನ್ಯಾಯಧೀಶರ ಮನೆಯಲ್ಲಿ ಆರೋಪಿ ಹಾಜರುಪಡಿಸಿ ಜೈಲಿಗೆ ಕಳುಹಿಸಲಾಗುವುದು ಎಂದು ಲೋಕಾ ಎಸ್ಪಿ ಧನಂಜಯ ಅವರು ವಿಶ್ವವಾಣಿಗೆ ತಿಳಿಸಿದ್ದಾರೆ.

ಮೈಕ್ರೋ ಫೈನಾನ್ಸ್ ಹಾವಳಿ ತಡೆಗೆ ರೈತ ಸಂಘ ಮನವಿ

ಚಿಕ್ಕಬಳ್ಳಾಪುರ: ಜಿಲ್ಲೆಯ ರೈತಾಪಿ ಜನರಿಗೆ ಕಿರುಸಾಲ ನೀಡುತ್ತಾ ಅವರನ್ನು ಬಡ್ಡಿಯ ಸುಳಿಗೆ ತಳ್ಳುವ ಮೈಕ್ರೋ ಫೈನಾನ್ಸ್ ಹಾವಳಿಗೆ ತಿಲಾಂಜಲಿ ಇಡಲು ಜಿಲ್ಲಾಡಳಿತ, ರಾಜ್ಯ ಸರಕಾರ, ರಾಜ್ಯಪಾಲರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಡಾ.ಭಾಸ್ಕರ್ ಮೂಲಕ ಸಿಎಂಗೆ ಮತ್ತು ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

ನಗರದ ಜಿಲ್ಲಾಡಳಿತ ಭವನದ ಎದುರು ಸೋಮವಾರ ಮೈಕ್ರೋ ಫೈನಾನ್ಸ್ ಹಾವಳಿ ವಿರುದ್ಧ ಕ್ರಮವಹಿಸಬೇಕು,ರಾಜ್ಯಪಾಲರು ರಾಜ್ಯ ಸರಕಾರ ಕಳಿಸಿದ ಸುಗ್ರೀವಾಜ್ಞೆಗೆ ಅಂಕಿತ ಹಾಕಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರತೀಶ್ ಮಾತನಾಡಿ, ಕೇಂದ್ರ ಸರಕಾರ ಶೇ.48 ರಷ್ಟು ಸಾಲ ವಿತರಣೆಗೆ ಕಡಿವಾಣ ಹಾಕಿದೆ. ಮೈಕ್ರೋಫೈನಾನ್ಸ್ ಹಾವಳಿ ತಡೆಯಲು ಸುಗ್ರೀವಾಜ್ಞೆಯ ಕರಡನ್ನು ಅನುಮೋದನೆಗೆ ಕಳಿಸಿಕೊಟ್ಟಿದೆ.ಅಂಕಿತ ಹಾಕಬೇಕಾದ ರಾಜ್ಯಪಾಲರು ಈಗಿರುವ ಕಾನೂನುಗಳನ್ನೇ ಇನ್ನಷ್ಟು ಬಿಗಿಮಾಡಿ. ಈ ಬಿಲ್ಲನ್ನು ಮತ್ತೊಮ್ಮೆ ಸಂಪುಟದಲ್ಲಿಟ್ಟು ಚರ್ಚೆ ಮಾಡಿ ಕಳಿಸಿಕೊಡಿ ಎಂದು ಹಿಂದಿರುಗಿಸಿದ್ದಾರೆ. ಸರಕಾರ ಕೂಡ ಇದನ್ನು ಮರುಪರಿಶೀಲಿಸಿ ರೈತರ ಪರ ಕಾನೂನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಗೌರಿಬಿದನೂರು ಅಧ್ಯಕ್ಷ ಲೋಕೇಶ್‌ಗೌಡ ಮಾತನಾಡಿ, ಮೈಕ್ರೋ ಫೈನಾನ್ಸ್ ಹಾವಳಿ ಮಿತಿಮೀರಿದೆ. ಕಂಪನಿಗಳು ಸಾಲ ಪಡೆದಾದ ಮೇಲೆ ರೌಡಿಗಳ ಹಾಗೆ ವರ್ತಿಸುತ್ತಾರೆ. ಸಾಲದ ಕಂತು ಪಡೆಯಲು ಬೆಳ್ಳಂಬೆಳಿಗ್ಗೆ ಮನೆಗೆ ಬರುವ ವಸೂಲಿಗಾರರು ಕಂತು ಕಟ್ಟುವವರೆಗೆ ಮನೆಬಿಟ್ಟು ಹೋಗುವುದೇ ಇಲ್ಲ. ಸಣ್ಣ ಪುಟ್ಟ ಲೇವಾದೇವಿಗಾರರೂ ಕೂಡ ಇದೇ ಹಾದಿ ತುಳಿದಿದ್ದಾರೆ. ರಾಜ್ಯ ಪಾಲರು ಸರಕಾರದ ಸುಗ್ರೀವಾಜ್ಞೆಯ ಬಿಲ್ಲಿಗೆ ಸಹಿಹಾಕಿ ರೈತರ ಹಿತಕಾಪಾಡಬೇಕು ಎಂದು ಮನವಿ ಮಾಡಿದರು.

ಚಿಂತಾಮಣಿ ತಾ.ಅಧ್ಯಕ್ಷ ಕದಿರೇಗೌಡ, ಕಾರ್ಯದರ್ಶಿ ಆಂಜಿನಪ್ಪ,ರಾಜ್ಯ ಮುಖಂಡ ಬೆಳ್ಳೂಟಿ ಮುನಿಕೆಂಪಣ್ಣ, ಜಿ.ವಿ.ರಘುನಾಥರೆಡ್ಡಿ,ಜಿಲ್ಲಾ ಗೌರವಾಧ್ಯಕ್ಷ ವೆಂಕಟರಾಮಯ್ಯ , ರಾಜಣ್ಣ,ಬಿ.ಮುನಿಯಪ್ಪ. ಶಿಡ್ಲಘಟ್ಟ ತಾಲೂಕು ಅಧ್ಯಕ್ಷ ಬಿ.ಮುನೇಗೌಡ ಕಾರ್ಯದರ್ಶಿ ನವೀನ್ ಆಚಾರ್ಯ ಇದ್ದರು.



ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಜಿಲ್ಲಾಡಳಿತ ಭವನದ ಎದುರು ಮೈಕ್ರೋ ಫೈನಾನ್ಸ್ ಹಾವಳಿ ವಿರುದ್ಧ ಕ್ರಮವಹಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಬದುಕಿಗೆ ಆಧುನಿಕತೆ ಜತೆ ಆಧ್ಯಾತ್ಮವೂ ಬೇಕಿದೆ

ರಾಮನಗರ: ಮನುಷ್ಯನ ಬದುಕಿಗೆ ಆಧುನಿಕತೆ ಜೊತೆಗೆ, ಆಧ್ಯಾತ್ಮ ಮತ್ತು ಜನಪದವೂ ಬೇಕಿದೆ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಜಾನಪದ ಲೋಕದಲ್ಲಿ ಜಾನಪದ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಎರಡು ದಿನಗಳ ಮಹಿಳಾ ಜಾನಪದ ಲೋಕೋತ್ಸವ-2025 ಸಮಾರೋಪ ಸಮಾರಂಭದಲ್ಲಿ ವಿವಿಧ ಜಾನಪದ ಕಲಾ ಪ್ರಕಾರಗಳ ಸಾಧಕರು ಹಾಗೂ ವಿದ್ವಾಂಸರಿಗೆ ಜಾನಪದ ಲೋಕ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ನಮ್ಮ ಮೂಲ ಇರುವುದೇ ಜನಪದದಲ್ಲಿ ಎಂಬುದನ್ನು ಮರೆಯಬಾರದು. ಅಕ್ಷರ ಕಾಣದ ತಮ್ಮ ತಾಯಂದಿರು ಜಾನಪದದ ಮೂಲಕ ಸಾಹಿತ್ಯವನ್ನು ಹಿಡಿದಿಟ್ಟಿದ್ದರು. ಅಳಿಸಲಾಗದ ಜ್ಞಾನ ಎಂದರೆ ಲಿಪಿ. ಅಂದರೆ ಜ್ಞಾನ. ಈ ಜ್ಞಾನವನ್ನು ಜನಪದದ ಮೂಲಕ ಹಿಡಿದಿಟ್ಟಿದ್ದರು. ನಾವು ಹೊರಗೆ ಶ್ರೀಮಂತರಾಗುತ್ತಿದ್ದೇವೆ. ಒಳಗೆ ಬಡವರಾಗುತ್ತಿದ್ದೇವೆ. ಆಧುನಿಕತೆಯ ಭರಾಟೆಯಲ್ಲಿ ನಾವು ಸಹ ನಮ್ಮತನ ಕಳೆದುಕೊಳ್ಳುತ್ತಿದ್ದೇವೆ ಎಂದರು.

ದೆಹಲಿ ಕನ್ನಡ ಸಂಘದ ಅಧ್ಯಕ್ಷ ನಾಗರಾಜು, ದೇಶದ ರಾಜಧಾನಿಯಲ್ಲಿರುವ ನಮ್ಮ ಸಂಘವು 75ನೇ ವರ್ಷಕ್ಕೆ ಕಾಲಿಟ್ಟಿದೆ. ದೆಹಲಿ ಪಕ್ಕದ ನೋಯ್ಡಾದಲ್ಲಿ ಎರಡು ಎಕರೆ ಜಾಗದಲ್ಲಿ ಸಂಘದಿಂದ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಯುಪಿಎಸ್.ಸಿ ಪರೀಕ್ಷೆಗೆ ತಯಾರಾಗುವವರ ರಾಜ್ಯದ ವಿದ್ಯಾರ್ಥಿಗಳಿಗೆ ಅಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ, ಪರಿಷತ್ತಿನಿಂದ ನಮ್ಮ ನಾಡಿನ ಜಾನಪದದ ಕಂಪನ್ನು ವಿಶ್ವದಾದ್ಯಂತ ಹರಡಲು ಸಿದ್ಧರಾಗಿದ್ದೇವೆ ಎಂದರು.

ಬುಡಕಟ್ಟು ಕಲಾವಿದೆ ರತ್ನಮ್ಮ, ರಾಮನಗರ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಪರಿಷತ್ತಿನ ಆಡಳಿತಾಧಿಕಾರಿ ನಂದಕುಮಾರ ಹೆಗಡೆ, ಜಾನಪದ ಲೋಕದ ಕಾರ್ಯನಿರ್ವಾಹಕಿ ಸರಸವಾಣಿ, ಕ್ಯುರೇಟರ್ ಡಾ. ರವಿ ಯು.ಎಂ. ಹಾಗೂ ಇತರರು ಇದ್ದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಾಧಕರಿಗೆ ಜಾನಪದ ಲೋಕ ಪ್ರಶಸ್ತಿ ಪ್ರದಾನ ಮಾಡಿದರು.

ಗ್ರಾಮ ಆಡಳಿತಾಧಿಕಾರಿಗಳ 2ನೇ ಹಂತದ ಪ್ರತಿಭಟನೆ

ತಾಲೂಕು ಕಚೇರಿ ಎದುರು ಗ್ರಾಮ ಆಡಳಿತಾಧಿಕಾರಿಗಳು ಪ್ರತಿಭಟನೆ ಆರಂಭಿಸಿದರು.

ನೆಲಮಂಗಲ: ಗ್ರಾಮ ಆಡಳಿತಾಧಿಕಾರಿಗಳು ಸೇವೆಗಳನ್ನು ಸ್ಥಗಿತಗೊಳಿಸಿ ತಾಲೂಕು ಕಚೇರಿ ಎದುರು 2ನೇ ಅವಧಿಯ ಪ್ರತಿಭಟನೆ ಆರಂಭಿಸಿದರು.

ನಗರದ ತಾಲೂಕು ಕಚೇರಿಯ ಆವರಣದಲ್ಲಿ ರಾಜ್ಯ ಗ್ರಾಮಾಡಳಿತಾಧಿಕಾರಿಗಳ ಕೇಂದ್ರ ಸಂಘದಿಂದ ಪ್ರತಿಭಟನೆ ಆರಂಭಿಸಿದ್ದು ತಾಲೂಕಿನ 40ಕ್ಕೂ ಹೆಚ್ಚು ಗ್ರಾಮ ಆಡಳಿತಾಧಿಕಾರಿಗಳು ಕೆಲಸ ಸ್ಥಗಿತಗೊಳಿಸಿ ಹೋರಾಟ ಆರಂಭಿಸಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ಸಮಸ್ಯೆ ಎದುರಾಗಿದೆ.

ಸರಕಾರ ಸೂಚನೆ ನೀಡುವ ಇಲಾಖೆಯ ಎಲ್ಲಾ ಕೆಲಸಗಳನ್ನುಮಾಡಲು ನಾವು ಸಿದ್ಧರಿದ್ದೇವೆ ಆದರೆ ಮೊಬೈಲ್, ಲ್ಯಾಪ್ಟಾಪ್ ನೀಡದೆ ಮೊಬೈಲ್‌ನ 16ಕ್ಕೂ ಹೆಚ್ಚು,ಲ್ಯಾಪ್ ಟಾಪ್‌ನ 18ಕ್ಕೂ ಹೆಚ್ಚು ಆ್ಯಪ್‌ಗಳನ್ನು ಬಳಕೆ ಮಾಡಲು ತಿಳಿಸಿದ್ದಾರೆ, ಸರಕಾರದ ಯೋಜನೆಗಳನ್ನು ವಿಎಗಳ ಮೇಲೆ ಹಾಕಿ ಕಡಿಮೆ ಕಾಲ ಮಿತಿಯಲ್ಲಿ ಎಲ್ಲಾ ಸೇವೆಯನ್ನು ಮಾಡಲು ತಿಳಿಸುತ್ತಿದ್ದು ರಜೆ ದಿನವೂ ಕೆಲಸ ಮಾಡುವಂತೆ ಮಾಡಿದ್ದಾರೆ. ನಮ್ಮ ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ ಬೇಡಿಕೆ ಈಡೇರುವವರೆಗೆ ವಾಪಸ್ ಪಡೆಯುವುದಿಲ್ಲ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ.ಸಿರಘುಪತಿ ತಿಳಿಸಿದರು.

ಸಂಘದ ಗೌರಾವಾಧ್ಯಕ್ಷ ಬಾಲಕೃಷ್ಣ , ತಾಲೂಕು ಅಧ್ಯಕ್ಷ ಆಕಾಶ್ ಗಾಯಕವಾಡ್, ಮಾಜಿ ಅಧ್ಯಕ್ಷೆ ಮಂಜುಳಮ್ಮ, ಉಪಾಧ್ಯಕ್ಷ ವಾಸು, ಕಾರ್ಯದರ್ಶಿ ಕುಮಾರ್, ಜಂಟಿ ಕಾರ್ಯದರ್ಶಿ, ಶರಣ ಬಸಪ್ಪ, ಗ್ರಾಮ ಆಡಳಿತಾಧಿಕಾರಿಗಳಾದ ಚಲಗೇರಿ, ಕಾಂತರಾಜು, ಪಾರ್ಥ ಸಾರಥಿ, ಲೋಕೇಶ್, ಮಾರುತಿ, ಗೋಪಾಲ್, ವೆಂಕಟೇಶ್, ಶ್ವೇತಾ, ಮಮತ, ಉಮಾ,ಶೋಭಾ, ವರ್ಷಿತಾ ಉಪಸ್ಥಿತರಿದ್ದರು.

ಹಲವು ಬೇಡಿಕೆ ಈಡೇರಿಕೆಗೆ ಮುಷ್ಕರ

ಗುಬ್ಬಿ: ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘ ಎರಡನೇ ಹಂತದ ಮುಷ್ಕರ ಆರಂಭಿಸಿದ್ದು ರಾಜ್ಯ ಸಂಘದ ಆದೇಶದಂತೆ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದ್ದಾರೆ. ಕಳೆದ ನಾಲ್ಕು ತಿಂಗಳು ಕಳೆದರೂ ಯಾವುದೂ ಬೇಢಿಕೆ ನೆರವೇರದ ಹಿನ್ನಲೆ ಎರಡನೇ ಹಂತದಲ್ಲಿ ಮುಷ್ಕರ ಆರಂಭಿಸಿದ್ದೇವೆ ಎಂದು ಸಂಘದ ತಾ.ಅಧ್ಯಕ್ಷೆ ಪಿ.ಎಸ್. ಸುಮತಿ ತಿಳಿಸಿದರು. ನಮ್ಮನ್ನು ದುಡಿಸಿಕೊಳ್ಳುವ ಸರಕಾರ ಸುಸಜ್ಜಿತ ಕಚೇರಿ, ಗುಣಮಟ್ಟದ ಮೊಬೈಲ್, ಸಿಯುಜಿ ಸಿಮ್, ಡೇಟಾ, ಲ್ಯಾಪ್ ಟಾಪ್, ಸ್ಕ್ಯಾನರ್, ಪ್ರಿಂಟರ್ ಹೀಗೆ ಯಾವುದೇ ಅನುಕೂಲ ಮಾಡಿಕೊಟ್ಟಿಲ್ಲ. ಶ್ರೇಣಿಯಲ್ಲಿ ವೇತನ ನೀಡಿಲ್ಲ. ಯಾವುದೇ ಪದೋನ್ನತಿ ನೀಡಿಲ್ಲ. ಪತಿ ಪತ್ನಿ ವರ್ಗಾವಣೆ ಕೂಡಾ ಮಾಡುತ್ತಿಲ್ಲ ಎಂದು ತಮ್ಮ ಕಷ್ಟದ ಅಳಲು ತೋಡಿಕೊಂಡರು.

ಪ್ರಧಾನ ಕಾರ್ಯದರ್ಶಿ ಜಿ.ಎಸ್.ಅಭಿಷೇಕ್ ಮಾತನಾಡಿ, ಗ್ರಾಮ ಲೆಕ್ಕಾಧಿಕಾರಿಗಳ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಜಮಾಬಂದಿ, ದಪ್ತರ್, ಪ್ರೋಟೋಕಾಲ್, ಬೆಳೆ ಹಾನಿ ಸಮೀಕ್ಷೆ ಹೀಗೆ ಹಲವು ಕೆಲಸ ಕಡಿತ ಗೊಳಿಸಿ ಒತ್ತಡ ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು.

ಮದುವೆಗೆ ಯುವತಿ ನಿರಾಕರಣೆ: ಆತ್ಮಹತ್ಯೆ

ಅರಸೀಕೆರೆ: ತಾನು ಪ್ರೀತಿಸಿದ ಹುಡುಗಿ ತನ್ನನ್ನು ಮದುವೆಯಾಗಲು ನಿರಾಕರಿಸಿದಳು ಎಂಬ ಕಾರಣಕ್ಕೆ ಮನನೊಂದು ವಿಷ ಸೇವಿಸಿ ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೈರಾಗೊಂಡನಹಳ್ಳಿ ಗ್ರಾಮದಲ್ಲಿ ನಡೆದಿದೆ. ದರ್ಶನ (22) ಆತ್ಮಹತ್ಯೆಗೆ ಶರಣಾದ ಯುವಕ.

ಗಂಡಸಿ ಹೋಬಳಿ ಬೇವಿನಹಳ್ಳಿಯಲ್ಲಿರುವ ಅಜ್ಜಿ ಮನೆಯಿಂದ ಕಾಲೇಜಿಗೆ ತೆರಳುತ್ತಿದ್ದ ದರ್ಶನ, ಬೇವಿನಹಳ್ಳಿ ಗ್ರಾಮದ ಮೋನಿಕಾ ಎಂಬ ಹುಡುಗಿಯನ್ನು ಪ್ರೀತಿಸುತ್ತಿದ್ದ. ಐದಾರು ವರ್ಷಗಳಿಂದ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ದರ್ಶನ ಹಾಗೂ ಮೋನಿಕಾ ಸಿನಿಮಾ, ಹೋಟೆಲ್, ಪ್ರವಾಸ ಹೀಗೆ ಜೊತೆಯಲ್ಲಿ ಓಡಾಡುತ್ತಿದ್ದರು. ಈ ನಡುವೆ ಬಿಎ ಮುಗಿಸಿ ವ್ಯವಸಾಯ ಮಾಡುತ್ತಿದ್ದ ದರ್ಶನ, ಇತ್ತೀಚೆಗೆ ಮದುವೆಯಾಗುವಂತೆ ಕೇಳಿದ. ಆದರೆ ಮೋನಿಕಾ ಆಗಲ್ಲ ಎಂದು ನಿರಾಕರಿಸಿದಳು.ಇದರಿಂದ ಮನನೊಂದಿದ್ದ ದರ್ಶನ, ಫೆ.5 ರಂದು ಮನೆಯಲ್ಲಿಯೇ ವಿಷ ಸೇವಿಸಿದ್ದ. ಕೂಡಲೇ ಅರಸೀಕೆರೆ ಆಸ್ಪತ್ರೆಗೆ ಕರೆದೊಯ್ದ ಸ್ನೇಹಿತರು, ನಂತರ ಜಿಲ್ಲಾಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದರು. ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾನೆ. ನಮ್ಮ ಹುಡುಗನ ಸಾವಿಗೆ ಮೋನಿಕಾಳೇ ಕಾರಣ ಎಂದು ಆರೋಪಿಸಿ ದರ್ಶನ ಭಾವ ಶಂಕರ ಬಾಣಾವರ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು.

ಮನೆಯಲ್ಲಿ ಮಕ್ಕಳಿಗೆ ನೈತಿಕತೆ ಕಲಿಸಿ

ಕೋಲಾರ: ಪೋಷಕರು ಮನೆಯಲ್ಲಿ ಮಕ್ಕಳಿಗೆ ಶಿಸ್ತು, ಸಂಯಮ, ಪ್ರಾಮಾಣಿಕತೆ ಮತ್ತು ನೈತಿಕತೆ ಪಾಠ ಕಲಿಸಿದರೆ ಪೊಲೀಸರಿಗೆ ಕೆಲಸ ಹಗುರ ಆಗುತ್ತದೆ ಎಂದು ಬೆಂಗಳೂರು ಪೂರ್ವ ವಲಯ ಡಿಸಿಪಿ ಡಿ.ದೇವರಾಜ್ ಹೇಳಿದರು.

ನಗರದ ಸುವರ್ಣ ಕನ್ನಡ ಭವನದಲ್ಲಿ ಸರಸ್ವತಿನಾರಾಯಣ್ ಇಂಟರ್ ನ್ಯಾಷನಲ್ ಸ್ಕೂಲ್ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಚಿಕ್ಕವಯಸ್ಸಿನಿಂದಲೇ ಉತ್ತಮ ಸಂಸ್ಕಾರಗಳನ್ನು ರೂಢಿಸಬೇಕು. ಮಕ್ಕಳು ತಪ್ಪು ಮಾಡಿದಾಗ ಪೋಷಕರು ಹೊಡೆಯದೆ ಮುದ್ದಾಗಿ ತಿಳಿ ಹೇಳಬೇಕು. ಇಸ್ರೇಲ್ ದೇಶದಲ್ಲಿ 18 ವರ್ಷ ಆದ ಯುವಕರು ಮತ್ತು ಯುವತಿಯರಿಗೆ ಕಾನೂನನ್ನು ಅರ್ಥ ಮಾಡಿಸುವ ಜತೆಗೆ ಜರೋಸಲೇಮ್ ಗೋಡೆಯ ಮುಂದೆ ಪ್ರಾರ್ಥನೆ ಮಾಡಿಸುವ ಮೂಲಕ ಶಾಂತಿ,ಸಂಯಮದ ಮಹತ್ವವನ್ನು ಕಲಿಸುತ್ತಾರೆ ಎಂದರು.

ಪ್ರಸೂತಿ ತಜ್ಞೆ ಡಾ.ವಿ.ಜಿ.ಹೇಮಾವತಿ ಮಾತನಾಡಿ, ಮಕ್ಕಳ ಉನ್ನತಿಯಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಮಹತ್ತರವಾಗಿದ್ದು ಚಿಣ್ಣರ ಮನಸ್ಸನ್ನು ಅರಳಿಸುವಂಥ ಚಟುವಟಿಕೆಗಳಲ್ಲಿ ತೊಡಗಿಸಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ವಿ. ಗೋಪಿನಾಥ್ ಮಾತನಾಡಿ, ಮಕ್ಕಳಲ್ಲಿ ಸಂಸ್ಕೃತಿ, ಪರಂಪರೆಯ ಅರಿವು ಮೂಡಿಸಿದರೆ ಸಮಾಜದ ಆಸ್ತಿಯಾಗಿ ಮಕ್ಕಳು ರೂಪುಗೊಳ್ಳುತ್ತಾರೆ ಎಂದು ನುಡಿದರು. ಹೃದಯತಜ್ಞ ಡಾ.ಯಶ್ವಂತ್ ಮಾತನಾಡಿ, ಮಕ್ಕಳಿಗೆ ಮೊಬೈಲ್ ಅವಲಂಬನೆ ಬೆಳೆಸಿದರೆ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಕುಗ್ಗಲು ಕಾರಣವಾಗುತ್ತದೆ. ಅದರ ಬದಲು ಆಟೋಟಗಳ ಮೂಲಕ ಸಮಾಧಾನಪಡಿಸಿ ಎಂದು ಸಲಹೆ ನೀಡಿದರು.

ಸ್ಮಾರ್ಟ್ ಕಿಡ್ಸ್ ಪ್ರಿ-ಸ್ಕೂಲ್‌ನ ಕಾರ್ಯದರ್ಶಿ ರಾಜೇಂದ್ರಪ್ರಸಾದ್, ನಿರ್ದೇಶಕಿ ಶಶಿಕಲಾ ಇದ್ದರು.

ಕೋಲಾರದ ಸರಸ್ವತಿ ನಾರಾಯಣ್ ಶಾಲಾ ವಾರ್ಷಿಕೋತ್ಸವದಲ್ಲಿ ಬೆಂಗಳೂರು ಪೂರ್ವ ವಲಯ ಡಿಸಿಪಿ ಡಿ.ದೇವರಾಜ್ ಮಾತನಾಡಿದರು.

ಅಲ್ಪಸಂಖ್ಯಾತರ ಘಟಕದ ಪದಗ್ರಹಣ

ಚಿಕ್ಕನಾಯಕನಹಳ್ಳಿ: ಕಾಂಗ್ರೆಸ್‌ನ ಅಲ್ಪಸಂಖ್ಯಾತರ ಘಟಕವನ್ನು ಬಲಿಷ್ಠಗೊಳಿಸಲು ಜೈನ, ಬೌದ್ಧ, ಕಿಶ್ಚಿಯ ನ್ ಸಹಿತ ಅಲ್ಪಸಂಖ್ಯಾತ ಮುಖಂಡರನ್ನು ಒಂದೆಡೆ ಸೇರಿಸಿ ಪಕ್ಷ ಸಂಘಟಿಸಬೇಕೆಂದು ಕೌಶಲಾಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರುಳೀಧರ ಹಾಲಪ್ಪ ಸಲಹೆ ನೀಡಿದರು. ಕಾಂಗ್ರೆಸ್ ಭವನದ ಆವರಣದಲ್ಲಿ ಅಲ್ಪಸಂಖ್ಯಾತರ ಘಟಕದಿಂದ ಸೋಮವಾರ ಆಯೋ ಜಿಸಿದ್ದ ನೂತನ ತಾ.ಅಧ್ಯಕ್ಷ ಇರ್ಫಾನ್ ಕಾರ್ಯದರ್ಶಿ ಸಮಿಯುಲ್ಲಾ ಸಾಬ್ ಅಧಿಕಾರ ಸ್ವೀಕಾರ ಸಮಾರಂ ಭದಲ್ಲಿ ಅವರು ಮಾತನಾಡಿದರು. ಪಕ್ಷವನ್ನು ಹಲವು ದಶಕಗಳಿಂದ ಬೆಂಬಲಿಸುತ್ತಾ ಬಂದಿರುವ ಅಲ್ಪಸಂ ಖ್ಯಾತರ ಘಟಕವನ್ನು ರಚಿಸಲು ಹಾಗು ಸಾಮಾಜಿಕ ನ್ಯಾಯದ ಆಧಾರದಲ್ಲಿ ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರಿಗೆ ಸ್ಥಾನಮಾನ ದೊರಕಿಸಲು ಬ್ಲಾಕ್ ಅಧ್ಯಕ್ಷ ಚಂದ್ರಶೇಖರ್ ಶ್ರಮಿಸಿದ್ದಾರೆ. ಮುಂಬರುವ ಜಿಪಂ ಮತ್ತು ತಾಪಂ ಚುನಾವಣೆಗೆ ಘಟಕವನ್ನು ಮತ್ತಷ್ಟು ಸಜ್ಜುಗೊಳಿಸಬೇಕು ಎಂದು ಸಲಹೆ ನೀಡಿದರು. ಮಾಜಿ ಶಾಸಕ ಕಿರಣ್ ಕುಮಾರ್ ಮಾತನಾ ಡಿ, ಬಿಜೆಪಿ ಅನುಸರಿಸುತ್ತಿರುವ ಒಡೆದಾಳುವ ನೀತಿಯಿಂದ ದೇಶದಲ್ಲಿ ಅಲ್ಪಸಂಖ್ಯಾತರು ಆತಂಕಗೊಂಡಿದ್ದಾರೆ. ಇದರೊಂದಿಗೆ ಜೆಡಿಎಸ್ ಕೂಡ ಸೇರಿಕೊಂಡಿದೆ ಎಂದು ಕಿಡಿಕಾರಿದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಪ್ರಯಾಗರಾಜ್‌ನಲ್ಲಿ ಈಗ ಮಹಾ ಕುಂಭಮೇಳ ನಡೆಯುತ್ತಿದೆ. ಮಹಾಕುಂಭ ಮೇಳವೂ ಧಾರ್ಮಿಕವಾಗಿ ಲಕ್ಷಾಂತರ ಜನರನ್ನು ಒಟ್ಟುಗೂಡಿಸಲಿದೆ. ಈ ವೈಮಾನಿಕ ಕಾರ್ಯಕ್ರಮವೂ ಜಾಗತಿಕ ರಕ್ಷಣಾ ಮತ್ತು ವೈಮಾನಿಕ ಕೊಳ್ಳುಗರು ಮತ್ತು ಮಾರಾಟಗಾರರನ್ನು ಈ ನೆಲದಲ್ಲಿ ಒಂದುಗೂಡಿಸುತ್ತದೆ. ಏರೋ ಇಂಡಿಯಾವೂ ತಾಂತ್ರಿಕ ಸಾಮರ್ಥ್ಯ ವೈಮಾನಿಕ ಮಹಾಕುಂಭವಾಗಿದೆ.

-ರಾಜನಾಥ್ ಸಿಂಗ್
ರಕ್ಷಣಾ ಸಚಿವ



ಬೆಂಗಳೂರು, ಏರೋಸ್ಪೇಸ್ ಉದ್ಯಮದಲ್ಲಿ ಅತ್ಯುತ್ತಮ ಪ್ರತಿಭೆಗಳನ್ನು ಹೊಂದಿದೆ. ಇದು ವಿಮಾನ ಮತ್ತು ಹೆಲಿಕಾಪ್ಟರ್ ಉತ್ಪಾದನಾ ಸೌಲಭ್ಯಗಳನ್ನು ಸ್ಥಾಪಿಸಲು ಸೂಕ್ತ ಸ್ಥಳವಾಗಿದೆ. ತಯಾರಕರಿಗೆ ಪ್ರೋತ್ಸಾಹ ನೀಡುವ ಮೂಲಕ, ಪ್ರತಿಭಾ ಪಲಾಯನವನ್ನು ತಡೆದು ನಮ್ಮ ದೇಶದ ಪ್ರತಿಭೆಗಳನ್ನು ಭಾರತದೊಳಗೆ ಉಳಿಸಿಕೊಳ್ಳಬಹುದು.

-ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ

ಪುಟ ತೆರೆದಂತೆ...

ದಶಕದ ಬಳಿಕವೂ ಪಾಠ ಕಲಿಯದ ಕೈ ಪಡೆ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ರೆಪೋ ರೇಟ್ ಕುಸಿತ ಅಂದಾಕ್ಷಣ ಅದು ಶುಭಸುದ್ದಿಯಲ್ಲ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ಮಾತಂದ್ರೆ ಮಾತು

ಸಿಎಂ ಸಿದ್ದರಾಮಯ್ಯ 11 ಕೆವಿ ಕರೆಂಟಲ್ಲ. ಅದು 660 ಕೆವಿ ಕರೆಂಟ್. ಅದನ್ನು ಮುಟ್ಟುವುದು ಅಷ್ಟು ಸುಲಭ ಅಲ್ಲ. ಅದನ್ನು ಮುಟ್ಟಿ ಗೆಲ್ಲುತ್ತೇವೆ. ಚಲಾವಣೆ ಆಗ್ತೀವಿ ಅಂದುಕೊಂಡರೆ ಅದು ಭ್ರಮೆ.

ಮುನಿರತ್ನ
ಬಿಜೆಪಿ ಶಾಸಕ

ದಾರಿದೀಪೋಕ್ತಿ

ನಾವು ಏನನ್ನು ಕೇಳುತ್ತೇವೋ ಅವೆಲ್ಲವೂ ನಿಜ ಎಂದು ಭಾವಿಸಬಾರದು. ಯಾವತ್ತೂ ಒಂದು ಘಟನೆಗೆ ಮೂರು ಆಯಾಮಗಳಿರುತ್ತವೆ. ಮೊದಲನೆಯದು ನಮ್ಮದು, ಎರಡನೆಯದು ಬೇರೆಯವರದ್ದು ಮತ್ತು ಮೂರನೆಯದು ಸತ್ಯಾಂಶ.

ವಕ್ರತುಂಡೋಕ್ತಿ

ಯಾರು ನಮಗೆ ಸಾಲ ಕೊಡುತ್ತಾರೋ, ಅವರಿಗೆ ನಮ್ಮ ಬಗ್ಗೆ 'ಇಂಟರೆಸ್ಟ್' ಜಾಸ್ತಿಯಾಗುತ್ತಾ ಹೋಗುತ್ತದೆ.

15ನೇ ಆವೃತ್ತಿಯ ಏರೋ ಇಂಡಿಯಾಗೆ ಚಾಲನೆ, ತಂತ್ರಜ್ಞಾನದ ಪಾರಮ್ಯ ಪ್ರದರ್ಶನ

ತುಮಕೂರಲ್ಲಿ ಸಿದ್ಧಗೊಂಡ ಎಲ್‌ಯುಎಚ್ ಹೆಲಿಕಾಪ್ಟರ್ ಮೊದಲ ದಿನವೇ ಪ್ರದರ್ಶನ

ದೇಶ-ವಿದೇಶಗಳ ವೈಮಾನಿಕ ಕಂಪನಿಗಳ ಸಹಿತ 960ಕ್ಕೂ ಹೆಚ್ಚು ಪ್ರದರ್ಶಕರು ಭಾಗಿ

ಭಾರತ ವಾಯುಸೇನೆಯೊಂದಿಗೆ ಅಮೆರಿಕ, ರಷ್ಯಾ, ಫ್ರಾನ್ಸ್ ಸೇರಿ ಹಲವು ರಾಷ್ಟ್ರ ಭಾಗಿ

ಫೆ.14ರವರೆಗೆ ಬೆಂಗಳೂರಲ್ಲಿ ಅತ್ಯಾಧುನಿಕ ಯುದ್ಧವಿಮಾನಗಳ ತಾಕತ್ತು ಪ್ರದರ್ಶನ

ಯುದ್ಧವಿಮಾನಗಳ ಮಿಂಚು ಬೆರಗಿನ ಲೋಕ ಅನಾವರಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಕಾಶದಲ್ಲಿ ಯುದ್ಧವಿಮಾನಗಳ ಘರ್ಜನೆ ಯಾದರೆ, ಇನ್ನೊಂದೆಡೆ ತಮ್ಮ ತಮ್ಮ ದೇಶದ ರಕ್ಷಣಾ ವಲಯದ ಶಕ್ತಿಯನ್ನು ವಿಶ್ವಕ್ಕೆ ಸಾರುವ ಧಾವಂತ. ಮತ್ತೊಂದೆಡೆ ತಮ್ಮ ದೇಶದ ಆಗಸವನ್ನು ರಕ್ಷಿಸಿಕೊಳ್ಳಲು ಅಗತ್ಯವಿರುವ ಯುದ್ಧವಿಮಾನ, ಹೆಲಿಕಾಪ್ಟರ್, ರಾಡಾರ್‌ಗಳ ಖರೀದಿಗೆ ವಿವಿಧ ದೇಶಗಳ ಪ್ರತಿನಿಧಿಗಳ ಸರಣಿ ಸಭೆ. ಈ ಎಲ್ಲದರ ನಡುವೆ ಆಗಸದಲ್ಲಿ ಚಿತ್ತಾರ ಮೂಡಿಸುತ್ತಿದ್ದ ಯುದ್ಧವಿಮಾನಗಳನ್ನು ನೋಡಿ ಮನಸೋತ ಸಾರ್ವಜನಿಕರು.

ಈ ಎಲ್ಲದಕ್ಕೂ ಸಾಕ್ಷಿಯಾಗಿದ್ದು ಯಲಹಂಕ ವಾಯುನೆಲೆ. ಸೋಮವಾರದಿಂದ ಆರಂಭ ಗೊಂಡ 15ನೇ ಆವೃತ್ತಿಯ ಏರೋ ಇಂಡಿಯಾಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿವಿಧ ದೇಶಗಳ ರಕ್ಷಣಾ ಸಚಿವರು, ವಿವಿಧ ದೇಶಗಳ ಸೇನಾ ಮುಖ್ಯಸ್ಥರ ಸಮ್ಮುಖದಲ್ಲಿ ಚಾಲನೆ ನೀಡಿದ ಬಳಿಕ, ಆಗಸದಲ್ಲಿ ಯುದ್ಧವಿಮಾನಗಳ ಕಲರವ ನೆರೆದಿದ್ದವರನ್ನು ಮೂಕವಿಸ್ಮಿತಗೊಳಿಸಿದವು.

ಉದ್ಘಾಟನಾ ಕಾರ್ಯಕ್ರಮದಲ್ಲಿ ದೇಶದ ಹೆಮ್ಮೆಯ ತೇಜಸ್, ಸುಖೋಯ್ ಸೇರಿದಂತೆ ಪ್ರಮುಖ ಯುದ್ಧವಿಮಾನಗಳು, ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದವು. ಅಂತಿಮವಾಗಿ ಸೂರ್ಯಕಿರಣ್ ತಂಡದ ಅಕ್ರೋಬ್ಯಾಟಿಕ್ ಪ್ರದರ್ಶನ ಪ್ರೇಕ್ಷಕರ ಮನಗೆದ್ದಿತು.

ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಇಲಾಖೆಯ ರಾಜ್ಯ ಸಚಿವ ಸಂಜಯ್ ಸೇಠ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ವಾಯುಸೇನಾ ಮುಖ್ಯಸ್ಥ ಅಮರ್ ಪ್ರೀತ್ ಸಿಂಗ್, ನೌಕಾ ಸೇನಾ ಮುಖ್ಯಸ್ಥ ಹರಿಕುಮಾರ್, ಭೂಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಸೇರಿದಂತೆ ಮೂರೂ ಸೇನೆಯ ವಿವಿಧ ಅಧಿಕಾರಿಗಳು, ಕೇಂದ್ರ ಸರಕಾರದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ವಿವರಪುಟ→ 5

- ಏರೋ ಇಂಡಿಯಾ ಪ್ರದರ್ಶನದಲ್ಲಿ 26 ಮಿತ್ರ ರಾಷ್ಟ್ರಗಳ ರಕ್ಷಣಾ ಸಚಿವರು, 96 ರಾಷ್ಟ್ರಗಳ ಅಧಿಕಾರಿಗಳು ಭಾಗಿ
- ಇದೇ ಮೊದಲ ಬಾರಿಗೆ ಅಮೆರಿಕದ ಎಫ್ 35, ರಷ್ಯಾದ ಸುಖೋಯ್ 57 ಯುದ್ಧವಿಮಾನಗಳಿಂದ ಹಾರಾಟ
- ಉದ್ಘಾಟನಾ ಕಾರ್ಯಕ್ರಮದಲ್ಲಿ ಎಲ್‌ಸಿಎ ಮಾರ್ಕ್ 2 ಯುದ್ಧವಿಮಾನದಿಂದ ಫ್ಲೈಯಿಂಗ್ ಡಿಸ್‌ಪ್ಲೆ
- ಏರೋ ಇಂಡಿಯಾ 2025ರಲ್ಲಿ 960ಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸಿದ್ದು ಈವರೆಗಿನ ಇತಿಹಾಸ
- ಸೂರ್ಯ ಕಿರಣ್ ಅಕ್ರೋಬ್ಯಾಟ್ ತಂಡದಲ್ಲಿ ಕನ್ನಡಿಗ ಅರ್ಜುನ್ ಪಟೇಲ್ ಅವರಿಂದ ಸಾಹಸ ಪ್ರದರ್ಶನ
- ಎಚ್‌ಎಎಲ್ ಅಭಿವೃದ್ಧಿಪಡಿಸಿರುವ ಜೆಟ್ ಟ್ರೇನರ್ ವಿಮಾನಕ್ಕೆ 'ಯಶಸ್' ಎಂದು ಮರುನಾಮಕರಣ
- ಮೊದಲು ಮೂರು ದಿನ ಸಾರ್ವಜನಿಕರಿಗೆ ನಿರ್ಬಂಧ
- ವೈಮಾನಿಕ ಹಾಗೂ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಸೆಮಿನಾರ್‌ಗಳು ಆರಂಭ
- ಮೊದಲ ದಿನವೇ ಯಲಹಂಕ ಸುತ್ತ ಭಾರಿ ಸಂಚಾರ ದಟ್ಟಣೆ; ವಾಹನ ಸವಾರರು ಹೈರಾಣು
- ಕಾಲುನೋವು, ಬಜೆಟ್ ತಯಾರಿಯ ಹಿನ್ನೆಲೆಯಲ್ಲಿ ಉದ್ಘಾಟನಾ ಕಾರ್ಯಕ್ರಮಕ್ಕೆ ಸಿಎಂ ಗೈರು
- ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗಿ

ತ್ರಿವೇಣಿ ಸಂಗಮದಲ್ಲಿ ಮುರ್ಮು ಪುಣ್ಯ ಸ್ನಾನ

ಪ್ರಯಾಗರಾಜ್: ಮಹಾ ಕುಂಭಮೇಳದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಿ, ತ್ರಿವೇಣಿ ಸಂಗಮದಲ್ಲಿ ಸೋಮವಾರ ಪುಣ್ಯ ಸ್ನಾನ ಮಾಡಿದರು. ಬಳಿಕ ಬಡೇ ಹನುಮಾನ್ ಮತ್ತು ಅಕ್ಷಯವತ್ ದೇವಸ್ಥಾನಗಳಿಗೆ ಭೇಟಿ ನೀಡಿ ಮುರ್ಮು ಪ್ರಾರ್ಥನೆ ಸಲ್ಲಿಸಿದ್ದಾರೆ.

ಅರಣ್ಯದಲ್ಲಿ ಹುಲಿ ಮೃತದೇಹ ಪತ್ತೆ

ಹಾಸನ: ಬೇಲೂರು ತಾಲೂಕಿನ ಗಡಿಭಾಗವಾದ ಅಡಗೂರು ಬಳಿಯ ನೀರಲ್ಲ ಅರಣ್ಯ ಪ್ರದೇಶದ ಕಮುರಿ ಹಳ್ಳಿಯ ಪಕ್ಕದ ಕಟ್ಟೆಯ ನೀರಿನಲ್ಲಿ ಹುಲಿಯ ಮೃತದೇಹ ಪತ್ತೆಯಾಗಿದೆ. ಹುಲಿ ಕೊರಳಲ್ಲಿ ರೆಡಿಯೋ ಕಾಲರ್ ಅಳವಡಿಸಲಾಗಿದೆ. ಹುಲಿಯ ಮೃತ ದೇಹ ಕೊಳೆತು ಸ್ಥಿತಿಯಲ್ಲಿರುವುದರಿಂದ ಮೂರ್ನಾಲ್ಕು ದಿನದ ಹಿಂದೆ ಸತ್ತಿರಬಹುದು ಎಂದು ಎನ್ನಲಾಗಿದೆ.

ಕೆಎಎಸ್ ಪ್ರಿಲಿಮ್ಸ್ ಫಲಿತಾಂಶ ಪ್ರಕಟ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಒಟ್ಟು 384 ಹುದ್ದೆಗಳ ಆಯ್ಕೆಗೆ ಡಿ.29ರಂದು ನಡೆದಿದ್ದ ಪೂರ್ವಭಾವಿ ಮರು ಪರೀಕ್ಷೆಯ ಫಲಿತಾಂಶವನ್ನು ಕೆಪಿಎಸ್‌ಸಿ ಸೋಮವಾರ ರಾತ್ರಿ ಪ್ರಕಟಿಸಿದೆ. ಪೂರ್ವಭಾವಿ ಪರೀಕ್ಷೆಯಿಂದ 1:15 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಕೆಪಿಎಸ್‌ಸಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಪೂರ್ವಭಾವಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಪೈಕಿ 5,760 ಅಭ್ಯರ್ಥಿ ಗಳು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜ್ಯ ಬಿಜೆಪಿ ಬಣಗಳು ದೆಹಲಿಗೆ ದೌಡು, ಸಚಿವ ಸೋಮಣ್ಣ ನಿವಾಸದಲ್ಲಿ ಪೂಜೆ ನೆಪ.

ಮುಡಾ ನಿವೇಶನ ಹಂಚಿಕೆ | ಇ.ಡಿ ಸಮನ್ಸ್‌ಗೆ ತಡೆ ಆದೇಶ ಮುಂದುವರಿಕೆ

ಭೈರತಿ ಸುರೇಶ್, ಸಿಎಂ ಪತ್ನಿಗೆ ರಿಲೀಫ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ. ಎಂ.ಪಾರ್ವತಿ ಮತ್ತು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಇ.ಡಿ (ಜಾರಿ ನಿರ್ದೇಶನಾಲಯ) ಜಾರಿ ಮಾಡಿರುವ ಸಮನ್ಸ್‌ಗೆ ವಿಧಿಸಲಾಗಿದ್ದ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಈ ಸಂಬಂಧ ಪಾರ್ವತಿ ಹಾಗೂ ಭೈರತಿ ಸುರೇಶ್ ಪ್ರತ್ಯೇಕವಾಗಿ ಸಲ್ಲಿಸಿರುವ ರಿಟ್ ಅರ್ಜಿಗಳನ್ನು, ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಭೈರತಿ ಸುರೇಶ್ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಮತ್ತು ಪಾರ್ವತಿ ಅವರ ಪರ ಹಿರಿಯ ವಕೀಲ ಸಂದೇಶ್ ಜೆ.ಚೌಟ ಸುದೀರ್ಘ ವಾದ ಮಂಡಿಸಿ, ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರಿಗೆ ಇ.ಡಿ ಜಾರಿ ಮಾಡಿದ್ದ ಸಮನ್ಸ್ ಅನ್ನು ಇದೇ ಹೈಕೋರ್ಟ್‌ನ ಸಮನ್ವಯ ಪೀಠ ವಜಾಗೊಳಿಸಿದೆ. ಅದೇ ತೀರ್ಪನ್ನು ಈ ಅರ್ಜಿದಾರರ ಪ್ರಕರಣದಲ್ಲೂ ಪರಿಗಣಿಸಬೇಕು ಎಂದು ಕೋರಿದರು.

ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಅರವಿಂದ ಕಾಮತ್ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಒಂದು ವಾರದಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿತು.

ಅವಹೇಳನಕಾರಿ ಪೋಸ್ಟ್ ಮೈಸೂರು ಉದ್ವಿಗ್ನ

ಮೈಸೂರು: ಯುವಕನೊಬ್ಬ ಅವಹೇಳನಕಾರಿ ಪೋಸ್ಟ್ ಹಂಚಿಕೊಂಡಿದ್ದನ್ನು ಖಂಡಿಸಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ಸಾವಿರಾರು ಮಂದಿ ಮುತ್ತಿಗೆ ಹಾಕಿದ ಘಟನೆ ಸೋಮವಾರ ರಾತ್ರಿ ನಡೆದಿದೆ. ಈ ವೇಳೆ ಕೆಲ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದು, ಉದ್ರಿಕ್ತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿ ಅಶ್ರುವಾಯು ಸಿಡಿಸಿದ್ದಾರೆ. ಕೊನೆಯಲ್ಲಿ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಪ್ರಕರಣದ ಹಿನ್ನೆಲೆಯಲ್ಲಿ ಎನ್ ಆರ್ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಹೆಚ್ಚುವರಿ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದ್ದು, ಹಿರಿಯ ಅಧಿಕಾರಿಗಳು ಮುಕ್ಕಾಂ ಹೂಡಿದ್ದಾರೆ.

ದಕ್ಷಿಣದ ಕುಂಭಮೇಳ ಮಿಂದೆದ್ದ ಭಕ್ತಸಾಗರ

ಕಾವೇರಿ, ಕಪಿಲ, ಸ್ಫಟಿಕ ಸರೋವರದ ನೀರು ಏಕಕಾಲದಲ್ಲಿ ಸಂಗಮಗೊಳ್ಳುವ ಸ್ಥಳವಾದ ನಡುಹೊಳೆ ಬಸಪ್ಪನ ಸನ್ನಿಧಿಯಲ್ಲಿ ಹರಗುರು ಚರಮೂರ್ತಿಗಳ ದಿವ್ಯ ಸಾನಿಧ್ಯದಲ್ಲಿ ಧ್ವಜಾರೋಹಣ ಮಾಡಲಾಯಿತು.

ಮೈಸೂರು: ಐತಿಹಾಸಿಕ ತಿರುಮಕೂಡಲು ನರಸೀಪುರದ ಕಾವೇರಿ, ಕಪಿಲ, ಸ್ಫಟಿಕ ಸರೋವರದ ತ್ರಿವೇಣಿ ಸಂಗಮವಾದ ನಡುಹೊಳೆ ಬಸಪ್ಪನ ಸನ್ನಿಧಿಯಲ್ಲಿ 13ನೇ ಕುಂಭಮೇಳ ಸೋಮವಾರ ಹಿಂದೂ ಧಾರ್ಮಿಕ ವಿಧಿವಿಧಾನಗಳೊಂದಿಗೆ ಚಾಲನೆ ಪಡೆಯಿತು.

ಸಂಗಮದಲ್ಲಿರುವ ಆರಾಧ್ಯ ದೈವ ಶ್ರೀ ಅಗಸ್ತ್ಯೇಶ್ವರನ ದರ್ಶನ ಪಡೆದ ಬಳಿಕ ಕೃಪಾಶೀರ್ವಾದ ಪಡೆದ ಬೆಂಗಳೂರಿನ ಕೈಲಾಸಾಶ್ರಮದ ಶ್ರೀ ಜಯೇಂದ್ರಪುರಿ ಶ್ರೀಗಳು ಮಧ್ಯಾಹ್ನ 12.55ರ ಶುಭಮುಹೂರ್ತದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಮಹಾಮೇಳಕ್ಕೆ ನಾಂದಿ ಹಾಡಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ, ಕಾಗಿನೆಲೆ ಮಠದ ಶ್ರೀಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಚಾಲನೆಗೊಂಡ ಕುಂಭಮೇಳ ಆಸ್ತಿಕ ಸಮುದಾಯಕ್ಕೆ ಮುದ ನೀಡಿತು.

ಬೆಂಗಳೂರು ಕೈಲಾಸಾಶ್ರಮದ ಶಿವಶ್ರೀ ಸಭೇಷ ಶಿವಾಚಾರ್ಯ ಅವರ ನೇತೃತ್ವದಲ್ಲಿ 20 ಋತ್ವಿಕರು ಹಾಗೂ ಆಗಮಿಕರಿಂದ ಪೂಜಾ ಕೈಂಕರ್ಯ ವಿಧಿವತ್ತಾಗಿ ನೆರವೇರಿತು. ಆದಿಚುಂಚನಗಿರಿ ಮಠದ ಸಂಸ್ಕೃತ ಪಾಠಶಾಲೆಯ 45 ವಿದ್ಯಾರ್ಥಿಗಳು ಹಾಗೂ ಬೆಂಗಳೂರಿನ ಕೈಲಾಸಾಶ್ರಮದ 20 ಋತ್ವಿಕರು ಹಾಗೂ ಆಗಮಿಕರು ವೇದಘೋಷ ಪಠಣ ಮಾಡಿದರು.

ಯತ್ನಾಳ್‌ಗೆ ನೋಟಿಸ್

ದೆಹಲಿ: ಪಕ್ಷದ ಶಿಸ್ತನ್ನು ಉಲ್ಲಂಘಿಸಿದ ಕಾರಣಕ್ಕೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಸೋಮವಾರ ಶೋಕಾಸ್ ನೋಟಿಸ್ ನೀಡಿದ್ದು, 72 ಗಂಟೆಗಳಲ್ಲಿ ಸಮಜಾಯಿಷಿ ನೀಡುವಂತೆ ತಾಕೀತು ಮಾಡಿದೆ. ಕಳೆದೊಂದು ವರ್ಷದಲ್ಲಿ ಯತ್ನಾಳ ಅವರಿಗೆ ಶಿಸ್ತು ಸಮಿತಿ ನೀಡುತ್ತಿರುವ ಮೂರನೇ ನೋಟಿಸ್ ಇದು.

ನೀವು ಪಕ್ಷದ ಶಿಸ್ತನ್ನು ಪದೇ ಪದೆ ಉಲ್ಲಂಘನೆ ಮಾಡುತ್ತಿದ್ದೀರಿ. ಈ ಹಿಂದೆಯೂ ನಿಮಗೆ ನೋಟಿಸ್ ನೀಡಲಾಗಿತ್ತು. ಮುಂದಿನ ದಿನಗಳಲ್ಲಿ ಉತ್ತಮ ನಡವಳಿಕೆ ತೋರುತ್ತೇನೆ ಎಂದು ಆಗ ಭರವಸೆ ನೀಡಿದ್ದೀರಿ. ಆದರೆ, ಅದನ್ನೂ ಉಲ್ಲಂಘಿಸಿದ್ದೀರಿ. ಇಂತಹ ನಡವಳಿಕೆಗೆ ನಿಮ್ಮ ವಿರುದ್ಧ ಪಕ್ಷ ಯಾಕೆ ಶಿಸ್ತು ಕ್ರಮ ಕೈಗೊಳ್ಳಬಾರದು. ಇದಕ್ಕೆ ಮೂರು ದಿನಗಳಲ್ಲಿ ವಿವರಣೆ ನೀಡಬೇಕು ಎಂದು ಓಂ ಪಾಠಕ್ ಅವರು ನೋಟಿಸ್‌ನಲ್ಲಿ ಸೂಚಿಸಿದ್ದಾರೆ. 72 ಗಂಟೆಗಳೊಳಗೆ ಉತ್ತರ ನೀಡದಿದ್ದರೆ ಪಕ್ಷ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ಎಚ್ಚರಿಸಿದ್ದಾರೆ.

ಚಿನ್ನದ ಬೆಲೆ ₹88,500

ದೆಹಲಿ: ಸೋಮವಾರ ಚಿನಿವಾರ ಪೇಟೆಯಲ್ಲಿ ಬಂಗಾರದ ಬೆಲೆ ದಾಖಲೆ ನಿರ್ಮಿಸಿದೆ. 2,430 ರು. ಹೆಚ್ಚಳವಾಗುವ ಮೂಲಕ 10 ಗ್ರಾಂ ಶುದ್ಧ ಚಿನ್ನದ ದರ 88,500 ರು.ಗೆ ತಲುಪಿದೆ. ಚಿನ್ನದ ದರವು 10 ಗ್ರಾಂಗೆ (ಶೇ.99.9 ಪರಿಶುದ್ಧತೆ) ₹2,430 ಹೆಚ್ಚಳವಾಗಿ, ₹88,500ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ.99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹88,100ಕ್ಕೆ ಮುಟ್ಟಿದೆ. ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠ ಏರಿಕೆಯಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,000 ಹೆಚ್ಚಳವಾಗಿ, ₹97,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಮೆರಿಕಕ್ಕೆ ಆಮದಾಗುವ ಸ್ಟೀಲ್ ಮತ್ತು ಅಲ್ಯುಮಿನಿಯಂ ಮೇಲೆ ಶೇ.25ರಷ್ಟು ತೆರಿಗೆ ವಿಧಿಸುವುದಾಗಿ ಹೇಳಿಕೆ ನೀಡುತ್ತಿದ್ದಂತೆ ಜಾಗತಿಕ ಮಾರುಕಟ್ಟೆಯಲ್ಲಿ ಲೋಹಗಳ ಬೆಲೆಯಲ್ಲಿ ಏರಿಕೆಯಾಗಿದೆ.

ಮಕ್ಕಳ ಮಧ್ಯೆ ಹೋಲಿಕೆ ಬೇಡ

ದೆಹಲಿ: ಮಕ್ಕಳನ್ನು ಮಾಡೆಲ್‌ಗಳಂತೆ ಪ್ರದರ್ಶನಕ್ಕಿಡಬೇಡಿ ಎಂದು ಪೋಷಕರಿಗೆ ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ. ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದಲ್ಲಿ ಮಕ್ಕಳೊಂದಿಗೆ ಸಂವಾದ ನಡೆಸಿದ ಅವರು, ಪೋಷಕರು ಬೇರೆ ಮಕ್ಕಳನ್ನು ನೋಡಿ ತಮ್ಮ ಮಕ್ಕಳು ಹೀಗೆಯೇ ಇರಬೇಕು, ಬೇರೆಯವರ ಮನೆಯ ಮಕ್ಕಳಂತೆಯೇ ಓದಬೇಕೆಂದು ಬಯಸಬೇಡಿ. ನಿಮ್ಮ ಮಕ್ಕಳಿಗೆ ಯಾವ ವಿಷಯದ ಬಗ್ಗೆ ಹೆಚ್ಚು ಆಸಕ್ತಿ ಇರುತ್ತದೋ ಅದೇ ವಿಚಾರಗಳನ್ನು ಓದಲು ಅನುವು ಮಾಡಿಕೊಡಿ. ಪೋಷಕರು ತಮ್ಮ ಆಸೆಗಳನ್ನು ಮಕ್ಕಳ ಮೇಲೆ ಹೇರಬಾರದು ಎಂದು ಹೇಳಿದ್ದಾರೆ.

ರಾಜ್ಯದ ಭವಿಷ್ಯ ಬದಲಿಸುವ ಹೂಡಿಕೆದಾರರ ಸಮಾವೇಶ

ಬೆಂಗಳೂರಿನಲ್ಲಿ ಇಂದಿನಿಂದ (ಫೆ.11ರಿಂದ) ಫೆ.14ರವರೆಗೆ ನಡೆಯಲಿರುವ ಇನ್ವೆಸ್ಟ್ ಕರ್ನಾಟಕ-2025 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸುವುದನ್ನು 19 ದೇಶಗಳು ಖಚಿತಪಡಿಸಿವೆ. ರಾಜ್ಯದ ಕೈಗಾರಿಕಾ ಚಿತ್ರಣವನ್ನು ಸಮಗ್ರವಾಗಿ ಬದಲಾಯಿಸಲು ನೆರವಾಗಲಿರುವ ಭೂಮಿಕೆ ಸಂಪೂರ್ಣ ಸಜ್ಜುಗೊಂಡಿದೆ. ಕರ್ನಾಟಕವನ್ನು ಜಾಗತಿಕ ಬಂಡವಾಳ ಹೂಡಿಕೆಯ ಪ್ರಮುಖ ತಾಣವನ್ನಾಗಿ ಇಡೀ ವಿಶ್ವಕ್ಕೆ ಪ್ರದರ್ಶಿಸಲು, ಪಾಲುದಾರಿಕೆ ಉತ್ತೇಜಿಸಲು ಮತ್ತು ವಿವಿಧ ಕೈಗಾರಿಕಾ ವಲಯಗಳಲ್ಲಿ ನಾವೀನ್ಯತೆಗೆ ಚಾಲನೆ ನೀಡುವ ಮುಖ್ಯ ಉದ್ದೇಶದಿಂದ ಸಮಾವೇಶ ಯಶಸ್ವಿಗೊಳಿಸಲು ಅವಿರತವಾಗಿ ಶ್ರಮಿಸುತ್ತಿರುವ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ವಿಶ್ವವಾಣಿಗೆ ಸಂದರ್ಶನ ನೀಡಿದ್ದಾರೆ. ಸಂದರ್ಶನದ ಆಯ್ದ ಭಾಗ ಇಲ್ಲಿದೆ.

● ಈ ಬಾರಿಯ ಹೂಡಿಕೆದಾರರ ಸಮಾವೇಶವು ಈ ಹಿಂದಿನ ಸಮಾವೇಶಗಳಿಗಿಂತ ಹೇಗೆ ಭಿನ್ನ?

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿನ ಕಾಂಗ್ರೆಸ್ ಸರಕಾರದ ಆಶ್ರಯದಲ್ಲಿ ನಡೆಯುತ್ತಿರುವ ಈ ಸಮಾವೇಶ ಹಲವು ವಿಧದಲ್ಲಿ ಭಿನ್ನವಾಗಿರುವ ಕಾರಣಕ್ಕೆ ಇಡೀ ವಿಶ್ವದ ಗಮನ ಸೆಳೆಯುತ್ತಿದೆ. ಹಿಂದಿನ ಸರಕಾರಗಳಂತೆ ಹೂಡಿಕೆ ಕುರಿತು ಯಾವುದೇ ಉತ್ಪ್ರೇಕ್ಷಿತ ಅಂಕಿ ಅಂಶಗಳನ್ನು ನಾನು ನೀಡುವುದಿಲ್ಲ. ಕಾರ್ಯಸಾಧ್ಯ ವಾಗುವಂತಹ ಹೂಡಿಕೆ ಯೋಜನೆಗಳಿಗೆ ಸಮ್ಮತಿ ನೀಡುವ ಕಾರ್ಯವೈಖರಿ ನಮ್ಮದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಕಾರ್ಯ ಸಾಧ್ಯವಾದ ಹೂಡಿಕೆಗಳಿಗೆ ಹೆಚ್ಚಿನ ಒತ್ತು ನೀಡುವುದೇ ನನ್ನ ಕೆಲಸದ ವೈಖರಿಯಾಗಿದೆ. ಅಂಕಿ ಅಂಶಗಳ ಅವಾಸ್ತವಿಕ ಚಿತ್ರಣ ನೀಡುವ, ಅನಗತ್ಯವಾಗಿ ಹೆಚ್ಚುಗಾರಿಕೆ ಪ್ರದರ್ಶಿಸುವ ಧೋರಣೆ ನನ್ನದಲ್ಲ. ನಾವು ಆಕಾಶಕ್ಕೆ ಏಣಿ ಹಾಕುವುದಿಲ್ಲ. ಅಂಕಿ ಅಂಶಗಳ

ವಿಶ್ವವಾಣಿ ವಿಶೇಷ

ರಾಜ್ಯದ ಕೈಗಾರಿಕಾ ಚಿತ್ರಣವನ್ನು ಸಮಗ್ರವಾಗಿ ಬದಲಾಯಿಸಲು, ಅಭಿವೃದ್ಧಿಯ ಹೊಸ ಪರಿಕಲ್ಪನೆಗೆ ಈ ಸಮಾವೇಶವು ಮುನ್ನುಡಿ ಬರೆಯಲಿರುವುದರ ಬಗ್ಗೆ ನನಗೆ, ನಮ್ಮ ಸರಕಾರಕ್ಕೆ ದೃಢ ನಂಬಿಕೆ ಇದೆ.

- ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ಹೊಸ ಚಿಂತನೆಯ ವೇದಿಕೆ ವಿನ್ಯಾಸ

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಇನ್ವೆಸ್ಟ್ ಕರ್ನಾಟಕ-2025 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಹೊಸ ಚಿಂತನೆಯ ನಾಯಕತ್ವ, ಉದ್ಯಮ ಮತ್ತು ರಾಜ್ಯ ಸರಕಾರದ ಮಧ್ಯೆ ಪಾಲುದಾರಿಕೆ ಹೆಚ್ಚಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಇನ್ವೆಸ್ಟ್ ಕರ್ನಾಟಕ-2025 ಇಂದು ಉದ್ಘಾಟನೆ

ಇಂದಿನಿಂದ ನಾಲ್ಕು ದಿನಗಳ ಕಾಲ ನಡೆಯುವ ಜಿಮ್ ಇನ್ವೆಸ್ಟ್ ಕರ್ನಾಟಕ-25 ಸಮಾವೇಶವನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ಸಂಜೆ 4ಕ್ಕೆ ಅರಮನೆ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉದ್ಘಾಟಿಸಲಿದ್ದಾರೆ. ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸೇರಿದಂತೆ ರಾಜ್ಯ ಸರಕಾರದ ಇತರ ಸಚಿವರು, ಉದ್ಯಮಿಗಳಾದ ಆನಂದ್ ಮಹೀಂದ್ರ, ಸಜ್ಜನ್ ಜಿಂದಾಲ್, ಗೀತಾಂಜಲಿ ಕಿರ್ಲೋಸ್ಕರ್, ಕಿರಣ್ ಮಜುಂದಾರ್ ಶಾ, ಲ್ಯಾಮ್ ರೀಸರ್ಚ್‌ನ ಡಾ.ಪ್ಯಾಟ್ರಿಕ್ ಲಾರ್ಡ್, ಕೈಗಾರಿಕಾ ಇಲಾಖೆಯ ಉನ್ನತ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ಭರಾಟೆಯಲ್ಲಿ ಕೈಗಾರಿಕಾ ಪ್ರಗತಿಯು ಕಿಂಚಿತ್ತೂ ಮಸುಕಾಗದಂತೆ ಕಟ್ಟೆಚ್ಚರ ವಹಿಸುವೆ.

● ಸಮಾವೇಶದಲ್ಲಿ ಎಷ್ಟು ದೇಶಗಳು ಭಾಗವಹಿಸುತ್ತಿವೆ? ಫಲಶ್ರುತಿ ಏನಾಗಿರಲಿದೆ?

ಸಮಾವೇಶದಲ್ಲಿ 19 ದೇಶಗಳು ಭಾಗವಹಿಸುತ್ತಿದೆ. ಇದು ಕರ್ನಾಟಕವು ಜಾಗತಿಕ ಬಂಡವಾಳ ಹೂಡಿಕೆಯ ಪ್ರಮುಖ ಕೇಂದ್ರವಾಗಿರುವುದಕ್ಕೆ ನಿದರ್ಶನ. ಸಮಾವೇಶದಲ್ಲಿ 9 ಕಂಟ್ರಿ ಪೆವಿಲಿಯನ್‌ಗಳು ಇರಲಿವೆ. 10ಕ್ಕೂ ಹೆಚ್ಚು ದೇಶಗಳ ಜತೆಗಿನ ಸಭೆ- ಸಮಾಲೋಚನೆಗಳು, ದ್ವಿಪಕ್ಷೀಯ ವಾಣಿಜ್ಯ ಬಾಂಧವ್ಯ, ಹೂಡಿಕೆ ಅವಕಾಶಗಳು ಮತ್ತು ಉತ್ಪನ್ನದ ತಯಾರಿಕೆಯಿಂದ ಮಾರಾಟ ಹಂತದವರೆಗಿನ ಜಾಗತಿಕ ಪ್ರಕ್ರಿಯೆಯಲ್ಲಿ ಕರ್ನಾಟಕ ಪ್ರಮುಖ ಪಾತ್ರ ನಿರ್ವಹಿಸುತ್ತಿರುವುದರ ಮೇಲೆ ಗಮನ ಕೇಂದ್ರೀಕರಿಸಲಿವೆ. ಸಮಾವೇಶವನ್ನು ಯಶಸ್ವಿಗೊಳಿಸಲು ರಾಜ್ಯ ಸರಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ. ಸಮಾವೇಶದಿಂದ ರಾಜ್ಯಕ್ಕೆ ವಿದೇಶಿ ನೇರ ಬಂಡವಾಳ ಹೂಡಿಕೆಯ(ಎಫ್‌ಡಿಐ) ಹರಿವು, ಸಂಶೋಧನೆ ಹಾಗೂ ಸಹಯೋಗಗಳು ಹೆಚ್ಚಲಿವೆ. ರಾಜ್ಯದಲ್ಲಿ ತಯಾರಿಕಾ ಚಟುವಟಿಕೆಗಳು ಗಮನಾರ್ಹವಾಗಿ ವಿಸ್ತಾರಗೊಳ್ಳಲಿವೆ ಎಂದು ಬಹುವಾಗಿ ನಿರೀಕ್ಷಿಸಲಾಗಿದೆ.

● ರಾಜ್ಯವು ಹೂಡಿಕೆದಾರರ ಮೆಚ್ಚಿನ ತಾಣವಾಗಿರುವುದಕ್ಕೆ ಕಾರಣಗಳೇನು?

ಸ್ಥಿರತೆಗೆ ಒತ್ತು ನೀಡಿರುವ ನಮ್ಮ ಪ್ರಗತಿಪರ ಸರಕಾರದ ಉದ್ಯಮ ಸ್ನೇಹಿ ಧೋರಣೆ, ಸುಲಲಿತ ಉದ್ಯಮ ವಹಿವಾಟಿಗೆ ಕಲ್ಪಿಸಿರುವ ಪೂರಕ ಪರಿಸರ, ತಂತ್ರಜ್ಞಾನದಲ್ಲಿನ ಮುನ್ನಡೆ, ಪ್ರತಿಭಾನ್ವಿತರ ಲಭ್ಯತೆ, ನವೋದ್ಯಮಗಳು, ಉತ್ತಮ ಮೂಲಸೌಲಭ್ಯಗಳ ಕಾರಣಕ್ಕೆ ರಾಜ್ಯವು ಬಂಡವಾಳ ಹೂಡಿಕೆದಾರರಿಗೆ ಅಚ್ಚುಮೆಚ್ಚಿನ ತಾಣವಾಗಿದೆ. ಸಂಶೋಧನಾ ಕೇಂದ್ರಗಳು, ಆಧುನಿಕ ವಿಮಾನ ನಿಲ್ದಾಣಗಳು, ಉನ್ನತ ದರ್ಜೆಯ ರಸ್ತೆ ಸಂಪರ್ಕದಂತಹ ಮೂಲಸೌಲಭ್ಯಗಳು, ಪ್ರತಿಭಾನ್ವಿತ ತಂತ್ರಜ್ಞರ ಲಭ್ಯತೆ ಮುಂತಾದವು ಕರ್ನಾಟಕವನ್ನು ಹೂಡಿಕೆಯ ಪ್ರಶಸ್ತ ತಾಣವನ್ನಾಗಿಸಿವೆ.

ಇಂದಿನಿಂದ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಅರಮನೆ ಮೈದಾನ ಸಜ್ಜು | ಪಾಲುದಾರಿಕೆ ಉತ್ತೇಜನೆ, ಕೈಗಾರಿಕಾ ವಲಯದಲ್ಲಿ ನಾವೀನ್ಯತೆಗೆ ಚಾಲನೆ

ವಿಶ್ವದ ಹೂಡಿಕೆ ತಾಣವಾಗಿ ಕರ್ನಾಟಕ:ಎಂ.ಬಿ.ಪಾಟೀಲ್

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಒಂದೆಡೆ ಏಷ್ಯಾದಲ್ಲಿಯೇ ಅತಿದೊಡ್ಡ ಏರ್ ಶೋ ನಡೆಯುತ್ತಿದ್ದರೆ, ಇನ್ನೊಂದೆಡೆ ಮಂಗಳವಾರದಿಂದ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಅರಮನೆ ಮೈದಾನ ಸಜ್ಜಾಗಿದೆ. ರಾಜ್ಯದ ಕೈಗಾರಿಕಾ ಚಿತ್ರಣ ಸಮಗ್ರವಾಗಿ ಬದಲಾಯಿಸಲು ನೆರವಾಗಲಿರುವ ಭೂಮಿಕೆ ಸಂಪೂರ್ಣ ಸಜ್ಜುಗೊಂಡಿದೆ. ಕರ್ನಾಟಕವನ್ನು ಜಾಗತಿಕ ಬಂಡವಾಳ ಹೂಡಿಕೆಯ ಪ್ರಮುಖ ತಾಣವನ್ನಾಗಿ ಇಡೀ ವಿಶ್ವಕ್ಕೆ ಪ್ರದರ್ಶಿಸಲು, ಪಾಲುದಾರಿಕೆ ಉತ್ತೇಜಿಸಲು ಮತ್ತು ವಿವಿಧ ಕೈಗಾರಿಕಾ ವಲಯಗಳಲ್ಲಿ ನಾವೀನ್ಯತೆಗೆ ಚಾಲನೆ ನೀಡುವುದು ಮುಖ್ಯ ಉದ್ದೇಶ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ. ವಿಶ್ವವಾಣಿಗೆ ನೀಡಿರುವ ವಿಶೇಷ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

- **ಜಾಗತಿಕ ಕಂಪನಿಗಳ ಭಾಗವಹಿಸುವುದರಿಂದ ರಾಜ್ಯಕ್ಕೆ ಆಗುವ ಪ್ರಯೋಜನಗಳೇನು?**

ಜಾಗತಿಕ ಕಂಪನಿಗಳ ಭಾಗವಹಿಸುವಿಕೆಯು ಉದ್ಯೋಗ ಸೃಷ್ಟಿ, ಕೌಶಲ ಅಭಿವೃದ್ಧಿ ಮತ್ತು ತಂತ್ರಜ್ಞಾನ ವರ್ಗಾವಣೆ ತ್ವರಿತಗೊಳಿಸಲಿದೆ. ಕರ್ನಾಟಕವನ್ನು ಜಾಗತಿಕ ನಾವೀನ್ಯತೆ ವಲಯದ ಜೊತೆ ಮತ್ತಷ್ಟು ಬೆಸೆಯಲಿವೆ. ಭವಿಷ್ಯಕ್ಕೆ ಸಿದ್ಧವಾದ ಮೂಲ ಸೌಲಭ್ಯ ಮತ್ತು ಸುಸ್ಥಿರ ಬೆಳವಣಿಗೆಯ ಮೇಲೆ ಗಮನ ಕೇಂದ್ರೀಕರಿಸಿರುವ ಈ ಪಾಲುದಾರಿಕೆಗಳು ಕರ್ನಾಟಕವನ್ನು ತಯಾರಿಕೆ, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ಹೊಸಯುಗದ ಕೈಗಾರಿಕೆಗಳಿಗೆ ನೆಚ್ಚಿನ ತಾಣವನ್ನಾಗಿಸಲು ನೆರವಾಗಲಿವೆ. ಈ ಸಮಾವೇಶದ ಮುಖ್ಯಧ್ಯೇ ಪ್ರಗತಿಯ ಮರುಪರಿಕಲ್ಪನೆ ಆಗಿದೆ. ಈ ಧ್ಯೇಯವು ತಂತ್ರಜ್ಞಾನ ಆಧಾರಿತ, ಪರಿಸರಸ್ನೇಹಿಯಾದ, ಸುಸ್ಥಿರ ಹಾಗೂ ಸಮತೋಲನದ ಬೆಳವಣಿಗೆ ಉತ್ತೇಜಿಸುವ ರಾಜ್ಯ ಸರಕಾರದ ಬದ್ಧತೆ ಪ್ರತಿಬಿಂಬಿಸಲಿದೆ. ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಸ್ಎಂಇ) ವಹಿವಾಟು ವಿಸ್ತರಣೆಗೆ ನೆರವಾಗಲು ಏರ್ಪಡಿಸಲಿರುವ ಎಸ್ಎಂಇ ಕನೆಕ್ಟ್ – 25 ಕಾರ್ಯಕ್ರಮ ಪ್ರಮುಖ ಆಕರ್ಷಣೆಯಾಗಿರಲಿದೆ. ಎಸ್ಎಂಇ ಗಳ ಉತ್ಪನ್ನಗಳ ಪ್ರದರ್ಶನಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಜಾಗತಿಕ ನವೋದ್ಯಮ ಸವಾಲಿನ ವೆಂಚುರ್ಸ್ ಇನ್ನೊಂದು ವೈಶಿಷ್ಟವಾಗಿರಲಿದೆ. ನವೋದ್ಯಮಗಳು ತಮ್ಮ ಸಾಮರ್ಥ್ಯ ಪ್ರದರ್ಶಿಸಿ ಬಂಡವಾಳ ಹೂಡಿಕೆಯ ನೆರವು ಪಡೆಯಲು ಇದು ವೇದಿಕೆ ಒದಗಿಸಲಿದೆ.

ಇವಿ ಬಳಕೆ ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನು?

ಇವಿ ಬಳಕೆ ಹೆಚ್ಚಿಸಲು ಪರಿಷ್ಕೃತ ಕರಡು ನೀತಿ ಅನಾವರಣಗೊಳಿಸಿರುವೆ. ಇವಿ ಪರಿಷ್ಕೃತ ಕರಡು ನೀತಿಯು 50,000 ಕೋಟಿ ರು. ಮೊತ್ತದ ಬಂಡವಾಳ ಹೂಡಿಕೆ ಆಕರ್ಷಿಸುವ ಗುರಿ ಹೊಂದಿದೆ. ಒಂದು ಲಕ್ಷ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಒಳಗೊಂಡಿದೆ. ಇವಿ ಕ್ಲಸ್ಟರ್‌ಗಳ ನಿರ್ಮಾಣಕ್ಕೆ ಚಿಕ್ಕಬಳ್ಳಾಪುರ ಬಳಿಯ ಗೌರಿಬಿದನೂರು ಹಾಗೂ ಧಾರವಾಡ ಸಮೀಪದ ಚಿಕ್ಕಮಲ್ಲಿಗೆವಾಡದಲ್ಲಿ ಸ್ಥಳ ಗುರುತಿಸಲಾಗಿದೆ. ಕೋಲಾರ್ ಗೋಲ್ಡ್‌ಫೀಲ್ಡ್ (ಕೆಜಿಎಫ್)ನಲ್ಲಿ ಕೈಗಾರಿಕಾ ಕಾರಿಡಾರ್ ಸ್ಥಾಪನೆ ಸಂಬಂಧ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಮತ್ತು ಅನುಷ್ಠಾನ ಟ್ರಸ್ಟ್‌ಗೆ ಮನವಿ ಸಲ್ಲಿಸಿರುವೆ. ರಾಜ್ಯದ ವಿವಿಧೆಡೆ ಕೈಗಾರಿಕಾ ಕಾರಿಡಾರ್ ನಿರ್ಮಾಣಕ್ಕೂ ರೂಪುರೇಷೆ ಸಿದ್ಧಪಡಿಸಲಾಗಿದೆ. ತುಮಕೂರು ಬಳಿ ಚೆನ್ನೈ- ಬೆಂಗಳೂರು ಕೈಗಾರಿಕಾ ಕಾರಿಡಾರ್, ಧಾರವಾಡ ಸಮೀಪ ಬೆಂಗಳೂರು-ಮುಂಬೈ ಕೈಗಾರಿಕಾ ಕಾರಿಡಾರ್‌ಗಳು ಅಸ್ತಿತ್ವಕ್ಕೆ ಬರಲಿವೆ. ವಿದ್ಯುತ್‌ಚಾಲಿತ ವಾಹನಗಳ (ಇವಿ) ಬಳಕೆ ಉತ್ತೇಜಿಸಲು ಸರಕಾರ ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ಮೈಸೂರು ಸೇರಿದಂತೆ ಇತರೆಡೆ ಮಾದರಿ ಇವಿ ನಗರಗಳನ್ನು ಅಭಿವೃದ್ಧಿಪಡಿಸಲಿದೆ.

> ಈ ಸಮಾವೇಶವು ಬಂಡವಾಳ ಹೂಡಿಕೆಗೆ ವೇದಿಕೆಯಾಗಿರುವುದರ ಜೊತೆಗೆ, ಸರಕಾರ ಮತ್ತು ಉದ್ಯಮ ವಲಯದ ನಡುವಣ ಅರ್ಥಪೂರ್ಣ ಸಹಯೋಗಕ್ಕೂ ನೆರವಾಗಲಿದೆ
> – ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

- **ಹೂಡಿಕೆದಾರರನ್ನು ರಾಜ್ಯದತ್ತ ಸೆಳೆಯುವ ಇತರ ಯೋಜನೆಗಳೇನು?**

ಆದ್ಯತಾ ವಲಯಗಳ ಕಡೆಗೆ ಹೂಡಿಕೆದಾರರನ್ನು ಆಕರ್ಷಿಸಲು, ವಿಶ್ವ ದರ್ಜೆಯ ಕೈಗಾರಿಕಾ ಮೂಲಸೌಲಭ್ಯಗಳನ್ನು ಒದಗಿಸಲು, ರಾಜ್ಯದ ಕೈಗಾರಿಕಾ ಬೆಳವಣಿಗೆ ದರವನ್ನು ಸುಸ್ಥಿರವಾಗಿ ಉಳಿಸಿಕೊಳ್ಳಲು ನಮ್ಮ ಸರಕಾರ ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಭೂಮಿಯೂ ಸೇರಿದಂತೆ ಬಳಕೆಗೆ ಸಿದ್ಧವಿರುವ ಕೈಗಾರಿಕಾ ಪಾರ್ಕ್‌ಗಳು ಹೂಡಿಕೆದಾರರನ್ನು ಚುಂಬಕದಂತೆ ಆಕರ್ಷಿಸುತ್ತಿವೆ. ವಿಶ್ವದಾದ್ಯಂತ ಹೂಡಿಕೆದಾರರು ಯಾವಾಗಲೂ ವಿಶ್ವಾಸಾರ್ಹ, ನಂಬಿಕೆಗೆ ಯೋಗ್ಯವಾದ ಮತ್ತು ಸ್ಥಿರ ಪಾಲುದಾರರ ಹುಡುಕಾಟದಲ್ಲಿ ಇರುತ್ತಾರೆ. ಬಹುರಾಷ್ಟ್ರೀಯ ಕಂಪನಿಗಳು ಉದ್ಯಮ - ವಹಿವಾಟು ವಿಸ್ತರಿಸಲು ಭಾರತದತ್ತ ನೋಡುತ್ತಿರುವಾಗ ಸಹಜವಾಗಿಯೇ ಕರ್ನಾಟಕವು ಅವರ ಗಮನ ಸೆಳೆಯುತ್ತಿದೆ. ವಿಶ್ವದ ಮನ್ನಣೆಗೆ ಪಾತ್ರವಾಗಿರುವ ಬೆಂಗಳೂರು ಬ್ರ್ಯಾಂಡ್ ಸಹಜವಾಗಿಯೇ ಹೂಡಿಕೆದಾರರನ್ನು ಸೆಳೆಯುತ್ತಿದೆ. ಐಟಿ ವರಮಾನ ಮತ್ತು ರಫ್ತು ವ್ಯವಹಾರದಲ್ಲಿ ಕರ್ನಾಟಕವು ದೇಶಕ್ಕೇ ಮೊದಲ ಸ್ಥಾನದಲ್ಲಿದ್ದು, ನಮ್ಮಲ್ಲಿ ಕೈಗಾರಿಕಾಸ್ನೇಹಿ ನೀತಿಗಳಿವೆ. ಇಲ್ಲಿರುವಷ್ಟು ಜಾಗತಿಕ ಮಟ್ಟದ ಕಂಪನಿಗಳು ಬೇರೆಲ್ಲೂ ಇಲ್ಲ. ಬೆಂಗಳೂರು ಮಹಾನಗರವು ದೇಶದ ಹೊಸ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಬೆಂಗಳೂರಿನ ಯಶೋಗಾಥೆಯನ್ನು ಇಡೀ ಕರ್ನಾಟಕಕ್ಕೆ ವಿಸ್ತರಿಸಲು ಈ ಹೂಡಿಕೆ ಸಮಾವೇಶ ನೆರವಾಗಲಿವೆ. ರಾಜ್ಯದ ಕೈಗಾರಿಕಾ ಚಿತ್ರಣ ಆಮೂಲಾಗ್ರವಾಗಿ ಬದಲಾಯಿಸಲು, ಅಭಿವೃದ್ಧಿಯ ಹೊಸ ಪರಿಕಲ್ಪನೆಗೆ ಈ ಸಮಾವೇಶವು ಮುನ್ನುಡಿ ಬರೆಯಲಿರುವುದರ ಬಗ್ಗೆ ನನಗೆ, ನಮ್ಮ ಸರಕಾರಕ್ಕೆ ದೃಢ ನಂಬಿಕೆ ಇದೆ.

ವಿಶ್ವವಾಣಿ ಸಂದರ್ಶನ

- **ಹೂಡಿಕೆಗೆ ಗುರುತಿಸಿರುವ ಆದ್ಯತಾ ವಲಯಗಳು ಯಾವುವು?**

ವೈಮಾಂತರಿಕ್ಷ ಮತ್ತು ರಕ್ಷಣೆ, ಎಲೆಕ್ಟ್ರಾನಿಕ್ ಬಿಡಿಭಾಗಗಳು, ವಿದ್ಯುನ್ಮಾನ ವ್ಯವಸ್ಥೆಯ ವಿನ್ಯಾಸ ಹಾಗೂ ತಯಾರಿಕೆ (ಎಲೆಕ್ಟ್ರಾನಿಕ್ ಸಿಸ್ಟಮ್ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್- ಇಎಸ್‌ಡಿಎಂ), ಉಗ್ರಾಣ ಹಾಗೂ ಸರಕು ಸಾಗಣೆ, ವಿದ್ಯುತ್ ಚಾಲಿತ ವಾಹನ, ಜವಳಿ, ಸೆಮಿಕಂಡಕ್ಟರ್, ವೈದ್ಯಕೀಯ ತಂತ್ರಜ್ಞಾನ ಮತ್ತಿತರ ಕ್ಷೇತ್ರಗಳನ್ನು ಆದ್ಯತಾ ವಲಯಗಳೆಂದು ಗುರುತಿಸಲಾಗಿದೆ. ಇನ್ವೆಸ್ಟ್ ಕರ್ನಾಟಕ ಫೋರಂ(ಐಕೆಎಫ್) ಪುನರ್‌ರಚನೆ, ಕಾರ್ಯತಂತ್ರದ ಹೂಡಿಕೆ ಸಮಿತಿ ರಚನೆ ಮತ್ತು ಒಂಬತ್ತು ನಿರ್ದಿಷ್ಟ ವಲಯಗಳ ವಿಷನ್ ಗ್ರೂಪ್ ರಚನೆಯಂತಹ ರಚನಾತ್ಮಕ ಕ್ರಮಗಳು ಹೂಡಿಕೆದಾರರಿಗೆ ಕರ್ನಾಟಕವನ್ನು ಪ್ರಮುಖ ಆದ್ಯತೆಯ ರಾಜ್ಯವನ್ನಾಗಿ ಆಕರ್ಷಿಸಲು ನೆರವಾಗಲಿವೆ. ಸಾಂಪ್ರದಾಯಕವಲ್ಲದ ಕ್ಷೇತ್ರಗಳಿಗೂ ಬಂಡವಾಳ ಹೂಡಿಕೆ ಹರಿದುಬರುವಂತೆ ಮಾಡಲು ನಾನು ಆದ್ಯತೆ ನೀಡಿರುವೆ. ಇದರಿಂದ ಹೂಡಿಕೆಯ ಹರಿವು ಹೆಚ್ಚಲಿದೆ. ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಇದರಿಂದ ಒಟ್ಟಾರೆ ರಾಜ್ಯದ ಆರ್ಥಿಕತೆಯು ಪ್ರಗತಿಪಥದಲ್ಲಿ ಸಾಗಲಿದೆ.

- **ಸಮಾವೇಶದ ರೋಡ್‌ಶೋಗಳಿಗೆ ಯಾವ ರೀತಿ ಸ್ಪಂದನೆ ಸಿಕ್ಕಿದೆ?**

ನಮಗೆ ದೊರೆತಿರುವ ಪ್ರತಿಕ್ರಿಯೆ ಉತ್ತೇಜಕರವಾಗಿದೆ. ಜಪಾನ್, ದಕ್ಷಿಣ ಕೊರಿಯಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ನೆದರ್ಲೆಂಡ್‌ಗೆ ಭೇಟಿ ನೀಡಿ, ಉದ್ಯಮ ದಿಗ್ಗಜರಿಗೆ ಖುದ್ದಾಗಿ ಆಹ್ವಾನ ನೀಡಿರುವೆ. ರಾಜ್ಯದಲ್ಲಿನ ಹೂಡಿಕೆಸ್ನೇಹಿ ವಾತಾವರಣವನ್ನು ಬಹುರಾಷ್ಟ್ರೀಯ ಕಂಪನಿಗಳು, ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರಿಗೆ ಮನವರಿಕೆ ಮಾಡಿಕೊಟ್ಟಿರುವೆ. ಜಾಗತಿಕ ಪಾಲುದಾರರ ಜೊತೆ ಕರ್ನಾಟಕದ ವಾಣಿಜ್ಯ ಬಾಂಧವ್ಯ ಬಲಪಡಿಸುವಲ್ಲಿ ಯಶಸ್ವಿಯಾಗಿರುವ ಈ ರೋಡ್ ಶೋಗಳು, ರಾಜ್ಯವು ಸುಸ್ಥಿರ ಹಾಗೂ ಬಂಡವಾಳ ಹೂಡಿಕೆಯ ಪ್ರಮುಖ ತಾಣವಾಗಿರುವುದನ್ನು ವಿಶ್ವದ ಉದ್ಯಮ ದಿಗ್ಗಜರಿಗೆ ಮನವರಿಕೆ ಮಾಡಿಕೊಡುವಲ್ಲಿ ಸಫಲವಾಗಿವೆ.

- **ವಿಕೇಂದ್ರೀಕೃತ ಕೈಗಾರಿಕಾ ಪ್ರಗತಿಗೆ ನಿಮ್ಮ ಆದ್ಯತೆಗಳೇನು**

ಬೆಂಗಳೂರಿನ ಹೊರಗಿನ ಜಿಲ್ಲೆಗಳಲ್ಲೂ ಉದ್ದಿಮೆಗಳು ಸರಿಸಮನಾಗಿ ಬೆಳವಣಿಗೆಯಾಗಿ ಕೈಗಾರಿಕೆಗಳ ವಿಕೇಂದ್ರಿಕರಣ ಆಗಬೇಕು ಎನ್ನುವುದೂ ನನ್ನ ಮೊದಲ ಆದ್ಯತೆಯಾಗಿದೆ. ಹೊಸ ಮತ್ತು ಪ್ರಗತಿಪರ ಕೈಗಾರಿಕಾ ನೀತಿ ಜಾರಿಗೆ ತರಲು ನಮ್ಮ ಸರಕಾರ ಕಾರ್ಯಪ್ರವೃತ್ತವಾಗಿದೆ. ಈ ನೀತಿಯ ಮೂಲಕ 2 ಹಾಗೂ 3ನೇ ಹಂತದ ನಗರಗಳಲ್ಲಿ ಕೈಗಾರಿಕೀಕರಣ ಉತ್ತೇಜಿಸಲಾಗುತ್ತಿದೆ. ಕೈಗಾರಿಕೆಗಳು ಬೆಂಗಳೂರು ಕೇಂದ್ರಿತವಾಗದಂತೆ ಎಚ್ಚರವಹಿಸಲಾಗುತ್ತಿದೆ. ಇದೇ ಕಾರಣಕ್ಕೆ ದೇಶ-ವಿದೇಶಗಳಲ್ಲಿ ನಡೆದ ರೋಡ್‌ಶೋಗಳಲ್ಲಿ ವಿವಿಧ ಜಿಲ್ಲೆಗಳಲ್ಲಿನ ಇರುವ ಕೈಗಾರಿಕೆ ಸ್ಥಾಪನೆಗೆ ಪೂರಕವಾಗಿರುವ ಮೂಲಸೌಲಭ್ಯ, ಆದ್ಯತೆ ಮೇರೆಗೆ ಪರಿಚಯಿಸಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಒಟ್ಟು 36 ಸಾವಿರ ಕೋಟಿ ರು. ಬಂಡವಾಳ ಹೂಡಿಕೆ ಮಾಡಲು ಸೌರ ಮತ್ತು ಪವನ ವಿದ್ಯುತ್ ಕ್ಷೇತ್ರದ ಎರಡು ಕಂಪನಿಗಳು ಒಲವು ತೋರಿವೆ.

- **ಕ್ವಿನ್ ಸಿಟಿ ಗೆ ಯಾವ ಬಗೆಯಲ್ಲಿ ಪ್ರತಿಕ್ರಿಯೆ ದೊರೆತಿದೆ?**

ಬೆಂಗಳೂರಿನ ಸಮೀಪ ಅಸ್ತಿತ್ವಕ್ಕೆ ಬರುತ್ತಿರುವ ಮಹತ್ವಾಕಾಂಕ್ಷಿ ಕ್ವಿನ್‌ಸಿಟಿ ಯಲ್ಲಿ ಹೂಡಿಕೆ ಮಾಡಲು ಯುರೋಪ್‌ನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಒಲವು ವ್ಯಕ್ತಪಡಿಸಿವೆ. ನಾವು ಪ್ರಕಟಿಸಿರುವ ಕ್ವಿನ್‌ಸಿಟಿ ಹಾಗೂ ಸ್ವಿಫ್ಟ್ ಸಿಟಿ – ಯೋಜನೆಗಳು ನಮ್ಮ ಸರಕಾರದ ದೂರದೃಷ್ಟಿ ಕಾರ್ಯತಂತ್ರದ ನಿದರ್ಶನಗಳಾಗಿವೆ. ಈ ಯೋಜನೆಗಳು ಆಧುನಿಕ ಉದ್ಯಮ ವಲಯಗಳು ಮತ್ತು ನವೋದ್ಯಮಗಳ ಮಧ್ಯೆ ಸಂಪರ್ಕ ಏರ್ಪಡಿಸಿ ರಾಜ್ಯವನ್ನು ಜಾಗತಿಕ ಕೈಗಾರಿಕಾ ನಾಯಕನನ್ನಾಗಿ ಬೆಳೆಸಲಿವೆ. ಕ್ವಿನ್ ಸಿಟಿ (ಜ್ಞಾನ, ಯೋಗಕ್ಷೇಮ ಮತ್ತು ನಾವೀನ್ಯತೆ ನಗರ) ಸಂಶೋಧನೆ, ಶಿಕ್ಷಣ ಮತ್ತು ನಾವೀನ್ಯತೆಗೆ ಕರ್ನಾಟಕದ ಜಾಗತಿಕ ಕೇಂದ್ರವಾಗಿರಲಿದೆ. ಬೆಂಗಳೂರಿನ ಸಮೀಪ 5,800 ಎಕರೆ ಪ್ರದೇಶದಲ್ಲಿ 40,000 ಕೋಟಿ ರು. ಹೂಡಿಕೆಯೊಂದಿಗೆ ಈ ನಗರವು ಹಂತ ಹಂತವಾಗಿ ಅಸ್ತಿತ್ವಕ್ಕೆ ಬರಲಿದೆ. ಮೊದಲ ಹಂತದಲ್ಲಿ 3 ವರ್ಷಗಳಲ್ಲಿ 2,000 ಎಕರೆ ಪ್ರದೇಶದಲ್ಲಿ ಈ ನಗರ ನಿರ್ಮಾಣವಾಗಲಿದೆ. ಇದು ಉನ್ನತ ಶಿಕ್ಷಣ ಮತ್ತು ತಂತ್ರಜ್ಞಾನ ನಾವೀನ್ಯತೆಯ ಜಾಗತಿಕ ಕೇಂದ್ರವಾಗಿ ಕರ್ನಾಟಕದ ವರ್ಚಸ್ಸನ್ನು ಇನ್ನಷ್ಟು ಗಟ್ಟಿಗೊಳಿಸಲಿದೆ. ಇದಕ್ಕೆ ಪೂರಕವಾಗಿ, ಸರ್ಜಾಪುರದಲ್ಲಿ ಸ್ವಿಫ್ಟ್ ಸಿಟಿ ಆರಂಭಿಸಲು ಯೋಜಿಸಲಾಗಿದೆ. ನವೋದ್ಯಮ, ನಾವೀನ್ಯತೆ, ಹಣಕಾಸು-ತಂತ್ರಜ್ಞಾನ ಹಾಗೂ ಅತ್ಯಾಧುನಿಕ ಕೆಲಸದ ಸ್ಥಳಗಳನ್ನು ಒಳಗೊಂಡಿರುವ ಸ್ವಿಫ್ಟ್ ಸಿಟಿ, ನವೋದ್ಯಮಗಳಿಗೆ ಉತ್ತೇಜನ ನೀಡುವ ಜೊತೆಗೆ ಬೆಂಗಳೂರಿನ ಆಸುಪಾಸಿನಲ್ಲಿ ಪ್ರಮುಖ ಕೈಗಾರಿಕಾ ಕೇಂದ್ರವಾಗಿ ಬೆಳೆಯಲಿದೆ.

ತಿ. ನರಸೀಪುರದ ತ್ರಿವೇಣಿ ಸಂಗಮದಲ್ಲಿ 3 ದಿನ ನಡೆಯುವ ಕುಂಭಮೇಳಕ್ಕೆ ಮೊದಲ ದಿನವೇ ರಾಜ್ಯದ ಮೂಲೆ ಮೂಲೆಗಳಿಂದ ಸಾಕಷ್ಟು ಭಕ್ತ ಸಾಗರ ಹರಿದು ಬಂದಿದ್ದು, ಹೊರ ರಾಜ್ಯದಿಂದ ಆಗಮಿಸಿದ ಭಕ್ತರ ದಂಡು ಪುಣ್ಯಸ್ನಾನ ಮಾಡಿ ಅಗಸ್ತ್ಯೇಶ್ವರ,ಗುಂಜಾನರಸಿಂಹಸ್ವಾಮಿ, ಬಲ್ಲೇಶ್ವರ, ಚೌಡೇಶ್ವರಿ ಮತ್ತು ಭಿಕ್ಷೇಶ್ವರ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ನಕ್ಸಲ್ ಲತಾ, ವನಜಾಕ್ಷಿ 3 ದಿನ ಪೊಲೀಸ್ ಕಸ್ಟಡಿಗೆ

ತೀರ್ಥಹಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗ ಮುಂದೆ ಶರಣಾಗಿದ್ದ ಆರು ನಕ್ಸಲರಲ್ಲಿ ಮುಂಡಗಾರು ಲತಾ ಮತ್ತು ವನಜಾಕ್ಷಿ ಅವರನ್ನು ತೀರ್ಥಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಲತಾ ಮತ್ತು ವನಜಾಕ್ಷಿ ವಿರುದ್ಧ ಆಗುಂಬೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ಪ್ರಕರಣ, ಹೊಸನಗರ ಠಾಣೆ ವ್ಯಾಪ್ತಿಯಲ್ಲಿ ಒಂದು ಪ್ರಕರಣ ದಾಖಲಾಗಿತ್ತು. ಈ ಕಾರಣದಿಂದ ತೀರ್ಥಹಳ್ಳಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಗಿತ್ತು. ಹಿರಿಯ ವ್ಯವಹಾರಿಕ ನ್ಯಾಯಾಧೀಶೆ ಗೀತಾಮಣಿ ವಿಚಾರಣೆ ನಡೆಸಿ ಇಬ್ಬರನ್ನೂ 3 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದ್ದಾರೆ.

ಸಮುದಾಯ ಭವನದ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ

ನರಸಿಂಹರಾಜಪುರದ ಜೈಲ್‌ರಸ್ತೆಯ ಭಾವಸಾರ ಕ್ಷತ್ರಿಯ ಸಮಾಜದ ನಿವೇಶನದಲ್ಲಿ 1.50 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಸಮುದಾಯ ಭವನದ ಕಾಮಗಾರಿಗೆ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಶಂಕುಸ್ಥಾಪನೆ ನೆರವೇರಿಸಿದರು.

ನರಸಿಂಹರಾಜಪುರ: ಭಾವಸಾರ ಕ್ಷತ್ರಿಯ ಸಮಾಜದ ಸಮುದಾಯಭವನದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ. ಇದರ ಉದ್ಘಾಟನೆಯನ್ನು ನಾನೇ ನೆರವೇರಿಸುತ್ತೇನೆ ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಜೈಲ್‌ರಸ್ತೆ ವ್ಯಾಪ್ತಿಯ ಭಾವಸಾರ ಕ್ಷತ್ರಿಯ ಸಮಾಜದ ನಿವೇಶನದಲ್ಲಿ 1.50 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಮುದಾಯ ಭವನದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಸಮುದಾಯದಿಂದಲೇ ನಿವೇಶನ ಖರೀದಿ: ಭಾವಸಾರ ಕ್ಷತ್ರಿಯ ಸಮಾಜದವರು ಟೈಲರಿಂಗ್ ವೃತ್ತಿ ಅವಲಂಬಿಸಿದ್ದು ಬಡವರ್ಗದ ಸಮುದಾಯದವರು. ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ನೀಡುವಂತೆ ಹಲವು ಬಾರಿ ಸರಕಾರಕ್ಕೆ ಮನವಿ ಸಲ್ಲಿಸಿದ್ದರು. ಇದು ಸಾಕಾರವಾಗದೆ ಇದ್ದಾಗ ಸಮುದಾಯ ಜನರ ಸಹಕಾರದಿಂದ ಸ್ವಂತ 15ಲಕ್ಷ ವೆಚ್ಚದಲ್ಲಿ ನಿವೇಶನ ಖರೀದಿಸಿರುವುದು ಶ್ಲಾಘನೀಯ . ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 25 ಲಕ್ಷ ಅನುದಾನ ಮಂಜೂರಾಗಿದೆ. ಸಣ್ಣ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಸಿದ್ದರಾಮಯ್ಯ ನವರ ಆಶಯದಂತೆ ಅನುದಾನ ನೀಡಿರುವುದು ಹಿಂದುಳಿದ ವರ್ಗಗಳ ಬಗ್ಗೆ ಅವರಿಗಿರುವ ಕಾಳಜಿ ತೋರಿಸುತ್ತದೆ. ಅದಕ್ಕಾಗಿ ,ಮುಖ್ಯಮಂತ್ರಿಯವರು, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿಯವರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ಎಂ.ಶ್ರೀನಿವಾಸ್ ನುಡಿದರು. ಭಾವಸಾರ ಕ್ಷತ್ರಿಯ ಸಮಾಜದ ಹೇಮಾ ವೆಂಕಟೇಶ್, ಮಮತಾ ನಾಗರಾಜ್ ವಿನಯಶ್ರೀ ಅನಿಲ್, ಅರ್ಚನಾ ಸುನಿಲ್ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

20ಕ್ಕೂ ಅಧಿಕ ಕಾಡಾನೆಗಳು ಪ್ರತ್ಯಕ್ಷ

ಎನ್‌ಆರ್ ಪುರ: ತಾಲೂಕಿನ ವಿಠಲ ಗ್ರಾಮ ಸಮೀಪವಿರುವ ಭದ್ರಾ ಹಿನ್ನೀರಿನ ಬಳಿ ಸುಮಾರು 20ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಕಂಡುಬಂದಿದ್ದು ಸ್ಥಳೀಯರಲ್ಲಿ ಆತಂಕ ಮನೆಮಾಡಿದೆ. ಹುಲಿಸಂರಕ್ಷಿತಾರಣ್ಯಕ್ಕೆ ಹೊಂದಿಕೊಂಡಿರೋ ಭದ್ರಾ ನದಿ ಇಲ್ಲಿನ ಹಿನ್ನೀರಿನ ಬಳಿ ಕಾಡಾನೆಗಳು ನಿರಂತರವಾಗಿ ಕಾಣಸಿಗುತ್ತಿದ್ದು ಭದ್ರಾ ಅಭಯಾರಣ್ಯದಿಂದ ಬಂದಿರೋ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಕಾಡಾನೆಗಳು ಎನ್.ಆರ್.ಪುರದಲ್ಲಿ ಕಳೆದ 2 ತಿಂಗಳಲ್ಲಿ ಮೂವರನ್ನು ಬಲಿ ಪಡೆದಿದ್ದು ಇದೀಗ ಮತ್ತೆ ಹಿನ್ನೀರಿನ ಪ್ರದೇಶದಲ್ಲಿ ಕಾಡಾನೆಗಳ ಹಿಂದು ಕಂಡುಬಂದಿದ್ದು ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.
ಸಂಖ್ಯೆ: ಕಾಇಂ/ಸನೀತು/ಸ.ಇಂ-1,2,5/ಟೆಂಡರು ಪ್ರಕಟಣೆ ಸಂ.11/2024-25 ದಿನಾಂಕ: 10.02.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ: ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆ, 2702 ನೀರು ಕೆರೆಗಳ ದುರಸ್ತಿ ಮತ್ತು 2702 ಏತ ನೀರಾವರಿ ಯೋಜನೆಗಳ ನಿರ್ವಹಣೆ ಮತ್ತು ದುರಸ್ತಿ ನಿರ್ವಹಣೆಯಡಿ ಅನುಮೋದನೆಗೊಂಡ ಕಾಮಗಾರಿಗಳಿಗೆ ಈ ಕೆಳಕಂಡಂತೆ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1, ರ ಮುಖಾಂತರ ಪರಿಶಿಷ್ಟ ಜಾತಿ, ಪರಿಶೀಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2, ಸಾಮಾನ್ಯ(ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.
ಕಾಮಗಾರಿಯ ಹೆಸರು :- ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಆನೇಕಲ್ ತಾಲ್ಲೂಕು, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ದೊಡ್ಡಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ತಾಲ್ಲೂಕು, ನೆಲಮಂಗಲ ತಾಲ್ಲೂಕು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮಾಗಡಿ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ, ಏತ ನೀರಾವರಿ ಯೋಜನೆಯ ವಾರ್ಷಿಕ ನಿರ್ವಹಣ ಕಾಮಗಾರಿ, ಕೆರೆಯ ಜಂಗಲ್ ತೆಗೆಯುವುದು ಹಾಗೂ ಫೀಡರ್ ನಾಲಾ ಅಭಿವೃದ್ಧಿ ಕಾಮಗಾರಿ, ಕೆರೆ ನಿರ್ವಹಣಾ ಕಾಮಗಾರಿ, ಕೆರೆ ಕೋಡಿಯ ಹತ್ತಿರ ಡೈವರ್ಷನ್ ಕಾಲುವರಗೆ ದುರಸ್ತಿಪಡಿಸುವ ಕಾಮಗಾರಿಗಳನ್ನು ಒಳಗೊಂಡಂತೆ **ಒಟ್ಟು 33 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**
ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.2.54 (ಕನಿಷ್ಠ) & ರೂ.15.22 (ಗರಿಷ್ಠ)** ಇಎಂಡಿ: **ರೂ.5,300 (ಕನಿಷ್ಠ) & ರೂ.38,100 (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 01 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)
(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ : **10.02.2025 ಸಂಜೆ 16.00** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ **17.02.2025 ಸಂಜೆ 16.00** ಗಂಟೆಯವರೆಗೆ. (3) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **17.02.2025 ಸಂಜೆ 16.30** ಗಂಟೆಯವರೆಗೆ, (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **18.02.2025 ಸಂಜೆ 17.00** ಗಂಟೆಗೆ, (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.
ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 1 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ವಾ.ಪ್ರ/4949/2024-25 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ವಿಭಾಗ, ಚಿಕ್ಕಬಳ್ಳಾಪುರ
ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ:18/ 2024-25 ದಿನಾಂಕ: 05.02.2025
ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಕಟ್ಟಡ ನಿರ್ಮಾಣ/ಸಂಚಾರ ಗಣತಿ ಕಾಮಗಾರಿಗಳಿಗೆ ಕೆ.ಡಬ್ಲ್ಯು-1,4ರಂತೆ ಕಾರ್ಯಪಾಲಕ ಇಂಜಿನಿಯರ್, ಲೋ.ಇ ರವರು ರಾಜ್ಯಪಾಲರ ಪರವಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು https://kppp.karnataka.gov.in **ಕ್ರಮ ಸಂಖ್ಯೆ: 1 ರಿಂದ 11 ರವರೆಗೆ ದಿನಾಂಕ: 13.02.2025 ವರೆಗೆ ಕ್ರಮ ಸಂಖ್ಯೆ: 12 ರಿಂದ 17 ರವರೆಗೆ ದಿನಾಂಕ: 21.02.2025 ರಂದು ರವರೆಗೆ ಪಡೆದು ಸಂಜೆ 4.00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ.** ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:367/ಕೆಎಸ್‌ಎಂಸಿಎ/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ
ಮುರುಘಾಮಠದ ಹತ್ತಿರ, ಸವದತ್ತಿ ರಸ್ತೆ ಧಾರವಾಡ-580008
Ph : 0836-2448157, 2970324 email: apmcdharwad@rediffmail.com
ಸಂ:ಕೃಮಾಇ:ಕೃಉಮಾಸ(ಧಾ): 759 /2024-25 ದಿನಾಂಕ: 05/02/2025
ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ ವತಿಯಿಂದ 2023-24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಸಮಿತಿಯ ಹಳೆ ಮಾರುಕಟ್ಟೆ ಪ್ರಾಂಗಣದಲ್ಲಿನ ರೈತಭವನ ಕಟ್ಟಡವನ್ನು ನೆಲಸಮಗೊಳಿಸಿ ವಾಣಿಜ್ಯ ಮಳಿಗೆಗಳ ಸಂಕೀರ್ಣ ನಿರ್ಮಿಸುವ ಕಾಮಗಾರಿಗೆ (Indent No-APMC/2024-25/OW/WORK_INDENT425 ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **12/03/2025** ಸಂಜೆ 5.00 ರವರೆಗೆ. ಹೆಚ್ಚಿನ ನಿಯಮ ಹಾಗೂ ಮಾಹಿತಿಗಾಗಿ ಕನಾಟಕ ಸರ್ಕಾರದ https://kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/- (ಎ. ಪಿ. ಪಾಟೀಲ) ಕಾರ್ಯದರ್ಶಿ(ಪ್ರ) ಕೃ.ಉ.ಮಾ.ಸ. ಧಾರವಾಡ
ಸಹಿ/- (ಶ್ರೀ ಮಹಾದೇವಪ್ಪ ಡಿ. ಚಬನೂರ) ಆಡಳಿತಾಧಿಕಾರಿಗಳು ಕೃ.ಉ.ಮಾ.ಸ. ಧಾರವಾಡ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/944/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಲಬುರ್ಗಾ. ಕೇಂದ್ರ ಕಛೇರಿ ಕುಕನೂರು, ಕೊಪ್ಪಳ- 583232. ಇ-ಮೇಲ್: apmckukanuru@rediffmail.com, apmcyelburga@gmail.com ದೂ: (08534) 230403
ಸಂ:ಕೃಮಾಇ:ಕೃ.ಉ.ಮಾ.ಸ.ಯ:[ಕು] :ಅಭಿಕೆ : 886 : 2024-25 ದಿನಾಂಕ:07/02/2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತೇದಾರರಿಂದ http://kppp.karnataka.gov.in ಮೂಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಯಲಬುರ್ಗಾ, ಜಿಲ್ಲೆ ಕೊಪ್ಪಳ ಇವರ ಕಾರ್ಯಾಲಯದಿಂದ ಹಾಗೂ ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಸಹಾಯವಾಣಿ:080-22485867 ಅಥವಾ 080-25501216ನ್ನು ಮಾಹಿತಿಯನ್ನು ಪಡೆಯಬಹುದು.
ಯಲಬುರ್ಗಾ ಸಮಿತಿಯ ಚಿಕ್ಕೊಪ್ಪ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 2850 ಮೇ.ಟನ್ ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ನಿರ್ಮಾಣ ಕಾಮಗಾರಿಯ ಇಂಡೆಂಟ್ ಸಂಖ್ಯೆ :- **APMC/2024-25/OW/WORK_INDENT435,** ಅಂದಾಜು ಮೊತ್ತ ರೂ.9,69,09705-00 ಗುತ್ತಿಗೆದಾರರ ಕ್ವಾರಿಸ್ ದಿನಾಂಕ: **kppp portal** ನಲ್ಲಿರುವಂತೆ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:17-02-2025 ಬೆಳಿಗ್ಗೆ 11-00 ಗಂಟೆಗೆ, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:10-03-2025 ಸಾಯಂಕಾಲ 4-00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12-03-2025 ಸಾಯಂಕಾಲ 4-30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:27-03-2025ಬೆಳ್ಳಿಗ್ಗೆ 11-00ಗಂಟೆಗೆ(ಸಾಧ್ಯವಾದಲ್ಲಿ, ಮುಂದಿನ ದಿನಾಂಕ ತಿಳಿಸಲಾಗುವುದು). ಸದರಿ ಟೆಂಡರ್‌ನಲ್ಲಿ ಏನಾದರೂ ಬದಲಾವಣೆಯಾದಲ್ಲಿ ಇ-ಪೋರ್ಟಲ್‌ನಲ್ಲಿ ನೋಡಿಕೊಳ್ಳತಕ್ಕದ್ದು.
ಸಹಿ/-(ಗುರುಸ್ವಾಮಿ ಎಸ್, ಗುಡಿ) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಯಲಬುರ್ಗಾ ಕೇಂದ್ರ ಕಛೇರಿ ಕುಕನೂರ
ಸಹಿ/-(ಹೆಚ್ ಪ್ರಾಣೇಶ) ಆಡಳತಾಧಿಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಲಬುರ್ಗಾ ಕೇಂದ್ರ ಕಛೇರಿ ಕುಕನೂರ
ಡಿಐಪಿಆರ್/ಕೊಪ್ಪಳ/745/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/ /2024-25/ 3378 ದಿ:-04-02-2025
ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THIS WORK IS RESERVED FOR SC CATOGERY					
1	PWD/2024-25/BD/WORKINDENT18102	4.80	2	PWD/2024-25/OW/WORK_INDENT18279	2.50
THIS WORK IS RESERVED FOR CATOGERY II-A					
3	PWD/2024-25/BR/WORK_INDENT18695	5.00			
General Work					
4	PWD/2024-25/BD/WORK_INDENT17852	4.50	5	PWD/2024-25/BD/WORK_INDENT16046	73.00

1 ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2 ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ **ದಿನಾಂಕ: 15/02/2025.(16.00 ಗಂಟೆಗೆ)**. 3 ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ **ದಿನಾಂಕ:17/02/2025. (10.30 ಗಂಟೆಗೆ)**. 4 ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ **ದಿನಾಂಕ: KPP Portal** ನಲ್ಲಿ ಇರುವಂತೆ
NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **kppp Portal** ನಲ್ಲಿ ನೊಡಿಕೊಳ್ಳಬಹುದು
ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/520 ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/854 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop
ಸಂಖ್ಯೆ. ಕಹಾಮ/ಖರೀದಿ/ಟೆಂಡರ್-736/2024-25 ದಿ.04.02.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(KMF/2024-25/SE3201 & KMF/2024-25/IND1252)
ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು ವತಿಯಿಂದ ಕಹಾಮದ ನಂದಿನಿ ಐಸ್ ಕ್ರೀಂ ಪ್ಲಾಂಟ್., ಬಳ್ಳಾರಿ ಘಟಕಕ್ಕೆ ಅವಶ್ಯಕವಿರುವ ವಿವಿಧ ಪ್ಯಾಕಿಂಗ್ ಸಾಮಗ್ರಿಗಳು/ದಿನ ಬಳಕೆ ವಸ್ತುಗಳನ್ನು ಖರೀದಿಸಲು ಹಾಗೂ ಸೇವೆಯನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ದಾಖಲಾತಿಯುನ್ನು E-Proc ವೆಬ್‌ಸೈಟ್ https://kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದೆ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ಸಂ.8046010000/ 8068948777.
ಟೆಂಡರ್ ಶುರುವಾಗುವ ದಿನಾಂಕ-10.02.2025, ಪೂರ್ವಬಾವಿ ಸಭೆ -13.02.2025 ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಅಪ್‌ಲೋಡಿಂಗ್ ಮಾಡಲು ಕಡೆಯ ದಿನಾಂಕ - 17.02.2025 ಸಂಜೆ 5.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ- 18.02.2025 ಸಂಜೆ 5.10 ಗಂಟೆಗೆ, ವಾಣಿಜ್ಯ ಬಿಡ್ ತೆರೆಯುವ ದಿನಾಂಕ- ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
No:SABVMCRI/E-TENDER/MS/11/2024-25 Date:10.02.2025
ಟೆಂಡರ್ ಅಧಿಸೂಚನೆ
ವಿಷಯ: ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ ಅಧೀನದಲ್ಲಿರುವ ಪ್ರಯೋಗಶಾಲಾಗಳಿಗೆ ಅವಶ್ಯವಿರುವ STAINS, CHEMICALS ಗಳನ್ನು ಖರೀದಿಸಲು ಕೆಟಿಪಿಪಿ ನಿಯಮದಂತೆ ಇ-ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ
1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 07.02.2025 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 11.02.2025 ರ ಸಂಜೆ 05.30 ಗಂಟೆವರೆಗೆ. 3.ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 17.02.2025 ರ ಸಂಜೆ 05.30 ಗಂಟೆವರೆಗೆ. 4. ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಮೊದಲನೆ ಲಕೋಟೆ): 19.02.2025 ರ ಬೆಳಗ್ಗೆ 10.30 ಗಂಟೆ.
ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ.
ಸಹಿ/- ನಿರ್ದೇಶಕರು ಹಾಗೂ ಡೀನ್
DIPR/CP/4939/Zen/2024-25 ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ, ಬೆಂಗಳೂರು

5ನೇ ತಲೆಮಾರಿನ ಸ್ವದೇಶಿ ನಿರ್ಮಿತ ಎಎಂಸಿಎ ಯುದ್ಧವಿಮಾನ | 2 ವರ್ಷದಲ್ಲಿ ತಂತ್ರಜ್ಞಾನ ಪರೀಕ್ಷೆ ಸಾಧ್ಯತೆ, 13 ಸಾವಿರ ಕೋಟಿ ಅನುದಾನ

ಸ್ವದೇಶದಲ್ಲೇ ಸಜ್ಜಾಗುತ್ತಿದೆ 5ನೇ ಜನರೇಷನ್ ಯುದ್ಧವಿಮಾನ

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ರಕ್ಷಣಾ ಕ್ಷೇತ್ರದಲ್ಲಿಯೂ ಆತ್ಮನಿರ್ಭರ ಭಾರತದ ಪರಿಕಲ್ಪನೆಯಲ್ಲಿರುವ ರಕ್ಷಣಾ ಇಲಾಖೆ ಇದೀಗ ದೇಶದ ಮೊದಲ ಐದನೇ ಜನರೇಷನ್ ಯುದ್ಧವಿಮಾನವನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದು, ಮುಂದಿನ ಮೂರು ವರ್ಷದಲ್ಲಿ ಮೊದಲ ಅತ್ಯಾಧುನಿಕ ತಂತ್ರಜ್ಞಾನದ, ಐದನೇ ಜನರೇಷನ್‌ನ ಮೊದಲ ಯುದ್ಧ ವಿಮಾನ ಸಜ್ಜಾಗಲಿದೆ.

ಹೌದು, ಬೆಂಗಳೂರಿನಲ್ಲಿರುವ ಎಡಿಎ (ಏರೋನಾಟಿಕ್ಸ್ ಡೆವಲಪ್‌ಮೆಂಟ್ ಏಜೆನ್ಸಿ) ಈಗಾಗಲೇ ಭಾರತದ ಐದನೇ ಜನರೇಷನ್ ಹಾಗೂ ಸ್ಟೀಲ್ತ್ ಫೈಟರ್ ಜೆಟ್ (ರಹಸ್ಯ ಯುದ್ಧ ವಿಮಾನ) ಮೇಲಿನ ಸಂಶೋಧನೆಯನ್ನು ನಡೆಸಿದ್ದು, ಈಗಾಗಲೇ ಪೂರ್ಣ ಪ್ರಮಾಣದಲ್ಲಿ ಮಾಡೆಲ್ ಸಜ್ಜಾಗಿದೆ. ಇದೇ ಮೊದಲ ಬಾರಿಗೆ ಈ ಮಾದರಿ ಯುದ್ಧ ವಿಮಾನವನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಗಿದೆ. ಈ ಮೂಲಕ ಅತ್ಯಾಧುನಿಕ ತಂತ್ರಜ್ಞಾನದ ಯುದ್ಧವಿಮಾನದಲ್ಲಿಯೂ ಭಾರತ ಸ್ವಾವಲಂಬನೆ ಸಾಧಿಸಲು ಸಜ್ಜಾಗಿದೆ ಎನ್ನುವ ಸಂದೇಶವನ್ನು ವಿಶ್ವಕ್ಕೆ ರವಾನಿಸಿದೆ.

ಏರ್ ಶೋದಲ್ಲಿ ಎಎಂಸಿಎ ಪ್ರದರ್ಶನ: ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ 15ನೇ ಏರೋ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ಎಡಿಎ ಸಿದ್ಧಪಡಿಸಿರುವ ಅಡ್ವಾನ್ಸ್ಡ ಮೀಡಿಯಂ ಕಂಬ್ಯಾಟ್ ಏರ್‌ಕ್ರಾಫ್ಟ್ (ಎಎಂಸಿಎ)ಯನ್ನು ಪ್ರದರ್ಶನಕ್ಕೆ ಇಡಲಾಗಿದೆ. ಮೂಲಗಳ ಪ್ರಕಾರ ಕೇಂದ್ರ ಸರಕಾರ ಈಗಾಗಲೇ ಈ ಯುದ್ಧವಿಮಾನದ ಸಂಶೋಧನೆ ಹಾಗೂ ತಯಾರಿಕೆಗೆಂದು 13 ಸಾವಿರ ಕೋಟಿ ರು. ಅನುದಾನ ಮೀಸಲಿಟ್ಟಿದ್ದು, ಹಂತಹಂತವಾಗಿ ಅನುದಾನ ಬಿಡುಗಡೆಯಾಗುತ್ತಿದೆ.

2028ಕ್ಕೆ ಮೊದಲ ವಿಮಾನ ಹಾರಾಟಕ್ಕೆ ಸಿದ್ಧ: ಈಗಾಗಲೇ ಮಾದರಿ ಸಜ್ಜಾಗಿದ್ದು, ಸಂಶೋಧನೆ ಮುಂದುವರಿದಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ 2028ರ ವೇಳೆಗೆ ಮೊದಲ ಏರ್‌ಕ್ರಾಫ್ಟ್ ಪರೀಕ್ಷಾರ್ಥ ಹಾರಾಟಕ್ಕೆಂದು ಹಸ್ತಾಂತರಿಸುವ ಸಾಧ್ಯತೆಯಿದೆ. ಬಳಿಕ ಎದುರಾಗುವ ಸಾಧಕ-ಬಾಧಕವನ್ನು ಪರಿಶೀಲಿಸಿ ಮುಂದಿನ 10 ವರ್ಷದೊಳಗೆ 18 ಯುದ್ಧ ವಿಮಾನಗಳನ್ನು ಸಿದ್ಧಪಡಿಸುವ ಗುರಿಯನ್ನು ಎಡಿಎ ಹಾಕಿಕೊಂಡಿದೆ. ಈ ಮೂಲಕ ಸಂಪೂರ್ಣ ಸ್ವದೇಶಿ ನಿರ್ಮಿತ ಅತ್ಯಾಧುನಿಕ ಯುದ್ಧವಿಮಾನವನ್ನು ಸಿದ್ಧಪಡಿಸಿದ ಇತಿಹಾಸ ನಿರ್ಮಿಸಲಿದೆ ಎನ್ನಲಾಗಿದೆ.

ಸಂಪೂರ್ಣ ಸ್ವದೇಶಿ ನಿರ್ಮಿತ: ಸಜ್ಜಾಗಿರುವ ಐದನೇ ಜನರೇಷನ್ ಯುದ್ಧವಿಮಾನಕ್ಕೆ ಸಂಬಂಧಿಸಿದಂತೆ 'ವಿಶ್ವವಾಣಿ'ಯೊಂದಿಗೆ ಮಾತನಾಡಿದ ಎಡಿಎ ವಿಜ್ಞಾನಿಗಳು, ಈ ಯುದ್ಧವಿಮಾನ ಡಬಲ್ ಎಂಜಿನ್ ಹೊಂದಿದ್ದು, ಸುಮಾರು 6.5 ಸಾವಿರ ಲೀಟರ್ ಇಂಧನ ಶೇಖರಣೆಗೆ ಅವಕಾಶವಿದೆ. ಇದರೊಂದಿಗೆ ರಹಸ್ಯ ಯುದ್ಧವಿಮಾನವಾಗಿರುವುದರಿಂದ, ರಾಡಾರ್ ಕಣ್ಣಿನಿಂದ ತಪ್ಪಿಸಿಕೊಳ್ಳಲು ಹಾಗೂ ಫ್ರಂಟ್ ಫೇಸ್‌ನಲ್ಲಿ ಶತ್ರುಗಳಿಗೆ ಕಾಣಿಸದ ರೀತಿಯಲ್ಲಿ ವಿನ್ಯಾಸ ಮಾಡಲಿದ್ದು, ಇದಕ್ಕಾಗಿ ವಿಶಿಷ್ಟ ಬಣ್ಣವನ್ನು ಬಳಸಲಾಗುತ್ತದೆ. ಇದರೊಂದಿಗೆ, ಈವರೆಗೆ ಭಾರತದಲ್ಲಿರುವ ಯುದ್ಧವಿಮಾನಗಳಲ್ಲಿ ಕ್ಷಿಪಣಿ ಹಾಗೂ ಇನ್ನಿತರ ಶಸ್ತ್ರಾಸ್ತ್ರಗಳನ್ನು ವಿಮಾನದ ಹೊರಗಡೆ ಕಾಣಿಸುವ ಹಾಗೆ ವಿನ್ಯಾಸ ಮಾಡಲಾಗಿತ್ತು. ಆದರೆ ಇದೇ ಮೊದಲ ಬಾರಿಗೆ ಎಎಂಸಿಎದಲ್ಲಿ ಬಹುಪಾಲು ಶಸ್ತ್ರಾಸ್ತ್ರಗಳು ವಿಮಾನದೊಳಗೆ ಇರಲಿದೆ. ಇದರಿಂದಾಗಿ, ಶತ್ರುಗಳಿಗೆ ಕ್ಷಿಪಣಿಗಳ ಸ್ಪಷ್ಟ ಮಾಹಿತಿ ಸಿಗುವುದಿಲ್ಲ ಎಂದು ವಿವರಿಸಿದ್ದಾರೆ.

ಚಿತ್ರಗಳು: ಸುಧಾರ್ ದೇವರಾಜ್

ವೈಮಾನಿಕ ಪ್ರದರ್ಶನದ ಸ್ಥಳದಲ್ಲಿ ಪ್ರದರ್ಶನಕ್ಕಿಡಲಾದ ಅಡ್ವಾನ್ಸ್ಡ ಮೀಡಿಯಂ ಕಂಬ್ಯಾಟ್ ಏರ್‌ಕ್ರಾಫ್ಟ್‌ನ ಮಾದರಿ ವೀಕ್ಷಕರ ಗಮನ ಸೆಳೆಯುತ್ತಿದೆ.

ಮುಖ್ಯಾಂಶಗಳು

- ಭಾರತದ ಮೊದಲ ಐದನೇ ಜನರೇಷನ್‌ನ ಯುದ್ಧ ವಿಮಾನ
- ಈ ಯುದ್ಧ ವಿಮಾನದ ತಯಾರಿಗೆ ಕೇಂದ್ರ ಸರಕಾರದಿಂದ 13 ಸಾವಿರ ಕೋಟಿ ರು. ಅನುದಾನ
- ರಹಸ್ಯ ಕಾರ್ಯಾಚರಣೆ, ಶತ್ರುಗಳ ರಾಡಾರ್ ಕಣ್ಣಿಗೆ ಬೀಳದಂತೆ ತಂತ್ರಜ್ಞಾನ ಅಭಿವೃದ್ಧಿ
- 2028ರ ವೇಳೆಗೆ ತಂತ್ರಜ್ಞಾನ ಪರೀಕ್ಷೆಗೆ ಮೊದಲ ವಿಮಾನ ಸಿದ್ಧ
- 2034ರ ವೇಳೆಗೆ ಸ್ಕ್ವಾಡ್ರನ್ ಸಿದ್ಧ (18 ಯುದ್ಧವಿಮಾನಗಳ ತಂಡ)
- 360ಕ್ಕೂ ಹೆಚ್ಚು ಕಾಂಪೊನೆಂಟ್‌ಗಳನ್ನು ಒಳಗೊಂಡಿರುವ ಯುದ್ಧ ವಿಮಾನ

ಎಎಂಸಿಎ ಯುದ್ಧ ವಿಮಾನದ ವಿಶೇಷ ಏನು?

- ಈ ಯುದ್ಧ ವಿಮಾನ ಸುಮಾರು 25ಸಾವಿರ ಟನ್ ತೂಗುತ್ತದೆ
- 6.5 ಟನ್ ಇಂಧನ ಸಾಮರ್ಥ್ಯವನ್ನು ಹೊಂದಿರಲಿದೆ.
- ರಾಡಾರ್ ಕಣ್ಣಿನಿಂದ ತಪ್ಪಿಸಿಕೊಂಡು ಮುನ್ನುಗ್ಗಬಲ್ಲ ಭಾರತದ ಮೊದಲ ಯುದ್ಧವಿಮಾನ
- ಚೀನಾ, ಅಮೆರಿಕ, ರಷ್ಯಾ ಬಳಿಯಿರುವ 5ನೇ ಜನರೇಷನ್ ಯುದ್ಧ ವಿಮಾನಕ್ಕೆ ಸರಿಸಾಟಿಯಾಗಿರುವ ಬಲಿಷ್ಠ ವಿಮಾನ
- ಎಐ ಆಧಾರಿತ ಎಲೆಕ್ಟ್ರಾನಿಕ್ ಪೈಲಟ್ ಬೋರ್ಡ್ ಹೊಂದಿರಲಿದೆ.

ಎಚ್‌ಎಎಲ್ ಮೇಲಿನ ಒತ್ತಡ ತಗ್ಗಿಸಲು ಕ್ರಮ

ಸಾಮಾನ್ಯವಾಗಿ ಎಡಿಎ ಯುದ್ಧವಿಮಾನ ಹಾಗೂ ಹೆಲಿಕಾಪ್ಟರ್‌ಗಳ ತಂತ್ರಜ್ಞಾನ ಅಭಿವೃದ್ಧಿಪಡಿಸು ತ್ತದೆ. ಆದರೆ ಈ ಎಲ್ಲದರ ನಿರ್ಮಾಣ ಕಾರ್ಯ ಎಚ್‌ಎಎಲ್‌ನಿಂದಲೇ ನಡೆಯಬೇಕು. ಬಹುತೇಕ ವಿಮಾನಗಳ ನಿರ್ಮಾಣ ಕಾರ್ಯ ತಡವಾಗುತ್ತಿರುವುದು ಈ ಹಂತದಲ್ಲಿ. ಎಚ್‌ಎಎಲ್ ಬಳಿಯಿರುವ ವರ್ಕ್ ಆರ್ಡರ್‌ನಿಂದಾಗಿ, ಎಲ್ಲ ಕಾಮಗಾರಿಗಳು ನಿಧಾನವಾಗುತ್ತಿದೆ. ಆದ್ದರಿಂದ ಎಡಿಎ ಸಿದ್ಧಪಡಿಸಲಿರುವ ಈ ಎಎಂಸಿಎ ಯುದ್ಧವಿಮಾನಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸುವ ಬಗ್ಗೆ ರಕ್ಷಣಾ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ. ಬೆಂಗಳೂರಿನಲ್ಲಿ ಎರಡು ಪ್ರತ್ಯೇಕ ಜಾಗವನ್ನು ನೀಡಲು ತೀರ್ಮಾನಿಸಲಾಗಿದೆ. ಈ ಸ್ಥಳದಲ್ಲಿ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಯುದ್ಧವಿಮಾನ ಹಾಗೂ ಎಡಿಎದ ಇನ್ನಿತರ ಸಂಶೋಧನಾ ಕಾರ್ಯಗಳನ್ನು ಆರಂಭಿಸಲು ಸೂಚನೆ ನೀಡಲಾಗಿದೆ.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಮೆಟ್ರೋ ದರ ಏರಿಕೆ ಬಗ್ಗೆ ರಾಜ್ಯ ಕಾಂಗ್ರೆಸ್ ಸರಕಾರದ ಮೇಲೆ ಗೂಬೆ ಕೂರಿಸಲು ಪ್ರಯತ್ನಿಸುತ್ತಿರುವ ರಾಜ್ಯ ಬಿಜೆಪಿ ನಾಯಕರು ಅಜ್ಞಾನಿಗಳಂತೆ ನಟಿಸುತ್ತಿದ್ದಾರೆ.ಮೆಟ್ರೋ ಕಾಯಿದೆ ಪ್ರಕಾರ ದರ ಏರಿಕೆ ಮಾಡಲು ಒಂದು ಸಮಿತಿ ಇರುತ್ತದೆ. ಸಮಿತಿಯ ಶಿಫಾರಸನ್ನು ಮೆಟ್ರೋ ಮಂಡಳಿ ಸಭೆಯಲ್ಲಿ ಮಂಡಳಿ ಅಧ್ಯಕ್ಷರಾದ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಗಳು ಅಂತಿಮಗೊಳಿಸುತ್ತಾರೆ. ಇದರಲ್ಲಿ ರಾಜ್ಯ ಸರಕಾರದ ಪಾತ್ರವೇ ಇರುವುದಿಲ್ಲ.

ವಿನೋದ್, ಬೆಂಗಳೂರು

ಮೊದಲು ಬಿಜೆಪಿ ಸರಕಾರ ಇದ್ದಾಗ ರೋಡಿನಲ್ಲಿ ಕುಳಿತು ಬೆಲೆ ಏರಿಕೆ ಬಗ್ಗೆ ಹೋರಾಡಿದ್ದವರು ಯಾರು ಸ್ವಾಮಿ..?? ಈಗ..?

ವಿಶ್ವವಾಣಿ ಕ್ಲಬ್ ಹೌಸ್
11.02.2025
ಕಾರ್ನರ್
ಸಂಜೆ: 06.55 ರಿಂದ 08.05ರವರೆಗೆ
ಮಂಗಳವಾರ
ಶ್ರೀನಿವಾಸ ಶೆಟ್ಟಿ
ವಿಷಯ
ಶ್ರೀನಿವಾಸನ ಕಗ್ಗಗಳು

vishwavani.news

ಮೇಘಪಥದಲ್ಲಿ ಬಾನಾಡಿಗಳ ರಂಗು ರಂಗೋಲಿ: ಬೆಂಗಳೂರಿನಲ್ಲಿ ಆರಂಭಗೊಂಡ 15ನೇ ಅವೃತ್ತಿಯ ಏರೋ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ಭಾರತದ ಯುದ್ಧ ವಿಮಾನಗಳ' ಝಲಕ್.

ತುಮಕೂರಿನ ಎಚ್‌ಎಎಲ್ ಘಟಕದಲ್ಲಿ ಸಜ್ಜಾದ ಮೊದಲ ಹೆಲಿಕಾಪ್ಟರ್

ಎಲ್‌ಯುಎಚ್ ತವರಲ್ಲೇ ಮೊದಲ ಪ್ರದರ್ಶನ

ಅಪರ್ಣಾ ಎ.ಎಸ್. ಬೆಂಗಳೂರು

ಏಷ್ಯಾದ ಅತಿದೊಡ್ಡ ಹೆಲಿಕಾಪ್ಟರ್ ತಯಾರಿಕಾ ಘಟಕ ಎನಿಸಿರುವ ತುಮಕೂರಿನ ಎಚ್‌ಎಎಲ್ ತಯಾರಿಕ ಘಟಕಕ್ಕೂ ಈ ಬಾರಿಯ ಏರೋ ಇಂಡಿಯಾ ಪ್ರದರ್ಶನಕ್ಕೂ ವಿಶಿಷ್ಟ ಸಂಬಂಧವಿದೆ. ಅದೇನೆಂದರೆ, 2022ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆಗೊಂಡಿದ್ದ ಘಟಕದಲ್ಲಿಯೇ ತಯಾರಾದ ಎಲ್‌ಯುಎಚ್ ಹೆಲಿಕಾಪ್ಟರ್ ಇದೇ ಮೊದಲ ಬಾರಿಗೆ ತಮ್ಮ ಪ್ರದರ್ಶನವನ್ನು ನೀಡಿದೆ.

ಭಾರತ ವಾಯುಸೇನೆ ಅತ್ಯಾಧುನಿಕ ತಂತ್ರಜ್ಞಾನವಿರುವ ಹೆಲಿಕಾಪ್ಟರ್ ಎನಿಸಿರುವ ಎಲ್‌ಯುಎಚ್ ಮೊದಲ ಬಾರಿಗೆ ತನ್ನ ಪ್ರದರ್ಶನವನ್ನು ನೀಡಿದೆ. ವಿವಿಧ ಬಳಕೆಗೆ ಅನುಕೂಲವಾಗುವ ಈ ಹೆಲಿಕಾಪ್ಟರ್ ಸಿಯಾಚಿನ್‌ನಂತಹ ಪ್ರದೇಶದಲ್ಲಿಯೂ ಯಾವುದೇ ತೊಂದರೆಯಿಲ್ಲದೇ ಕಾರ್ಯನಿರ್ವಹಿಸುವುದು ವಿಶೇಷ. ಮೇಲ್ದರ್ಜೆಗೆ ಏರಿರುವ ಈ ಹೆಲಿಕಾಪ್ಟರ್ ತನ್ನ ಮೊದಲ ಪ್ರದರ್ಶನವನ್ನು ಏರೋ ಇಂಡಿಯಾದ ಉದ್ಘಾಟನಾ ಕಾರ್ಯಕ್ರಮದಲ್ಲಿ ನೀಡಿತು. ತುಮಕೂರಿನ ಗುಬ್ಬಿ ತಾಲೂಕಿನ ಬಿದರೆ ಕಾವಲ್ ಸಂದ್ರ ಉತ್ಪಾದಕ ಘಟಕದಲ್ಲಿ ತಯಾರಿಸಿರುವ ಎಲ್‌ಯುಹೆಚ್ ಹೆಲಿಕಾಪ್ಟರ್ ವೀಕ್ಷಕರ ಮನಸೂರೆಗೊಳಿಸಿತು. ಮೇಕ್ ಇನ್ ಇಂಡಿಯಾ ರೀತಿ ಮೇಕ್ ಕರ್ನಾಟಕ ಎಂಬಂತೆ ಸರಕಾರಿ ಸ್ವಾಮ್ಯದ ಎಚ್‌ಎಎಲ್ ಸಂಪೂರ್ಣ ದೇಶಿಯ ತಂತ್ರಜ್ಞಾನ ಬಳಸಿಕೊಂಡಿರುವ ನೂತನ ಹೆಲಿಕಾಪ್ಟರ್ ಅಭಿವೃದ್ಧಿಪಡಿಸಿದ್ದು, ವೈಮಾನಿಕ ಪ್ರದರ್ಶನದಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸಿತು.

ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದ ತುಮಕೂರಿನ ಎಚ್‌ಎಎಲ್ ಹೆಲಿಕಾಪ್ಟರ್ ತಯಾರಿಕಾ ಘಟಕದಲ್ಲಿ ತಯಾರಾಗಿರುವ ಈ ಹೆಲಿಕಾಪ್ಟರ್ ಸಂಪೂರ್ಣ ಸ್ವದೇಶಿ ನಿರ್ಮಿತವಾಗಿದೆ. ಪ್ರತಿ ಬಿಡಿಭಾಗಗಳನ್ನು ಭಾರತದಲ್ಲಿಯೇ ತಯಾರಿಸಲಾಗಿದೆ. ಸದ್ಯ ಭಾರತೀಯ ವಾಯುಸೇನೆಯಲ್ಲಿ ಹಳೆಯದಾಗಿರುವ ಚೀತಾ, ಚೇತಕ್ ಹೆಲಿಕಾಪ್ಟರ್ ಬದಲಿಗೆ ಈ ಹೆಲಿಕಾಪ್ಟರ್‌ಗಳನ್ನು ಬಳಸುವ ಲೆಕ್ಕಾಚಾರದಲ್ಲಿ ವಾಯುಸೇನೆಯಿದೆ. ಇದೇ ರೀತಿ ಈ ಹೆಲಿಕಾಪ್ಟರ್‌ಗಳನ್ನು ಇತರೆ ದೇಶಗಳಿಗೂ ಮಾರಾಟ ಮಾಡುವ ಮೂಲಕ ಲಾಭದ ಲೆಕ್ಕಾಚಾರದಲ್ಲಿ ಎಚ್‌ಎಎಲ್‌ಯಿದೆ.

5ಜಿ ತಂತ್ರಜ್ಞಾನ ಅಳವಡಿಕೆ

ಐದನೇ ತಲೆಮಾರಿನ ಎಲ್‌ಯುಎಚ್ ಹೆಲಿಕಾಪ್ಟರ್‌ನಲ್ಲಿ ಗಾಜಿನ ಕಾಕ್‌ಪಿಟ್ ಹಾಗೂ ಹೊಸ ಡಿಸ್‌ಪ್ಲೇಗಳು ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿವೆ. ಪ್ರತಿ ಗಂಟೆಗೆ 235 ಕಿ.ಮೀ ವೇಗದಲ್ಲಿ ಚಲಿಸಲಿದ್ದು, ಗರಿಷ್ಠ 350 ಕಿ.ಮೀ ವ್ಯಾಪ್ತಿ ಹೊಂದಿದೆ. ದೇಶದ ಸೇನಾಪಡೆಗಳಿಗೆ 20 ಸಾವಿರ ಅಡಿಗಳಿಗಿಂತ ಎತ್ತರ ಮಟ್ಟದಲ್ಲಿ ಹಾರಾಟ ನಡೆಸುವ ಬೆರಳೆಣಿಕೆ ಹೆಲಿಕಾಪ್ಟರ್‌ಗಳಲ್ಲಿ ಇದೂ ಒಂದಾಗಿರುವುದು ವಿಶೇಷ.

ವಿಶೇಷ ಏನು?

- ಸಿಯಾಚಿನ್ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಅತ್ಯಾಧುನಿಕ ತಂತ್ರಜ್ಞಾನ
- ಕಡಿಮೆ ಅಂತರದಲ್ಲಿ ತಿರುವು ಪಡೆಯಲು ಹಾಗೂ ಸುರಕ್ಷಿತವಾಗಿ ಇಳಿಸಲು ಸಾಧ್ಯ
- 500 ಕೆಜಿ ತೂಕದ ಯುದ್ಧಸಾಮಗ್ರಿ ಅಥವಾ ಇತರೆ ಸಾಮಗ್ರಿ ಹೋರುವ ಸಾಮರ್ಥ್ಯ
- ಎಲ್‌ಯುಎಚ್ ಕೇವಲ ಸಾಮಗ್ರಿ ಸಾಗಣೆ ಮಾತ್ರವಲ್ಲದೇ ಇಬ್ಬರು ಪೈಲಟ್ ಸೇರಿ 10 ಮಂದಿಗೆ ಆಸನದ ವ್ಯವಸ್ಥೆ .

ಏರೋ ಇಂಡಿಯಾ ಶೋನಲ್ಲಿ ರಾಜನಾಥ್ ಸಿಂಗ್ ಅಭಿಮತ

ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರದತ್ತ ಭಾರತ

ಬೆಂಗಳೂರು: ಏರೋ ಇಂಡಿಯೋ ಶೋ ಕೇವಲ ಜಾಗತಿಕ ರಕ್ಷಣಾ ವಲಯದಲ್ಲಿ ಕೊಳ್ಳುವ ಮತ್ತು ಮಾರಾಟಗಾರರ ಸಂಬಂಧಗಳಿಗೆ ಸೀಮಿತವಾಗಿಲ್ಲ. ಅದಕ್ಕೂ ಮೀರಿ ಸಂಶೋಧನೆ ಮತ್ತು ಅಭಿವೃದ್ಧಿ, ಉತ್ಪಾದನೆ ಪರಿವರ್ತನೆ ಹೊಂದಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

ಯಲಹಂಕದ ವಾಯುನೆಲೆಯಲ್ಲಿ ಸಾಗುತ್ತಿರುವ ಏರೋ ಇಂಡಿಯಾ 15ನೇ ಆವೃತ್ತಿ ಉದ್ಘಾಟಿಸಿ ಮಾತನಾಡಿದ ಅವರು, ಏರ್ ಶೋ ಸಂಬಂಧವೂ ಕೇವಲ ವಹಿವಾಟಿನ ಮಟ್ಟದಲ್ಲಿದೆ. ನಾವು ಸಂಶೋಧನೆ, ಅಭಿವೃದ್ಧಿ ಮತ್ತು ಉತ್ಪಾದನೆ ಗುರಿ ಜತೆಗೆ ಸಹಯೋಗವನ್ನು ಮಾಡಬೇಕಿದೆ. ಈ ಬಾರಿಯ ಏರೋಶೋದಲ್ಲಿ ವೈಮಾನಿಕ ಸಂಸ್ಥೆಗಳು ಮತ್ತು ಮಿಲಿಟರಿ ಸಾಮರ್ಥ್ಯಗಳ ಪ್ರದರ್ಶನದ ಜತೆಗೆ ಹಲವು ಪ್ರಮುಖ ಘೋಷಣೆ ಮತ್ತು ಸಹಭಾಗಿತ್ವಗಳು ನಡೆಯಲಿದೆ. ನಾಲ್ಕುದಿನಗಳ ಕಾಲ ಸಾಗುವ ಈ ಶೋದಲ್ಲಿ 450 ದೇಶಿಯ ಮತ್ತು 50ಕ್ಕೂ ಹೆಚ್ಚು ವಿದೇಶಿ ವಿಮಾನಗಳ ಸಾಮರ್ಥ್ಯ ಪ್ರದರ್ಶನ ನಡೆಸಲಿದೆ ಎಂದು ಹೇಳಿದರು.

ಏರೋ ಇಂಡಿಯಾವೂ ಭಾರತದ ವೈಮಾನಿಕ ಮತ್ತು ರಕ್ಷಣಾ ವಲಯದಲ್ಲಿ ಬಲವಾದ ಬೆಳವಣಿಗೆಯನ್ನು ತೋರಿಸುತ್ತಿದೆ. ಇದರ ಪ್ರಮುಖ ಉದ್ದೇಶಗಳಲ್ಲಿ ಒಂದು ರಕ್ಷಣಾ ಸಹಯೋಗ, ಸಂಶೋಧನೆ ಮತ್ತು ಉತ್ಪಾದನೆಯಲ್ಲಿ ಅಂತಾರಾಷ್ಟ್ರೀಯ ಸಹಭಾಗಿತ್ವದಲ್ಲಿ ಬಲಗೊಳಿಸುವುದು ಇದರ ಪ್ರಮುಖ ಧ್ಯೇಯವಾಗಿದೆ. ವೈಮಾನಿಕ ಮತ್ತು ರಕ್ಷಣಾ ವಲಯದಲ್ಲಿನ ಭಾರತದ ಸಾಮರ್ಥ್ಯವನ್ನು ಪ್ರದರ್ಶಿಸುವುದರೊಂದಿಗೆ ಲಕ್ಷಾಂತರ ಅವಕಾಶಗಳಿಗೆ ಇದು ವೇದಿಕೆಯಾಗಲಿದೆ. ಭಾರತವೂ ತಾಂತ್ರಿಕ ಸುಧಾರಣೆ ಮತ್ತು ರಕ್ಷಣಾ ಉತ್ಪಾದನೆಯಲ್ಲಿ ಜಾಗತಿಕ ಪ್ರಾಬಲ್ಯ ಸಾಧಿಸುತ್ತ ಬದ್ಧತೆ ಹೊಂದಿದೆ. ವಿದೇಶಗಳೊಂದಿಗೆ ನಮ್ಮ ಸಂಬಂಧವು ಪರಸ್ಪರ ಪ್ರಯೋಜನ ಮತ್ತು ಶಾಂತಿಯ ಭರವಸೆಯೊಂದಿಗೆ ವೇಗವಾಗಿ ಬೆಳವಣಿಗೆ ಕಾಣುತ್ತಿದೆ ಎಂದು ಅಭಿಪ್ರಾಯಪಟ್ಟರು.

ಸ್ವಾವಲಂಬನೆಯಾಗುವತ್ತ ಭಾರತ

ಭಾರತದ ರಕ್ಷಣಾ ಬಜೆಟ್‌ನಲ್ಲಿ ಭಾರೀ ಏರಿಕೆ ಕುರಿತು ಮಾತನಾಡಿದ ಅವರು, ಕಳೆದ 10 ವರ್ಷದಲ್ಲಿ ಬಜೆಟ್ ಹಂಚಿಕೆಯಲ್ಲಿ ಒಂದೇ ವರ್ಷದಲ್ಲಿ 9.3ರಷ್ಟು ಅಂದರೆ 6.18 ಲಕ್ಷ ಕೋಟಿ ಏರಿಕೆ ಕಂಡಿದೆ. ಶೇ 80ರಷ್ಟು ರಕ್ಷಣಾ ಉತ್ಪಾದನೆಯು ದೇಶಿಯವಾಗಿ ನಡೆಯುತ್ತಿದ್ದು, ಇದು ಭಾರತ ಸ್ವಾವಲಂಬನೆಯಾಗುವತ್ತ ಬಲಗೊಳ್ಳುತ್ತಿದೆ. ಎಚ್‌ಎಎಲ್ ಇದೀಗ ಟಾಟಾ ಅಡ್ವಾನ್ಸ್ ಸಿಸ್ಟಂ ಜತೆಗೆ ಜಂಟಿ ಸಹಯೋಗಕ್ಕೆ ಮುಂದಾಗಿದ್ದು, 295 ವಿವಿಧ ರಕ್ಷಣಾ ಸಾಧನ ಬಿಡಿಭಾಗಗಳ ಅವಿಷ್ಕಾರಕ್ಕೆ ಮುಂದಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ, ಭಾರತದ ರಕ್ಷಣಾ ವಲಯವೂ ಕೇವಲ ಅಗತ್ಯ ವಲಯ ಎಂಬುದಾಗಿ ಕಂಡಿಲ್ಲ. ಬದಲಾಗಿ ಇದು ದೇಶದ ಅಭಿವೃದ್ಧಿಗೆ ಪ್ರಮುಖ ಕೊಡುಗೆದಾರ ಎಂದು ಇದೀಗ ಗುರುತಿಸಿಕೊಳ್ಳುತ್ತಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಸಮೂಹ ಸಾರಿಗೆ ಬಳಕೆಗೆ ಉತ್ತೇಜಿಸಬೇಕಿದೆ

ಸಾರಿಗೆ ದರ, ಪೆಟ್ರೋಲ್-ಡೀಸೆಲ್ ದರ, ಹೊಸ ವಾಹನ ಖರೀದಿಯ ಮೇಲೆ 1,000 ರು. ಹೊಸ ಸೆಸ್ ಹೀಗೆ ಹತ್ತಾರು ಬೆಲೆಗಳ ಹೆಚ್ಚಳದಿಂದಾಗಿ ಹೈರಾಣಾಗಿರುವ ಜನರ ಮೇಲೆ ಇದೀಗ ಮೆಟ್ರೊ ದರ ಹೊರೆ ಹಾಕಲಾಗಿದೆ. ಇದೀಗ ದೇಶದಲ್ಲೇ ಅತ್ಯಂತ ದುಬಾರಿಯಾದ ಮೆಟ್ರೋ ಸೇವೆಯನ್ನು ನೀಡುತ್ತಿರುವ ರಾಜ್ಯ ಎಂಬ ಕುಖ್ಯಾತಿಗೆ ಕರ್ನಾಟಕ ಪಾತ್ರವಾಗಿದೆ. ಬೆಂಗಳೂರು ಮೆಟ್ರೋ ಪ್ರಯಾಣ ದರವು ದೆಹಲಿ ಮೆಟ್ರೊಗಿಂತ ಹೆಚ್ಚಾದಂತಾಗಿದೆ. ಬೆಂಗಳೂರಿಗೆ ಹೋಲಿಕೆ ಮಾಡಿದರೆ ದೆಹಲಿ ಮೆಟ್ರೋ ವಿಸ್ತರಣೆ ಸಾಕಷ್ಟು ದೊಡ್ಡದು. ದೆಹಲಿ ಮೆಟ್ರೋ ಸೇವೆಯಲ್ಲಿ ಎಂಡ್ ಟು ಎಂಡ್ ಕನೆಕ್ಟಿವಿಟಿ ಇದೆ. (ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ನೇರ ಮೆಟ್ರೋ ಸಂಪರ್ಕ) ಆದರೆ ಬೆಂಗಳೂರಿನಲ್ಲಿ ಆ ರೀತಿ ಇಲ್ಲ. ಆದರೂ ಪ್ರಯಾಣ ದರ ಅಲ್ಲಿಗಿಂತ ಇಲ್ಲಿ ಜಾಸ್ತಿ ಆಗಿದೆ. ದುರದೃಷ್ಟಕರ ಸಂಗತಿಯೆಂದರೆ ಮೆಟ್ರೋ ಯೋಜನೆಗಳನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲು ವಿಫಲವಾಗಿ ಯೋಜನಾ ವೆಚ್ಚವು ದುಪ್ಪಟ್ಟಾಗಿದೆ. ದುಬಾರಿ ವೆಚ್ಚದಿಂದ ಮೆಟ್ರೊ ಯೋಜನೆಯು ಕಾರ್ಯಸಾಧುವಲ್ಲದ ಹಾಗೆ ನಿರ್ವಹಣೆ ಮಾಡುವ ದುರವಸ್ಥೆಯಾಗಿದೆ. 18 ಕಿ.ಮಿ ಹಳದಿ ಮಾರ್ಗವು ಸಿದ್ಧವಾಗಿದ್ದರೂ ರೈಲು ಬೋಗಿಗಳು ಇಲ್ಲದೆ ಸೇವೆ ನೀಡಲು ಸಾಧ್ಯವಾಗುತ್ತಿಲ್ಲ. ಮುಂದಾಲೋಚನೆಯ ಕೊರತೆ ಹಾಗೂ ಸೂಕ್ತ ತಯಾರಿ ಇಲ್ಲದ ಕಾರಣ ಸಂಚಾರ ಆರಂಭಿಸಲು ಸಾಧ್ಯವಾಗದೆ ಮೆಟ್ರೊ ನಿಗಮವು ಕೋಟ್ಯಂತರ ರುಪಾಯಿ ನಷ್ಟ ಅನುಭವಿಸುತ್ತಿರುವುದೇ ಇದಕ್ಕೆ ತಾಜಾ ಉದಾಹರಣೆ. ನಿಗಮದ ಅಧಿಕಾರಿಗಳ ಅದಕ್ಷತೆಗೆ ನಗರದ ನಾಗರಿಕರು ದಂಡ ತೆರುವಂತಾಗಿದೆ. ಬೆಂಗಳೂರು ಮೆಟ್ರೊದಲ್ಲಿ ಇತ್ತೀಚೆಗೆ ಯಾವುದೇ ಹೆಚ್ಚಿನ ಸೌಲಭ್ಯ ಕಲ್ಪಿಸಿಲ್ಲ. ಬಹಳಷ್ಟು ಜನ ನಿಂತೇ ಪ್ರಯಾಣ ಮಾಡುತ್ತಾರೆ. ದೆಹಲಿ ಹಾಗೂ ಇನ್ನು ಕೆಲವು ಮೆಟ್ರೊಗಳಲ್ಲಿ ಕಲ್ಪಿಸಿರುವ ಹಲವು ಸೌಲಭ್ಯಗಳನ್ನು ನಮ್ಮ ಮೆಟ್ರೊದಲ್ಲಿ ಒದಗಿಸಿಲ್ಲ. ಇದೆಲ್ಲವನ್ನೂ ಪರಿಶೀಲಿಸಿ ಕೇಂದ್ರ ಹಾಗೂ ರಾಜ್ಯ ಸರಕಾರವು ಮೆಟ್ರೊ ಟಿಕೆಟ್ ದರ ಏರಿಕೆ ಕುರಿತು ಪುನರ್ ಪರಿಶೀಲನೆ ನಡೆಸಿ, ಬೆಂಗಳೂರಿಗರ ಬದುಕನ್ನು ಸಹನೀಯಗೊಳಿಸಬೇಕು. ಮೆಟ್ರೊ ಸೇವೆಯಲ್ಲಿ ವೃತ್ತಿಪರತೆ ಅಳವಡಿಸಿಕೊಂಡು ಕಾಲಬದ್ಧ ಅವಧಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು. ನಗರದ ನಾಗರಿಕರನ್ನು ಸಮೂಹ ಸಾರಿಗೆ ಬಳಕೆಗೆ ಉತ್ತೇಜಿಸುವ ಕ್ರಮಗಳಿಗೆ ನಿಗಮ ಮುಂದಾಗಬೇಕು.

ಸೊಂಪಾದಕೀಯ

ಕಾಸ್-ಟ್ಲೀ ಮೆಟ್ರೋ

ದೇಶದ ಮೆಟ್ರೋ ನಗರಗಳಲ್ಲಿ ಒಂದಾದ ಬೆಂಗಳೂರಿನಲ್ಲಿ ಈಗ ಮೆಟ್ರೋನದ್ದೇ ಸದ್ದು. ಇಲೆಕ್ಟ್ರಿಕ್ ಮೆಟ್ರೋ ರೈಲುಗಳು ಸದ್ದು ಹೇಗೆ ಮಾಡುತ್ತವೆ ಅಂತ ಕೇಳಬೇಡಿ. ಇದು ಏರಿಕೆ ಕಂಡಿರುವ ಮೆಟ್ರೋ ದರದ ಬಗೆಗಿನ ಮಾತು. ಇತ್ತೀಚೆಗೆ ತಾನೇ ಬಸ್ ಪ್ರಯಾಣದ ಬಿಸಿ ಅನುಭವಿಸಿದ್ದ ಜನರಿಗೆ ಈಗ ಮೆಟ್ರೋ ಕೂಡಾ ಬರೆ ಹಾಕಿದೆ. ಹಾಗಾಗಿ ಬೆಂಗಳೂರಿನ ಜನರು ಸರಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ಬೆಂಗಳೂರಿನಲ್ಲಿ ಅನೇಕ ಜನ ಮೆಟ್ರೋ ಅವಲಂಬಿಸಲು ಕಾರಣ 'ಟ್ರಾಫಿಕ್ ಸಮಸ್ಯೆ ಇರಲ್ಲ, ಬೇಗ ಗುರಿ ತಲುಪಬಹುದು' ಅಂತ. ಅದನ್ನೇ ಬಂಡವಾಳ ಮಾಡಿಕೊಂಡಿರುವ ಮೆಟ್ರೋ ಈಗ ಬೇಕಾಬಿಟ್ಟಿ ಬೆಲೆ ಏರಿಕೆ ಮಾಡಿ ಮಜಾ ನೋಡುತ್ತಿದೆ. ಹೆಸರಿಗೆ 46 ಪರ್ಸೆಂಟ್ ಏರಿಕೆ ಅಂದಿದ್ದರೂ ಹಲವು ಕಡೆ ಅವೈಜ್ಞಾನಿಕವಾಗಿ ಬೆಲೆ ಏರಿಕೆ ಮಾಡಲಾಗಿದೆ. ಮೆಟ್ರೋ ಪ್ರಯಾಣ ಅನುಕೂಲಕರ ಆದರೂ ಜನ ಹೋಗುವ ಜಾಗಕ್ಕೆ ಸರಿಯಾಗಿ ಮೆಟ್ರೋ ಸಿಗಲ್ಲ. ಮೆಟ್ರೋ ಸ್ಟೇಷನ್‌ಗೆ ಹೋಗೋಕೆ ಮತ್ತು ಅಲ್ಲಿ ಇಳಿದ ಮೇಲೆ ತಮಗೆ ಬೇಕಾದ ಜಾಗಕ್ಕೆ ಹೋಗೋಕೆ ಮತ್ತೆ ಆಟೋ, ಬಸ್ಸುಗಳ ಮೇಲೆ ಜನ ಅವಲಂಬಿತರಾಗಿದ್ದಾರೆ. ಆದರೂ ಮೆಟ್ರೋ ಬಳಸುತ್ತಿದ್ದ ಜನ ಈಗ ಸುತ್ತಿ ಬಳಸಿ ಬೆಲೆ ಏರಿಕೆ ಬಿಸಿ ಮೆಟ್ರೋಗೂ ತಗುಲಿರೋದರ ಬಗ್ಗೆ ಕಿಡಿ ಕಾರುತ್ತಿದ್ದಾರೆ. ಏರಿಕೆ ಕಂಡಿರುವ ಮೆಟ್ರೋ ದರಗಳಿಂದಾಗಿ ಈಗ ಕೇವಲ ಒಬ್ಬರೇ ಪ್ರಯಾಣ ಮಾಡೋ ಸಿಂಗಲ್‌ಗಳಿಗೆ ಮಾತ್ರ ಮೆಟ್ರೋ ಸೂಕ್ತ ಎನ್ನುವಂತಾಗಿದೆ. ಫ್ಯಾಮಿಲಿ ಅಥವಾ ಸ್ನೇಹಿತರ ಜತೆ ಹೋಗೋದಾದ್ರೆ ಆಟೋ, ಕ್ಯಾಬ್‌ಗಳೇ ವಾಸಿ ಎನ್ನುವಂಥ ಪರಿಸ್ಥಿತಿ ಬಂದಿದೆ. ಸ್ವಲ್ಪ ತಡ ಆದ್ರೂ ಪರವಾಗಿಲ್ಲ, ಮೆಟ್ರೋ ಸಹವಾಸ ಬೇಡ ಅಂತಿದ್ದಾರೆ ಬೆಂಗಳೂರಿನ ಪ್ರಯಾಣಿಕರು. ಅಲ್ಲದೆ, ನಿಮ್ಮ ಸ್ವಂತ ವಾಹನಗಳನ್ನು ಮನೆಯಲ್ಲೇ ಬಿಟ್ಟು ಸಾರ್ವಜನಿಕ ಸಾರಿಗೆ ಬಳಸಿ ಅಂತ ಪುಂಗುತ್ತಿದ್ದ ಮೆಟ್ರೋ ಈಗ ದರ ಏರಿಸಿರೋದು ನೋಡಿದ್ರೆ, ಜನ ಮತ್ತೆ ಮನೆಯಲ್ಲೇ ನಿಂತು ಧೂಳು ಹಿಡಿದಿರುವ ತಮ್ಮ ಟೂ ವೀಲರ್ ಮತ್ತು ಫೋರ್ ವೀಲರ್‌ಗಳತ್ತ ಮುಖ ಮಾಡಿದ್ರೆ ಅಚ್ಚರಿ ಏನಿಲ್ಲ.

ಸಂಪಾದಕರ ಸದ್ಯಶೋಧನೆ

ಅಪಾಯದಲ್ಲಿರುವ ವಿವಾಹ

ಜಪಾನಿನಲ್ಲಿ ಯಾವುದಾದರೂ ಒಂದು ಸಂಸ್ಥೆ (Institution) ಅಪಾಯದ ಅಂಚಿನಲ್ಲಿ ಇದೆಯೆಂದರೆ ಅದು ಮದುವೆ. ಜಪಾನಿನ ಪುರುಷರ ಮದುವೆಯಾಗುವ ಸರಾಸರಿ ವಯೋಮಾನ 30 ವರ್ಷ ಮತ್ತು ಮಹಿಳೆಯರದ್ದು 28 ವರ್ಷ. 75 ವರ್ಷಗಳ ಹಿಂದೆ (1950), ಇದು ಅನುಕ್ರಮವಾಗಿ 26 ಮತ್ತು 23 ವರ್ಷಗಳಿತ್ತು. ಜಪಾನಿನಲ್ಲಿ ಅವಿವಾಹಿತರ ಸಂಖ್ಯೆ ಕಳೆದ ಕಾಲು ಶತಮಾನದಲ್ಲಿ ಗಣನೀಯವಾಗಿ ಜಾಸ್ತಿಯಾಗಿದೆ. ಜಪಾನಿನ ಯುವಕರಲ್ಲಿ ಮದುವೆಯನ್ನು ಮುಂದೂಡುವ ಪ್ರವೃತ್ತಿ ಕಂಡುಬರುತ್ತಿದೆ. ಯುವತಿಯರೂ ಮದುವೆಗೆ ಅನಾಸಕ್ತಿ ತೋರುತ್ತಿರುವುದು ಇತ್ತೀಚಿನ ಟ್ರೆಂಡ್. ಯುವಕರಿಗಿಂತ ಯುವತಿಯರು ಉತ್ತಮ ಉದ್ಯೋಗ ಗಿಟ್ಟಿಸಿಕೊಳ್ಳುತ್ತಿರುವುದರಿಂದ ಅವರಲ್ಲಿ ವಿವಾಹವಾಗಬೇಕೆನ್ನುವ ಮನೋಭಾವ ಕ್ಷೀಣಿಸುತ್ತಿದೆ. ಟೋಕಿಯೋದಂಥ ನಗರದಲ್ಲಿ ಸಾಮಾನ್ಯ ವ್ಯಕ್ತಿಗೆ ಜೀವನ ನಿರ್ವಹಣೆ ಸುಲಭವಲ್ಲ. ಅದರಲ್ಲೂ 10-12 ದಿನಗಳ ಸಂಬಳ ಸಿಂಗಲ್ ಬೆಡ್‌ರೂಮ್ ಅಪಾರ್ಟ್‌ಮೆಂಟ್ ಬಾಡಿಗೆಗೆ ವ್ಯಯವಾಗುತ್ತದೆ. ಮದುವೆಯಾದರೆ ಜೀವನ ನಿರ್ವಹಣೆ ಬಲು ದುಸ್ತರ ಎಂಬುದು ಮುಖ್ಯ ಕಾರಣ. ಇಬ್ಬರ ಸಂಬಳವೂ ಸಂಸಾರ ನಿರ್ವಹಣೆಗೆ ಸಾಕಾಗುವುದಿಲ್ಲ. ಅದರಲ್ಲೂ ಮಕ್ಕಳಾದ ನಂತರ ಖರ್ಚುಗಳನ್ನು ನಿಭಾಯಿಸುವುದು ಇನ್ನೂ ಕಷ್ಟ. ಈ ಕಾರಣದಿಂದ ಮದುವೆ ಎಂಬುದು ಲಕ್ಸುರಿಯೇ. ಅದರಲ್ಲೂ ಹೆಂಡತಿ ಉದ್ಯೋಗದಲ್ಲಿ ಇರದಿದ್ದರೆ, ಸಂಸಾರವನ್ನು ನಿಭಾಯಿಸುವುದು ಕಷ್ಟವೇ. ಅನೇಕ ಕಂಪನಿಗಳು ತಮ್ಮ ಸಿಬ್ಬಂದಿಗೆ ಆಫೀಸಿನಲ್ಲಿಯೇ ವಾಸ್ತವ್ಯ ವ್ಯವಸ್ಥೆಯನ್ನು ಮಾಡಿರುವುದರಿಂದ, ಅಂಥವರು ವಿವಾಹವಾಗುವುದನ್ನು ಮುಂದೂಡುತ್ತಾ ಹೋಗುವುದು ಸಾಮಾನ್ಯ. ನಿರುದ್ಯೋಗ ಮತ್ತು ಕಡಿಮೆ ಸಂಬಳದ ಉದ್ಯೋಗವೂ ಅಲ್ಲಿನ ಯುವಕ-ಯುವತಿಯರು ಮದುವೆಯಾಗದಿರಲು ಇನ್ನೊಂದು ಕಾರಣ. ಕೈತುಂಬಾ ದುಡಿಯದ ಯುವಕರನ್ನು ಮದುವೆಯಾಗಲು ಅಲ್ಲಿನ ಹುಡುಗಿಯರು ನಿರಾಕರಿಸುತ್ತಿರುವುದು ಸಾಮಾನ್ಯ. ಜಪಾನಿನಲ್ಲಿ ಅರೇಂಜ್ಡ್ ಮ್ಯಾರೇಜ್‌ಗೆ ಯುವಕ-ಯುವತಿಯರು ಅನುಮತಿ ನೀಡುತ್ತಿಲ್ಲ. ಇದಕ್ಕೆ ಅಮೆರಿಕ ಮತ್ತು ಯುರೋಪಿನ ಪ್ರಭಾವವೂ ಕಾರಣವಿರಬಹುದು. ನಗರೀಕರಣದ ಒತ್ತಡದಿಂದಾಗಿ ವಿವಾಹ ವಿಚ್ಛೇದನವೂ ಜಾಸ್ತಿಯಾಗುತ್ತಿರುವುದು ಕಳವಳಕಾರಿ. 30-40 ವರ್ಷಗಳ ಹಿಂದೆ, ಯುವಕ-ಯುವತಿಯರಿಗೆ ತಮ್ಮ ತಂದೆ-ತಾಯಂದಿರ ಸಹಕಾರ, ಬೆಂಬಲವಾದರೂ ಸಿಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ 20 ವರ್ಷ ದಾಟಿದ ಯುವಕ-ಯುವತಿಯರು ತಮ್ಮ ತಂದೆ-ತಾಯಿಯಿಂದ ಬೇರೆಯಾಗಿ ಸ್ವತಂತ್ರ ಜೀವನ ನಡೆಸುವ ಪ್ರವೃತ್ತಿ ಜಾಸ್ತಿಯಾಗಿರುವುದರಿಂದ, ಕುಟುಂಬ ಕಲ್ಪನೆಯೇ ಕುಸಿಯುತ್ತಿದೆ. ಮಧ್ಯವಯಸ್ಸಿನಲ್ಲಿ ವಿವಾಹವಾಗುವವರ ಸಂಖ್ಯೆಯೂ ಹೆಚ್ಚುತ್ತಿರುವುದು ಇತ್ತೀಚಿನ ವಿದ್ಯಮಾನ. ಮದುವೆಯಾದರೂ ಮಕ್ಕಳು ಬೇಡ (Childless by Choice) ಎನ್ನುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಇಪ್ಪತ್ತರ ಹರೆಯದ ಯುವಕ-ಯುವತಿಯರ ಪೈಕಿ ನಾಲ್ವರಲ್ಲಿ ಒಬ್ಬರು ಮದುವೆಯೇ ಬೇಡ ಎಂದು ನಿರ್ಧರಿಸಿಬಿಟ್ಟಿದ್ದಾರಂತೆ. ಹಾಗೆ ಐವರಲ್ಲಿ ಇಬ್ಬರು ಮಕ್ಕಳನ್ನು ಹೊಂದದೇ ಇರಲು ತೀರ್ಮಾನಿಸಿಬಿಟ್ಟಿದ್ದಾರಂತೆ. ಇವೆಲ್ಲವುಗಳ ಪರಿಣಾಮವಾಗಿ ಜಪಾನಿನಲ್ಲಿ ವಿವಾಹ ಅತ್ಯಂತ ಅಪಾಯದಲ್ಲಿ ಸಿಲುಕಿರುವುದಂತೂ ವಾಸ್ತವ. ಒಂದೆಡೆ, ವೃದ್ಧರ ಸಂಖ್ಯೆ ಹೆಚ್ಚುತ್ತಿರುವುದು ಮತ್ತು ನವಜಾತರ ಸಂಖ್ಯೆ ಕ್ಷೀಣಿಸುತ್ತಿರುವುದು ದೇಶದ ಜನಸಂಖ್ಯಾ ನಕ್ಷೆಯನ್ನೇ ಅಲ್ಲೋಲಕಲ್ಲೋಲದ ಸ್ಥಿತಿಗೆ ಒಯ್ಯುತ್ತಿದೆ. ಈಗ ಜಪಾನಿನ ಜನಸಂಖ್ಯೆ ಹನ್ನೆರಡೂವರೆ ಕೋಟಿಯಷ್ಟಿದೆ. 2050ರ ಹೊತ್ತಿಗೆ ಅಲ್ಲಿನ ಜನಸಂಖ್ಯೆ ಎಂಟೂವರೆ ಕೋಟಿಗೆ ಇಳಿಯುವ ಅಪಾಯವಿದೆ. ಜಪಾನಿನಲ್ಲಿ ವಿವಾಹ ಪ್ರಮಾಣ ಕುಸಿಯುತ್ತಿರುವುದಕ್ಕೆ ಅಲ್ಲಿನ ಯುವಕ-ಯುವತಿಯರ ಮನೋಭಾವದಲ್ಲಾದ ಬದಲಾವಣೆ, ಮಕ್ಕಳನ್ನು ಸಾಕಿ-ಸಲಹುವ ವೆಚ್ಚದಲ್ಲಾದ ಏರಿಕೆ, ಒಂಟಿಜೀವನದ ಸೌಕರ್ಯಗಳು ಮತ್ತು ಲಿಂಗ ಅಸಮಾನ ಸಮಾಜದಲ್ಲಿ ಕೆಲಸ ಹಾಗೂ ಕುಟುಂಬವನ್ನು ಸಮತೋಲನಗೊಳಿಸುವಲ್ಲಿನ ತೊಂದರೆಗಳು ಸೇರಿವೆ. ಜಪಾನ್ ಸರಕಾರವು ಮದುವೆಯನ್ನು ಪ್ರೋತ್ಸಾಹಿಸಲು ಮತ್ತು ಜನನ ಪ್ರಮಾಣವನ್ನು ಹೆಚ್ಚಿಸಲು ಮ್ಯಾಚ್-ಮೇಕಿಂಗ್ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ.

ದಶಕದ ಬಳಿಕವೂ ಪಾಠ ಕಲಿಯದ ಕೈ ಪಡೆ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ranjith.hoskere@gmail.com

ಪ್ರಜಾಪ್ರಭುತ್ವ ವ್ಯವಸ್ಥೆಗೆ ಚುನಾವಣೆಗಳೇ ಮೂಲಾಧಾರ. ಆಡಳಿತ ಪಕ್ಷದಲ್ಲಿರುವವರು ಪ್ರತಿಪಕ್ಷದಲ್ಲಿ, ಪ್ರತಿಪಕ್ಷದಲ್ಲಿರುವವರು ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಬಂದು ಕೂರುವ ಹಾಗೂ ಸಾಮಾನ್ಯ ವ್ಯಕ್ತಿಯೂ ದೇಶದ ಅತ್ಯುನ್ನತ ಹುದ್ದೆಯನ್ನು ಹಿಡಿಯುವ ಸಾಧ್ಯತೆ ಇರುವುದೇ ಈ ಪ್ರಜಾಪ್ರಭುತ್ವದ ವೈಶಿಷ್ಟ್ಯ ಹಾಗೂ ತಾಕತ್ತು. ಅಧಿಕಾರದ ಗದ್ದುಗೆ ಏರಿರುವ ಯಾವುದೇ ರಾಜಕಾರಣಿಯಾಗಲಿ, ಐದು ವರ್ಷಕ್ಕೊಮ್ಮೆ ಜನರ ಮುಂದೆ ಮತಭಿಕ್ಷೆಯನ್ನು ಕೇಳಿಯೇ ಆಯ್ಕೆಯಾಗಬೇಕು. ಇಂಥ ವ್ಯವಸ್ಥೆಯಲ್ಲಿ ಅದರಲ್ಲಿಯೂ, ಭಾರತದಲ್ಲಿರುವ 'ವಿವಿಧತೆಯಲ್ಲಿ ಏಕತೆ'ಯ ವ್ಯವಸ್ಥೆ ಹಾಗೂ ಮನಸ್ಥಿತಿಯಲ್ಲಿ ಯಾವುದೇ ಒಂದು ಪಕ್ಷವು ಸದಾಕಾಲ ಆಡಳಿತ ಪಕ್ಷವಾಗಿರಬಹುದು ಎನ್ನುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ, ಸೋತ ಪಕ್ಷವು ಪ್ರತಿಪಕ್ಷದ ಸ್ಥಾನದಲ್ಲಿ ಕೂತು ಪಕ್ಷವನ್ನು ಯಾವ ರೀತಿ ಸಂಘಟಿಸುತ್ತದೆ, ಯಾವ ರೀತಿಯಲ್ಲಿ ಮೇಲೆದ್ದು ಬರುತ್ತದೆ ಎನ್ನುವುದು ಅಷ್ಟೇ ಮುಖ್ಯ.

ರಾಷ್ಟ್ರ ರಾಜಧಾನಿಯಾಗಿರುವುದರಿಂದ, ಅತಿಚಿಕ್ಕ ಗಾತ್ರದಲ್ಲಿದ್ದರೂ ಆಯಕಟ್ಟಿನ ರಾಜ್ಯ ಎನಿಸಿರುವ ದೆಹಲಿಯ ವಿಧಾನಸಭಾ ಚುನಾವಣೆ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಚುನಾವಣೋತ್ತರ ಸಮೀಕ್ಷೆಯಲ್ಲಿ, ಬಿಜೆಪಿ ಹಾಗೂ ಆಮ್ ಆದ್ಮಿ ಪಾರ್ಟಿ 'ನೆಕ್ ಟು ನೆಕ್' ಫೈಟ್ ನೀಡಲಿವೆ ಎಂದೇ ಹೇಳಲಾಗಿದ್ದರೂ, ಅಂತಿಮವಾಗಿ ಬಿಜೆಪಿ ಬರೋಬ್ಬರಿ 27 ವರ್ಷಗಳ ಬಳಿಕ ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಆಂದೋಲನದ ಮೂಲಕ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಅರವಿಂದ ಕ್ರೇಜಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷವು ದೆಹಲಿಯಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿತ್ತು. 2015ರ ಚುನಾವಣೆಯಲ್ಲಿ 70 ಕ್ಷೇತ್ರದ ಪೈಕಿ 67ರಲ್ಲಿ 'ಆಪ್' ಗೆದಿದ್ದರೆ, 2020ರಲ್ಲಿ 62 ಕ್ಷೇತ್ರದಲ್ಲಿ ಗೆಲ್ಲುವ ಮೂಲಕ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಸಂಚಲನವನ್ನು ಮೂಡಿಸಿದ್ದು ಸುಳ್ಳಲ್ಲ. ಆದರೆ ಕಳೆದ ಎರಡು ವರ್ಷಗಳಿಂದ ಆಪ್ ಮುಖ್ಯಸ್ಥ ಕ್ರೇಜಿವಾಲ್ ನಡೆದುಕೊಂಡ ರೀತಿ, ಸರಕಾರದ ವಿರುದ್ಧ ಕೇಳಿಬಂದ ಆರೋಪ ಸೇರಿದಂತೆ ಹಲವು ಕಾರಣಗಳಿಂದ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ 70 ಕ್ಷೇತ್ರಗಳ ಪೈಕಿ 48ರಲ್ಲಿ (ಕಳೆದ ಬಾರಿ ಗೆದ್ದಿದ್ದ 40 ಕ್ಷೇತ್ರದಲ್ಲಿ ಸೋಲು) ಸೋಲುವ ಮೂಲಕ ಪ್ರತಿಪಕ್ಷ ಸ್ಥಾನದಲ್ಲಿ ಕೂರಬೇಕಾಗಿದೆ. ಹಾಗೆಂದ ಮಾತ್ರಕ್ಕೆ ಬಿಜೆಪಿ ಹಾಗೂ ಆಪ್ ತೆಗೆದುಕೊಂಡಿರುವ ಶೇಕಡವಾರು ಮತಗಳಲ್ಲಿ ಭಾರಿ ವ್ಯತ್ಯಾಸವೇನಿಲ್ಲ.

ಯಾವುದೇ ಒಂದು ರಾಜಕೀಯ ಪಕ್ಷ ಸತತ 12 ವರ್ಷಗಳ ಕಾಲ ಅಧಿಕಾರ ನಡೆಸಿದರೆ ಸಹಜವಾಗಿಯೇ ಆಡಳಿತ ವಿರೋಧಿ ಅಲೆ ಏಳುವುದು ಸಹಜ. ಆದರೆ ಈ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಸೋಲು-ಗೆಲುವಿನ 'ಲೆಕ್ಕಾಚಾರ' ಮಾಡುವುದಕ್ಕಿಂತ, ದೇಶದ ಅತ್ಯಂತ ಹಳೆಯ ಪಕ್ಷ ಎನಿಸಿರುವ ಕಾಂಗ್ರೆಸ್‌ನ ಬಗ್ಗೆ ಯೋಚಿಸಲೇಬೇಕಿದೆ. ಏಕೆಂದರೆ, ಒಂದು ಕಾಲದಲ್ಲಿ ಇಡೀ ದೇಶವನ್ನು ಆಳಿದ್ದ, ದೆಹಲಿ ರಾಜ್ಯ ರಚನೆಯಾದ ಮೊದಲ ಬಾರಿಗೆ ಗೆಲುವು ಸಾಧಿಸಿದ ಬಳಿಕ, ಸತತವಾಗಿ 15 ವರ್ಷ ರಾಷ್ಟ್ರ ರಾಜಧಾನಿಯ ಚುಕ್ಕಾಣಿಯನ್ನು ಹಿಡಿದಿದ್ದ ಕಾಂಗ್ರೆಸ್‌ನ ಇಂದಿನ ಪರಿಸ್ಥಿತಿಯನ್ನು ನೋಡಿದರೆ, ರಾಷ್ಟ್ರೀಯ ಪಕ್ಷವೊಂದರ ಸ್ಥಿತಿ ಈ ಮಟ್ಟಕ್ಕೆ ತಲುಪಬಾರದಿತ್ತು ಎನಿಸುವುದು ಸುಳ್ಳಲ್ಲ.

ಹಾಗೆ ನೋಡಿದರೆ, ಆಮ್ ಆದ್ಮಿ ಪಕ್ಷ ಚುನಾವಣಾ ಅಖಾಡಕ್ಕೆ ಇಳಿದ ಬಳಿಕ ದೆಹಲಿಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಸಂಪೂರ್ಣವಾಗಿ ನೆಲಕಚ್ಚಿದ್ದವು. 2015ರಲ್ಲಿ 3 ಸೀಟುಗಳನ್ನು ಗೆದ್ದಿದ್ದ ಬಿಜೆಪಿ 2020ರಲ್ಲಿ 8 ಸೀಟುಗಳನ್ನು ಗೆದಿದ್ದು ಬಿಟ್ಟರೆ ಹೇಳಿಕೊಳ್ಳುವಂಥ ಸಾಧನೆಯನ್ನೇನೂ ಮಾಡಿರಲಿಲ್ಲ. ಇನ್ನು ಕಾಂಗ್ರೆಸ್‌ಗೆ 2015ರಲ್ಲಿ ನಡೆದ ಚುನಾವಣೆಯಿಂದ ಆರಂಭವಾದ ಶೂನ್ಯ ಸಾಧನೆಯ ಕಾರ್ಯ 2025ರ ವಿಧಾನಸಭಾ ಚುನಾವಣೆಯಲ್ಲಿಯೂ ಮುಂದುವರಿದಿದೆ. ಎಲ್ಲ ಸಮಯದಲ್ಲಿಯೂ ಸೀಟುಗಳೇ ಪಕ್ಷದ ಸಂಘಟನೆಯ ಆಧಾರವಾಗಿರುವುದಿಲ್ಲ ಎನ್ನುವುದು ಎಷ್ಟು ಮುಖ್ಯವೋ, ಸಂಘಟನೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸದೇ ಇದ್ದಿದ್ದೇ ಕಾಂಗ್ರೆಸ್‌ನ ಹ್ಯಾಟ್ರಿಕ್ ಶೂನ್ಯ ಸಾಧನೆಗೆ ಕಾರಣ ಎನ್ನುವುದು ಸ್ಪಷ್ಟ. ಶೂನ್ಯ ಸಾಧನೆಗೆ ಮಾತ್ರ ಸೀಮಿತವಾಗದೆ, ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮೂರೇ ಮೂರು ಅಭ್ಯರ್ಥಿಗಳು 'ಠೇವಣಿ' ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರಂತೆ. ಅಂದರೆ ರಾಷ್ಟ್ರೀಯ ಪಕ್ಷವೊಂದು 67 ಕ್ಷೇತ್ರಗಳಲ್ಲಿ ಠೇವಣಿ ಪಡೆಯುವಷ್ಟು ಜನಬೆಂಬಲವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ ಎಂದರೆ ಆ ಸಂಘಟನೆ ಯಾವ ಹಂತದಲ್ಲಿದೆ ಎನ್ನುವುದನ್ನು ಯೋಚಿಸಬೇಕಿದೆ.

ಆಪ್ ಚುನಾವಣಾ ಅಖಾಡಕ್ಕೆ ಬರುತ್ತಿದ್ದಂತೆ ಎರಡೂ ರಾಷ್ಟ್ರೀಯ ಪಕ್ಷಗಳ ಸ್ಥಿತಿ ಒಂದೇ ಆಗಿತ್ತು. ಇಡೀ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಲೆಯಲ್ಲಿ ಸತತ ಗೆಲುವಿನ ನಗೆ ಬೀರುತ್ತಿದ್ದ ಬಿಜೆಪಿಗೆ ರಾಷ್ಟ್ರ ರಾಜಧಾನಿಯನ್ನು 'ಭೇದಿಸಲು' ಸಾಧ್ಯವಾಗಿರಲಿಲ್ಲ. ಅದರಲ್ಲಿಯೂ 2019ರ ಲೋಕಸಭಾ ಚುನಾವಣೆಯಲ್ಲಿ ಭರ್ಜರಿ ಬಹುಮತ ಪಡೆದಿದ್ದ ಬಿಜೆಪಿಗೆ, ಮರುವರ್ಷ ದೆಹಲಿಯಲ್ಲಿ ನಡೆದ ಚುನಾವಣೆಯಲ್ಲಿ ಎರಡಂಕಿ ದಾಟಲು ಕ್ರೇಜಿವಾಲ್ ಬಿಟ್ಟಿರಲಿಲ್ಲ. ಈ ಹಂತದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡೆದುಕೊಂಡ ರೀತಿಯೇ ಇಂದಿನ ಫಲಿತಾಂಶದ ಕೈಗನ್ನಡಿ ಎಂದರೆ ತಪ್ಪಾಗುವುದಿಲ್ಲ. ಸುಷ್ಮಾ ಸ್ವರಾಜ್ ಅಧಿಕಾರದಿಂದ ಕೆಳಗಿಳಿದ ಬಳಿಕ ಬಿಜೆಪಿ ರಾಜಧಾನಿಯಲ್ಲಿ ಅಧಿಕಾರದ ಗದ್ದುಗೆ ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಪ್ರಯತ್ನಗಳನ್ನು ಮಾತ್ರ ಬಿಜೆಪಿ ಎಂದಿಗೂ ಬಿಡಲಿಲ್ಲ.

ಹಾಗೆ ನೋಡಿದರೆ, ಈ ಬಾರಿಯ ವಿಧಾನಸಭಾ ಚುನಾವಣೆ ಯಾರ ನೇತೃತ್ವದಲ್ಲಿನ ಚುನಾವಣೆ? ಒಂದು ವೇಳೆ ಗೆದ್ದರೆ ಯಾರು ಮುಖ್ಯಮಂತ್ರಿ ಅಭ್ಯರ್ಥಿ? ಎನ್ನುವ ಯಾವ ಲೆಕ್ಕಾಚಾರಗಳೂ ಬಿಜೆಪಿಯಲ್ಲಿ ಇರಲಿಲ್ಲ. ಆದರೆ ತಳಮಟ್ಟದಲ್ಲಿ ಪಕ್ಷವನ್ನು ಕಳೆದೊಂದು ದಶಕದಲ್ಲಿ ವ್ಯವಸ್ಥಿತವಾಗಿ ಕಟ್ಟುವಲ್ಲಿ ಹಾಗೂ ಆಪ್ ಸರಕಾರದ ವಿರುದ್ಧ 'ಜನಾಕ್ರೋಶ' ವ್ಯವಸ್ಥಿತವಾಗಿ ಮೂಡುವಂತೆ ನೋಡಿಕೊಳ್ಳುವ ಕೆಲಸವನ್ನು ಮಾಡಿಕೊಂಡೇ ಬಂದಿತ್ತು. ಇದರ ಫಲವಾಗಿ, 2020ರ ಚುನಾವಣೆಗೆ ಹೋಲಿಸಿದರೆ, 40 ಹೆಚ್ಚುವರಿ ಸೀಟುಗಳನ್ನು ಗಳಿಸುವಲ್ಲಿ ಯಶಸ್ವಿಯಾಯಿತು.

ಆದರೆ ಮೂರು ಬಾರಿ ಸತತವಾಗಿ ದೆಹಲಿಯಲ್ಲಿ ಗೆಲುವು ಸಾಧಿಸಿ ದಾಖಲೆ ಬರೆದಿದ್ದ ಕಾಂಗ್ರೆಸ್, ಬಿಜೆಪಿಯ ವಿರುದ್ಧ ದಿಕ್ಕಿನಲ್ಲಿ ನಿಂತಿತ್ತು. ಚುನಾವಣೆಗೆ ಹೋಗುವ ಮೊದಲೇ 'ಇಂಡಿಯ' ಮೈತ್ರಿಕೂಟದಲ್ಲಿನ ಗೊಂದಲದಿಂದಾಗಿ ಸ್ವತಂತ್ರ ಸ್ಪರ್ಧೆಯನ್ನು ಘೋಷಿಸಿದ್ದ ಕಾಂಗ್ರೆಸ್, ನಾಮಪತ್ರ ಸಲ್ಲಿಸುವ ಮೊದಲೇ ಸೋಲನ್ನು ಒಪ್ಪಿಕೊಂಡಿತ್ತು. ಕರ್ನಾಟಕದ ಗ್ಯಾರಂಟಿ ಯೋಜನೆಯ ಕಾರ್ಡ್ ಅನ್ನು ದೆಹಲಿಯಲ್ಲಿ ಪ್ಲೇ ಮಾಡಲು ಹೋಗಿ ಕೈಸುಟ್ಟುಕೊಂಡಿದೆ ಕಾಂಗ್ರೆಸ್. ಗ್ಯಾರಂಟಿ ಘೋಷಿಸಿದರೂ ಸೋತಿದ್ದು ಏಕೆನ್ನುವ ಪ್ರಶ್ನೆಗೆ ಈಗಲೂ ಕಾಂಗ್ರೆಸ್ಸಿಗರು ಉತ್ತರಿಸುತ್ತಿಲ್ಲ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ, ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಯಾರೆನ್ನುವುದು ಹೋಗಲಿ, ಚುನಾವಣೆಗೆ ಮೂಲಭೂತ ಎನಿಸುವ 'ಸಂಘಟನೆ'ಯೇ ಇರಲಿಲ್ಲ. ಚುನಾವಣೆಯಲ್ಲಿ ಸೋತ ಬಳಿಕ ಸಂಘಟನೆಯನ್ನೇ ಮರೆತಿದ್ದ ಕಾಂಗ್ರೆಸ್ ನಾಯಕರು, ವಿಧಾನಸಭಾ ಚುನಾವಣೆಯ ಸಮಯದಲ್ಲಿ ಬೇರೆ ರಾಜ್ಯಗಳ ನಾಯಕರನ್ನು ಕರೆಸಿಕೊಂಡು ಪ್ರಚಾರ ಮಾಡುವ ಸ್ಥಿತಿಗೆ ತಲುಪಿದ್ದರು.

ಕಾಂಗ್ರೆಸ್‌ನ ಸಂಘಟನೆ ನೆಲ ಕಚ್ಚಿರುವುದು ಕಾಂಗ್ರೆಸ್ ನಾಯಕರಿಗೆ ತಿಳಿದಿಲ್ಲವೆಂದಲ್ಲ. ಒಂದು ವೇಳೆ ಆಪ್‌ನೊಂದಿಗೆ ಮೈತ್ರಿ ಮಾಡಿಕೊಂಡು ಚುನಾವಣೆಗೆ ಹೋಗಿದ್ದರೂ, 'ಮೈತ್ರಿ ಸರಕಾರ'ದ ನೆಪದಲ್ಲಾದರೂ ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಕೂರಬಹುದಾಗಿತ್ತು. ಆದರೆ ಹರಿಯಾಣದಲ್ಲಿ ಗೆಲ್ಲುವ ಅತಿಯಾದ ಆತ್ಮವಿಶ್ವಾಸದಿಂದ, ಆಪ್‌ನೊಂದಿಗೆ ಸಂಬಂಧ ಕೆಡಿಸಿಕೊಂಡ ಕಾಂಗ್ರೆಸ್ಸಿಗರು, ಅದೇ ಮನಸ್ತಾಪವನ್ನು ದೆಹಲಿ ಚುನಾವಣೆಗೂ ಮುಂದುವರಿಸಿದರು. ಇದರ ಫಲಿತಾಂಶವೇ ಸತತ ಮೂರನೇ ಬಾರಿಗೆ ದೆಹಲಿಯಲ್ಲಿ 'ಶೂನ್ಯ' ಫಲಿತಾಂಶ. ಆದರೆ ಈ ಸೋಲನ್ನು ಸಮರ್ಥಿಸಿಕೊಳ್ಳುತ್ತಿರುವ ಕಾಂಗ್ರೆಸ್ಸಿಗರು, ''ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.2ರಷ್ಟು ಮತಗಳನ್ನು ಹೆಚ್ಚುವರಿಯಾಗಿ ಪಡೆದುಕೊಂಡಿದ್ದೇವೆ, ಅರವಿಂದ ಕ್ರೇಜಿವಾಲ್, ಮನೀಶ್ ಸಿಸೋಡಿಯಾ ಸೇರಿದಂತೆ ಆಪ್‌ನ ಹಲವು ನಾಯಕರು ಸೋಲುವುದಕ್ಕೆ ಕಾಂಗ್ರೆಸ್ ಅಭ್ಯರ್ಥಿ ಪಡೆದಿರುವ ನಾಲ್ಕೈದು ಸಾವಿರ ಮತಗಳೇ ಕಾರಣ'' ಎಂದು ಹೇಳಿಕೊಂಡು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಆದರೆ ರಾಷ್ಟ್ರೀಯ ಪಕ್ಷದವರಾಗಿದ್ದುಕೊಂಡು ಈ ರೀತಿಯ ಹೀನಾಯ ಸೋಲಿನ ಹೊರತಾಗಿಯೂ, ಶೇಕಡವಾರು ಮತ ಪ್ರಮಾಣ ಹೆಚ್ಚಾಗಿದೆ ಎನ್ನುವ ಮಾತುಗಳನ್ನು ಅವರು ಆಡುತ್ತಿರುವುದು ವಿಪರ್ಯಾಸ.

ವರ್ಷದಿಂದ ವರ್ಷಕ್ಕೆ, ಚುನಾವಣೆಯಿಂದ ಚುನಾವಣೆಗೆ ಅಧಃಪತನದತ್ತ ಸಾಗುತ್ತಿರುವ ಕಾಂಗ್ರೆಸ್‌ಗೆ ಈಗಲೂ ಇರುವ ಏಕೈಕ ಭರವಸೆಯೆಂದರೆ ಅದು ಕರ್ನಾಟಕ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿನ ಗೆಲುವು ಅದು ಕಾಂಗ್ರೆಸ್ ವರಿಷ್ಠರ ಅಥವಾ ಕಾಂಗ್ರೆಸ್ ನಾಯಕತ್ವದ ಗೆಲುವು ಎನ್ನುವುದಕ್ಕಿಂತ, ರಾಜ್ಯದಲ್ಲಿರುವ ಕಾಂಗ್ರೆಸ್ ನಾಯಕತ್ವದ ಗೆಲುವು ಎನ್ನುವುದು ಸೂಕ್ತ. ಕರ್ನಾಟಕದಲ್ಲಿ ಘೋಷಿಸಿದ್ದ ಗ್ಯಾರಂಟಿಗಳನ್ನೇ ದೆಹಲಿಯಲ್ಲಿಯೂ ಘೋಷಿಸಿದ ಕಾಂಗ್ರೆಸ್‌ಗೆ ಫಲಿತಾಂಶ ಸಿಗಲಿಲ್ಲ. ಇದಕ್ಕೆ ಕಾರಣ, ಮೂರೂ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಯಲ್ಲಿ ಕರ್ನಾಟಕ ಮಾದರಿಯನ್ನು ಅಳವಡಿಸಿಕೊಂಡಿದ್ದವು. ಇದರೊಂದಿಗೆ ದೆಹಲಿ ಕಾಂಗ್ರೆಸ್‌ನಲ್ಲಿನ ಯಾವ ಮುಖ ನೋಡಿ ಮತ ಹಾಕಬೇಕು ಎನ್ನುವ ಗೊಂದಲದಲ್ಲಿ ಮತದಾರರಿದ್ದರು. ಕರ್ನಾಟಕ ಸೇರಿದಂತೆ ದೇಶದ ಯಾವುದೇ ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆ ಉಳಿದಿದೆ ಎನ್ನುವುದಿದ್ದರೆ ಅದು ಸ್ಥಳೀಯ ನಾಯಕತ್ವದ ಕಾರಣಕ್ಕಾಗಿಯೇ ಹೊರತು, ದೆಹಲಿ ನಾಯಕರ ಬಲದಿಂದ ಅಲ್ಲ ಎನ್ನುವುದು ಈಗಾಗಲೇ ಜಗಜ್ಜಾಹೀರಾಗಿದೆ.

ಕೊನೆಯದಾಗಿ, ಚುನಾವಣೆಯಲ್ಲಿನ ಸೋಲು ಬಹುದೊಡ್ಡ ಹಿನ್ನಡೆಯೆಂದು ಭಾವಿಸಬೇಕಿಲ್ಲ. ಆದರೆ ಸೋಲಿನ ಬಳಿಕ ಯಾವ ರೀತಿಯಲ್ಲಿ ಸ್ಥಳೀಯವಾಗಿ ಪಕ್ಷವನ್ನು ಮತ್ತೆ ಕಟ್ಟಲು ಪ್ರಯತ್ನಿಸುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. ಕಾಂಗ್ರೆಸ್ ವಿಷಯದಲ್ಲಿ ಹೇಳುವುದಾದರೆ, ಸೋತ ರಾಜ್ಯಗಳಲ್ಲಿ ಸಂಘಟನೆಯನ್ನು ಮರುಸ್ಥಾಪಿಸುವ ಬದಲು, ಮುಂದೆ ನೋಡೋಣ ಎನ್ನುವ ಮನಸ್ಥಿತಿಯಲ್ಲಿ ಅದು ರಾಜ್ಯಗಳನ್ನೇ ಕಳೆದುಕೊಳ್ಳುವ ಹಂತಕ್ಕೆ ತಲುಪಿದೆ. ಬಿಜೆಪಿಯನ್ನು ಸೈದ್ಧಾಂತಿಕವಾಗಿ ಖಂಡಾತುಂಡವಾಗಿ ವಿರೋಧಿಸುತ್ತಿರುವ ಕಾಂಗ್ರೆಸ್, ಪಕ್ಷ ಸಂಘಟನೆಗೆ, ಸೋತ ರಾಜ್ಯಗಳಲ್ಲಿ ಗೆಲುವಿನ ನಗೆ ಬೀರುವುದಕ್ಕೆ ಬಿಜೆಪಿಯವರು ಮಾಡುವ 'ತಂತ್ರಗಾರಿಕೆ'ಯನ್ನಾದರೂ ನಕಲು ಮಾಡಬೇಕಿದೆ. ಇಲ್ಲವಾದರೆ, ಭಾರತ ಇತಿಹಾಸದ ಜತೆಜತೆಗೆ ಬೆಳೆದ ಕಾಂಗ್ರೆಸ್ ಅನ್ನು ಮುಂದೆ ದೇಶದಲ್ಲಿ ಹುಡುಕಬೇಕಾದ ಸ್ಥಿತಿ ನಿರ್ಮಾಣವಾದರೂ ಅಚ್ಚರಿಯಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಾಡಿಮಿಡಿತ ಗೊತ್ತಾಯ್ತು

ಭಾರತದ ಭವಿಷ್ಯದ ದೃಷ್ಟಿಯಿಂದ, ನಮ್ಮ ಮತದಾರರ ನಾಡಿಮಿಡಿತವನ್ನು ಅರಿಯಲು ಮಾರ್ಗಸೂಚಿಯಾಗಿದ್ದ ದೆಹಲಿ ವಿಧಾನಸಭಾ ಚುನಾವಣೆ ಎಲ್ಲರ ಕುತೂಹಲಕ್ಕೆ ಕಾರಣವಾಗಿತ್ತು. 'ಫ್ರೀಬೀ'ಗಳ ಪಿತಾಮಹನಾಗಿ, 'ಎಲ್ಲ ಫ್ರೀ ಫ್ರೀ' ಎನ್ನುತ್ತಾ ಒಂದಲ್ಲ, ಎರಡಲ್ಲ, ಹದಿನೈದು ಉಚಿತ ಕೊಡುಗೆಗಳನ್ನು ಘೋಷಿಸಿ, ಮತ ಪಡೆಯಲು ಬಲೆ ಬೀಸಿ, ಇನ್ನೇನು ತಮ್ಮದೇ ಜಯ ಎಂದು ಬೀಗುತ್ತಿದ್ದರು ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್. ಅವರು ಹೀಗೆ ಒಡ್ಡಿದ್ದ ಆಮಿಷಕ್ಕೆ ಒಳಗಾಗಿ ದೆಹಲಿ ಮತದಾರರು ಆ ಪಕ್ಷವನ್ನೇ ಅಧಿಕಾರಕ್ಕೆ ತಂದರೆ ರಾಜ್ಯದ ಅಭಿವೃದ್ಧಿಯ ಕಥೆ ಏನಾದೀತು? ಎಂದು ದೇಶದ ಹಿತಚಿಂತಕರು ಆತಂಕಗೊಂಡಿದ್ದಾಗ, 'ನಮಗೆ ಭಿಕ್ಷೆ ಬೇಡ, ಅಭಿವೃದ್ಧಿಗೆ ಹಣ ಖರ್ಚುಮಾಡಿ' ಎಂಬ ಧೋರಣೆಯಲ್ಲಿ ಸ್ವಾಭಿಮಾನಿ ಮತದಾರರು ಆಮ್ ಆದ್ಮಿಯನ್ನು ಸೋಲಿಸಿದ್ದು ಸಂತಸದಾಯಕ ಬೆಳವಣಿಗೆ.

ಆದರೆ ಇದೇ ವೇಳೆಗೆ, ಆಡಳಿತ ಪಕ್ಷವು ಸರ್ವಾಧಿಕಾರಿಯಾಗಲು ಅವಕಾಶ ಕೊಡದೆ ಅದನ್ನು ನಿಯಂತ್ರಿಸುವ ಮೂಗುದಾಣವಾಗಬೇಕಿದ್ದ ಕಾಂಗ್ರೆಸ್‌ನಂಥ ರಾಷ್ಟ್ರೀಯ ಪಕ್ಷದ 'ಶೂನ್ಯ ಸಂಪಾದನೆಯ' ಸೋಲು ಅತ್ಯಂತ ನೋವು ತಂದಿದೆ. ಅದು ರಾಹುಗ್ರಸ್ತ ಚಂದ್ರನಾಗದೆ, ಹುಣ್ಣಿಮೆ ಚಂದ್ರನಾಗಿ ದೇಶವನ್ನು ಬೆಳಗುವಂತಾಗಬೇಕು ಎಂಬುದು ಪ್ರಜಾಪ್ರಭುತ್ವದ ಅಭಿಮಾನಿಗಳ ಹಾರೈಕೆ.

- ಸತ್ಯಬೋಧ, ಬೆಂಗಳೂರು

ಮಾಹಿತಿಪೂರ್ಣ ಅಂಕಣ

ಡಾ. ಸಾಧನಶ್ರೀ ಅವರ 'ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ' ಅಂಕಣವು ಮಾಹಿತಿಪೂರ್ಣವಾಗಿಯೂ ಸ್ವಾರಸ್ಯಕರವಾಗಿಯೂ ಮೂಡಿಬರುತ್ತಿದ್ದು, ಇದರಲ್ಲಿನ ವೈವಿಧ್ಯಮಯ ಬರಹಗಳಿಂದಾಗಿ ನಮ್ಮ ಅರಿವಿನ ಪರಿಧಿ ಹೆಚ್ಚಿದೆ. ಮಜ್ಜಿಗೆಯು ತುಂಬಾ ತಂಪು, ಬೇಸಗೆಯಲ್ಲಿ ಒಳ್ಳೆಯದು ಎಂದು ಹೊಟ್ಟೆತುಂಬ ಕುಡಿಯುವ ನಮಗೆ ಅದು ಉಷ್ಣಕಾರಿ ಎಂಬ ಕನಿಷ್ಠ ಜ್ಞಾನವೂ ಇರಲಿಲ್ಲ. ಈ ಅಂಕಣವು ನಮ್ಮ ಆಹಾರ ಪದ್ಧತಿಯ ಬಗೆಗೆ ಸರಿಯಾದ ತಿಳಿವಳಿಕೆಯನ್ನು ನೀಡುತ್ತಿರುವುದರಿಂದ ಪ್ರತಿವಾರ ಅಂಕಣಕ್ಕಾಗಿ ಕಾಯುವಂತಾಗಿದೆ.

- ರಾಜು ಹಗ್ಗದ, ಇಣಚಗಲ್

ಕಡಿವಾಣ ಬೀಳಬೇಕಿದೆ!

ಬಹುತೇಕರು ಇಷ್ಟಪಡುವ ವಸ್ತುಗಳಲ್ಲಿ ಚಿನ್ನವು ಮೇಲ್ಪಂಕ್ತಿಯಲ್ಲಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಜಗತ್ತಿನಲ್ಲಿ ಅತಿಹೆಚ್ಚು ಚಿನ್ನ ಹೊಂದಿರುವ ದೇಶಗಳಲ್ಲಿ ಭಾರತವೂ ಒಂದು. ನಮ್ಮಂಥ ಮಧ್ಯಮ ವರ್ಗದ ಜನರು ಪೈಸೆ ಪೈಸೆ ಕೂಡಿಟ್ಟು ಚಿನ್ನವನ್ನು ಖರೀದಿಸುವುದಿದೆ. ಇದು ಬರೀ ಚಿನ್ನವಾಗಿರದೆ ಆಪತ್ಕಾಲದ ಬಂಧುವೂ ಹೌದು. ಹಣದ ಸಮಸ್ಯೆ ಎದುರಾದರೆ ಚಿನ್ನವನ್ನು ಅಡವಿಟ್ಟೋ, ಮಾರಿಯೋ ಹಣವನ್ನು ಪಡೆದುಕೊಳ್ಳಬಹುದು ಎಂಬುದು ಇದರ ಪ್ರಯೋಜನಕಾರಿ ಅಂಶ. ಹೀಗಾಗಿಯೇ ನಮ್ಮ ಸಮಾಜದಲ್ಲಿ ಚಿನ್ನಕ್ಕೆ ಇನ್ನಿಲ್ಲದ ಮಹತ್ವವಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಚಿನ್ನದ ಬೆಲೆಯು ಯಾರೂ ಊಹಿಸದ ರೀತಿಯಲ್ಲಿ ಗಗನಕ್ಕೇರುತ್ತಿದ್ದು, ಬಯಸುವವರಿಗೆ ಶಾಕ್ ನೀಡುತ್ತಿದೆ. ಅದರಲ್ಲೂ ಮದುವೆಯ ಋತುವಿನಲ್ಲೇ ಚಿನ್ನಾಭರಣಗಳ ಬೆಲೆ ಅಸಾಧ್ಯ ಏರುತ್ತಿರುವುದರಿಂದಾಗಿ ಬಡ ಹಾಗೂ ಮಧ್ಯಮ ವರ್ಗದ ಜನರು ಚಿಂತೆಗೀಡಾಗಿದ್ದಾರೆ. ಚಿನ್ನದ ಅತಿರೇಕದ ಬೆಲೆಯೇರಿಕೆಗೆ ಕಡಿವಾಣ ಹಾಕಿ ಸ್ಥಿರತೆಯನ್ನು ಕಾಪಾಡುವುದು ಈ ಕ್ಷಣದ ಅನಿವಾರ್ಯತೆಯಾಗಿದೆ.

- ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ರಾಜಕೀಯ ವೀಕ್ಷಕರ ಊಹೆ ಸುಳ್ಳಾಗಲಿಲ್ಲ

ನಾಡಿಮಿಡಿತ

ರಮಾನಂದ ಶರ್ಮಾ

vveditoped@gmail.com

ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶವು ನಾಲ್ಕು ರಸ್ತೆ ಕೂಡುವ ವೃತ್ತಗಳಲ್ಲಿ, ಆಯಕಟ್ಟಿನ ಗೋಡೆಗೋಡೆಗಳ ಮೇಲೆ ದಪ್ಪ ಅಕ್ಷರಗಳಲ್ಲಿ ಎದ್ದು ಕಾಣುವಂತೆ ಬರೆದಿತ್ತು. ಅಬಕಾರಿ ಹಗರಣ ಮತ್ತು ಭ್ರಷ್ಟಾಚಾರದ ಆರೋಪಗಳಲ್ಲಿ ಸಿಲುಕಿ, ಜಾಮೀನು ಪಡೆಯುವ, ಸತ್ಯತೆಯನ್ನು ಎತ್ತಿ ತೋರಿಸುವ ಸುದೀರ್ಘ ನ್ಯಾಯಾಲಯ ಹೋರಾಟದಲ್ಲಿ ಮಗ್ನವಾಗಿದ್ದ 'ಆಮ್ ಆದ್ಮಿ'ಗಳು ಅದನ್ನು ಓದಲಿಲ್ಲ, ಅಥವಾ, ಓದಿದರೂ ತಲೆಕೆಡಿಸಿಕೊಳ್ಳದೆ ಇದು ಬಿಜೆಪಿಯ wishful thinking ಎಂದು ಕಡೆಗಣಿಸಿದರು. ಎರಡು ಬಾರಿ ಗದ್ದುಗೆ ಏರಿಸಿದವರು ಮೂರನೇ ಬಾರಿ ಏರಿಸದಿರುತ್ತಾರೆಯೇ ಎಂಬ ಹುಂಬತನ ಮತ್ತು ಅಂಧವಿಶ್ವಾಸವೇ ಅವರಿಗೆ ಮುಳುವಾಯಿತು.

ಜಗತ್ತೇ ಬೆಕ್ಕಸ ಬೆರಗಾಗಿ ನೋಡುವಂಥ ಆಡಳಿತವನ್ನು ದೆಹಲಿಯಲ್ಲಿ ನೀಡಿದ್ದೇವೆ ಎಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಿದ್ದ ಆಮ್ ಆದ್ಮಿಗಳು, ದೆಹಲಿಯಲ್ಲಿ ಆಡಳಿತ-ವಿರೋಧಿ ಅಲೆ ಕ್ರಮೇಣ ರೂಪುಗೊಳ್ಳುತ್ತಿದ್ದುದನ್ನು ಈ ಹುಚ್ಚು ಭ್ರಮೆಯಲ್ಲಿ ಗಮನಿಸಿರಲಿಲ್ಲ. ದೇಶವನ್ನೇ ಗೆದ್ದರೂ ಊರನ್ನು (ದೆಹಲಿ) ಗೆಲ್ಲಲಾಗದ ಅತೃಪ್ತಿ, ಅಸಮಾಧಾನ ಮತ್ತು ಕೀಳರಿಮೆಗಳಲ್ಲಿ ದಶಕದಿಂದ ಪರಿತಪಿಸುತ್ತಿದ್ದ ಬಿಜೆಪಿಯು, ದೆಹಲಿಯನ್ನು ಗೆಲ್ಲಲು ಏನೆಲ್ಲಾ ಕಾರ್ಯತಂತ್ರ, ಯೋಜನೆಗಳನ್ನು ರೂಪಿಸಿದೆ ಎಂಬುದನ್ನು ಅರಿಯಲು 'ಆಮ್ ಆದ್ಮಿ' ಯತ್ನಿಸಲಿಲ್ಲ. 'ಗೆಲುವು ನನ್ನದೇ' ಎಂಬ ಅತಿಯಾದ ಆತ್ಮವಿಶ್ವಾಸವೇ ಇದಕ್ಕೆ ಕಾರಣವಿದ್ದಿರಬಹುದು.

ವಾಸ್ತವದಲ್ಲಿ ದೆಹಲಿಯಲ್ಲಿ ದಾಖಲಾಗಿದ್ದು ಬಿಜೆಪಿಯ ಗೆಲುವಲ್ಲ, ಬದಲಾಗಿ ಅದು ಆಮ್ ಆದ್ಮಿ ಪಕ್ಷವೇ ಹರಿವಾಣದಲ್ಲಿಟ್ಟು ಬಿಜೆಪಿಯ ಕೈಗೆ ನೀಡಿರುವಂಥದ್ದು. ಚುನಾವಣಾ ಸೋಲೆಂಬುದು ಗೆಲುವಿನಂತೆ ತೀರಾ ಸಾಮಾನ್ಯ. ಆದರೆ ಕೇಜ್ರಿವಾಲರ ಪಕ್ಷವು ಸೋತಿರುವ ಪರಿ ಮಾತ್ರ ವಿಶ್ಲೇಷಕರನ್ನು ದಿಗಿಲುಗೊಳಿಸಿದೆ. ಆಮ್ ಆದ್ಮಿ ಈ ಬಾರಿ ಅಧಿಕಾರದ ಗದ್ದುಗೆಯೇರದು ಎಂಬ ಸುಳಿವಿದ್ದರೂ, ಪಕ್ಷದ ಬುಡವನ್ನೇ ಅಲುಗಾಡಿಸುವಷ್ಟರ ಮಟ್ಟಿಗಿನ ಅದರ ಸೋಲು ನಿಜಕ್ಕೂ ಅಚ್ಚರಿ ತಂದಿದೆ. ಪಕ್ಷದಲ್ಲಿ ಕೆಳಹಂತದ ಧುರೀಣರು ಸೋತರೆ ಅದು ಸುದ್ದಿಯಾಗುವುದಿಲ್ಲ. ಆದರೆ ಅರವಿಂದ ಕೇಜ್ರಿವಾಲ್, ಸತ್ಯೇಂದರ್ ಜೈನ್, ಮನೀಶ್ ಸಿಸೋಡಿಯಾ, ಸೌರಭ್ ಭಾರದ್ವಾಜ್, ದುರ್ಗೇಶ್ ಪಾಠಕ್‌ರಂಥ ಉನ್ನತ ಮಟ್ಟದ ನಾಯಕರುಗಳೂ ನೆಲಕಚ್ಚಿರುವುದು ಪಕ್ಷದ ಜಂಘಾಬಲವನ್ನೇ ಉಡಗಿಸಿದೆ. ಈ ಸೋಲನ್ನು ಯಾವುದೇ ರೀತಿಯಲ್ಲಿ ಸಮರ್ಥಿಸಿಕೊಳ್ಳಲಾಗದ ಹತಾಶ ಸ್ಥಿತಿಗೆ ಪಕ್ಷ ತಲುಪಿದೆ.

ಆಡಳಿತದ ದೃಷ್ಟಿಯಲ್ಲಿ ಕೇಜ್ರಿವಾಲರು ತಮ್ಮ ಮೊದಲ ಅವಧಿಯಲ್ಲಿ ಮೆಚ್ಚುಗೆ ಗಳಿಸಿದ್ದರು. ಆದರೆ ಎರಡನೇ ಅವಧಿಯಲ್ಲಿ ಕೇಂದ್ರ ಸರಕಾರದೊಂದಿಗೆ ನಿರಂತರ ಸಂಘರ್ಷಕ್ಕೆ ಇಳಿದ ಪರಿಣಾಮ ಅವರ ಜನಪ್ರಿಯತೆ ಕುಸಿಯತೊಡಗಿತು. ಕಳೆದ ನಾಲ್ಕಾರು ವರ್ಷಗಳಿಂದ ದೆಹಲಿಯ ಜನರು ಈ ಸಂಘರ್ಷಕ್ಕೆ ಮೂಕಸಾಕ್ಷಿಯಾದರು. ತಮ್ಮದಲ್ಲದ ಸರಕಾರ ಎಂಬ ಕಾರಣಕ್ಕೆ ಕೇಂದ್ರದ ಆಳುಗರು ಆಮ್ ಆದ್ಮಿಗಳ ಸರಕಾರಕ್ಕೆ ಸಹಕಾರ ನೀಡಲಿಲ್ಲ ಮತ್ತು ಅಡೆತಡೆ ಉಂಟುಮಾಡಿತ್ತು ಎಂಬ ವಾದದಲ್ಲಿ ಹುರುಳಿದ್ದರೂ, ಈ ಸಂಘರ್ಷವು ಅವರ ಆಡಳಿತದ ಬಗ್ಗೆ ಜನರು ಹೇವರಿಕೆ ಪಟ್ಟುಕೊಳ್ಳುವಂತೆ ಮಾಡಿತ್ತು. ಇಂಥ 'ಪಕ್ಷ ಸಂಘರ್ಷಗಳು' ನಮ್ಮ ದೇಶದಲ್ಲಿ ಹೊಸ ಬೆಳವಣಿಗೆಯಲ್ಲ. ಡಬಲ್ ಎಂಜಿನ್ ಸರಕಾರಗಳು ಇಲ್ಲದಿದ್ದರೆ ಇದು ತೀರಾ ಸಾಮಾನ್ಯ. ಆದರೂ ಕೇಂದ್ರದೊಡನೆ ಸದಾ ಸಂಘರ್ಷಕ್ಕಿಳಿಯದೆ, ದೆಹಲಿಯ ಅಭಿವೃದ್ಧಿಯ ನಿಟ್ಟಿನಲ್ಲಾದರೂ ಸ್ವಲ್ಪ 'ಕೊಡು-ಕೊಳ್ಳುವ' ಧೋರಣೆ ತೋರಿಸಿದ್ದಿದ್ದರೆ, ಹೊಂದಾಣಿಕೆ ಮಾಡಿಕೊಂಡಿದ್ದಿದ್ದರೆ ಆಮ್ ಆದ್ಮಿಗೆ ಇಂಥ ದುಬಾರಿ ಬೆಲೆ ತೆರಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ. ಸಂಘರ್ಷ ಹೀಗೇ ಮುಂದುವರಿದರೆ ದೆಹಲಿಯ ಅಭಿವೃದ್ಧಿ ಮರೀಚಿಕೆಯಾಗಬಹುದು ಮತ್ತು ತಮ್ಮ ಬದುಕು ಹೈರಾಣಾಗಬಹುದು ಎಂಬ ಕಾರಣಕ್ಕೆ ಜನರು ಆಮ್ ಆದ್ಮಿ ಸರಕಾರವನ್ನು ಕೆಳಗಿಳಿಸಲು ಮನಸ್ಸು ಮಾಡಿದಂತೆ ಕಾಣುತ್ತದೆ.

ಆಮ್ ಆದ್ಮಿ ಪಕ್ಷವು ಭ್ರಷ್ಟಾಚಾರ-ವಿರೋಧಿ ವೇದಿಕೆಯ ಮೇಲೆ ಜನ್ಮತಾಳಿದ್ದು. ಅಣ್ಣಾ ಹಜಾರೆಯವರಂಥ ಗಾಂಧಿವಾದಿ ಇದರ ಹಿಂದೆ ಇದ್ದರು. ಆದರೆ, ಈ ಪಕ್ಷವು ಭ್ರಷ್ಟಾಚಾರದ ಆರೋಪಗಳಿಂದಾಗಿಯೇ ಇಂದು ಅಧಿಕಾರವನ್ನು ಕಳೆದುಕೊಂಡಿದ್ದು ವಿಪರ್ಯಾಸ. ಅಬಕಾರಿ ಹಗರಣದ ವಿಷಯಕ್ಕೇ ಬರೋಣ. ಇದರ ಸತ್ಯಾಸತ್ಯತೆ ಏನೇ ಇರಲಿ, ಬೆಂಕಿಯಿಲ್ಲದೆ ಹೊಗೆ ಬಾರದು ಎಂಬುದು ಸಾಮಾನ್ಯ ಅಭಿಪ್ರಾಯವಾಗಿದ್ದು, ಇದು ಆಮ್ ಆದ್ಮಿ ಸರಕಾರವನ್ನು ನುಂಗಿಹಾಕಿತು ಎಂಬ ಮಾತಿನಲ್ಲಿ ಸತ್ಯವಿದೆ. ಈ ಪ್ರಕರಣದಲ್ಲಿ ಕೇಜ್ರಿವಾಲರೊಂದಿಗೆ ಹಲವು ಪ್ರಮುಖ ಮಂತ್ರಿಗಳು ಜೈಲಿಗೆ ಹೋಗಿದ್ದು, ಜಾಮೀನಿಗಾಗಿ ಪರದಾಡಿದ್ದು ಇವನ್ನೆಲ್ಲಾ ಒಮ್ಮೆ ನೆನಪಿಸಿಕೊಳ್ಳಿ. ಸುದೀರ್ಘ ಕಾನೂನು ಹೋರಾಟ, ಕೇಜ್ರಿವಾಲರ ಜೈಲುವಾಸ, ತನ್ಮೂಲಕ ದಿನನಿತ್ಯದ ಆಡಳಿತದಲ್ಲಿ ಅಸ್ತವ್ಯಸ್ತತೆ, ಜೈಲಿನಲ್ಲಿ ಅವರಿಗೆ ನೀಡಲಾಗುತ್ತಿದ್ದ ಆಹಾರದ ಬಗೆಗಿನ ಜಿಜ್ಞಾಸೆ ಮುಂತಾದ ವಿಷಯಗಳಿಂದ ಜನರು ರೋಸಿಹೋಗಿದ್ದರು. ಈ ಹಗರಣಗಳು ಇನ್ನೂ ತಾರ್ಕಿಕ ಅಂತ್ಯವನ್ನು ಕಾಣದ್ದರಿಂದ ಮತ್ತು ಅಕಸ್ಮಾತ್ ಆಮ್ ಆದ್ಮಿ ಪಕ್ಷವು ಇನ್ನೊಮ್ಮೆ ಅಧಿಕಾರ ಹಿಡಿದರೆ ಈ ಅಡೆತಡೆಗಳು ಮುಂದುವರಿಯುವುದು ಖಾತ್ರಿಯಾಗಿದ್ದರಿಂದ, ದೆಹಲಿಯ ಜನರು ಪೊರಕೆಯನ್ನು ಕಿತ್ತೆಸೆದು ಕಮಲವನ್ನು ಮುಡಿಗೇರಿಸಿಕೊಂಡಿದ್ದಾರೆ ಎಂಬ ತರ್ಕದಲ್ಲಿ ಅರ್ಥ ಕಾಣುತ್ತದೆ. ಕೇಜ್ರಿವಾಲ್‌ರ ಹೆಗಲೇರಿರುವ ಪ್ರಕರಣಗಳು ಮತ್ತು ಅವುಗಳ ಸಂಕೀರ್ಣತೆಯನ್ನು ಗಮನಿಸಿದರೆ, ಅವುಗಳಿಂದ ಹೊರಬರಲು ಅವರಿಗೆ ದಶಕಗಳೇ ಬೇಕಾಗಬಹುದು ಎನಿಸುತ್ತದೆ.

ಆಮ್ ಆದ್ಮಿಯ ಸೋಲಿನ ಕಾರಣಗಳ ಚರ್ಚೆ ಜೋರಾಗಿ ನಡೆಯುತ್ತಿದೆ. ಹಿತಾಸಕ್ತರು ತಂತಮ್ಮ ಮೂಗಿನ ನೇರಕ್ಕೆ ತಕ್ಕಂತೆ ಕಾರಣಗಳನ್ನು ನೀಡುತ್ತಿದ್ದಾರೆ. ಪಕ್ಷವು ತಾನು ನೀಡಿದ್ದ ಭರವಸೆಗಳ ಈಡೇರಿಕೆಯಲ್ಲಿ ಭಾರಿ ವಿಫಲವಾಗಿದ್ದು, ಮಧ್ಯಮವರ್ಗದವರು ಕೇಜ್ರಿವಾಲರ ನಡೆಗೆ ಮತ್ತು ರಾಜಕೀಯ ವೈಖರಿಗೆ ಭ್ರಮನಿರಸನಗೊಂಡಿದ್ದು, ಜೈಲಿಗೆ ಹೋದರೂ ಕುರ್ಚಿ ಬಿಡದಿದ್ದುದು, ವಾಯುಮಾಲಿನ್ಯ ನಿವಾರಣೆಯ ನಿಟ್ಟಿನಲ್ಲಿನ ತುಘಲಕ್ ನಿರ್ಧಾರಗಳು, ಸ್ವಚ್ಛತೆ-ನೀರು-ರಸ್ತೆಯಂಥ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ನಿರೀಕ್ಷಿತ ಸಾಧನೆ ಮಾಡದಿದ್ದುದು, ಸಾರಿಗೆ ದಟ್ಟಣೆ ನಿವಾರಣೆ ವಿಷಯದಲ್ಲಿ ಸರ್ವಸಮ್ಮತ ನಿಯಮಾವಳಿ ಮತ್ತು ವ್ಯವಸ್ಥೆಯನ್ನು ರೂಪಿಸದಿದ್ದುದು ಆಮ್ ಆದ್ಮಿಯ ಸೋಲಿಗೆ ಕಾರಣ ಎಂಬ ವಾದದಲ್ಲಿ ಸತ್ಯವಿದೆ. ಆದರೆ, ಅದಕ್ಕೆ ಮಾರ್ಮಿಕ ಪೆಟ್ಟು ನೀಡಿದ್ದು, ಕೇಂದ್ರದ ಬಿಜೆಪಿ ಸರಕಾರದ ಇತ್ತೀಚಿನ 2 ಮಹತ್ವದ ನಿರ್ಣಯಗಳು. ಆದಾಯಕರ ನೀಡುವ ನೌಕರರು ದೆಹಲಿಯಲ್ಲಿ ಸುಮಾರು 5 ಲಕ್ಷದಷ್ಟಿದ್ದು, ಇವರು ಕನಸಿನಲ್ಲೂ ನಿರೀಕ್ಷಿಸದಿದ್ದ ಆದಾಯಕರ ರಿಯಾಯಿತಿಯನ್ನು ನೀಡಿದ್ದು ಈ ಪೈಕಿ ಒಂದು. ರಿಯಾಯಿತಿಯ ಸುಳಿವಿದ್ದರೂ ಈ ಮಟ್ಟದಲ್ಲಿ ದಕ್ಕಬಹುದೆಂದು ಅವರು ನಿರೀಕ್ಷಿಸಿರಲಿಲ್ಲ. ಇದು ಅವರಿಗೆ ಬಂಪರ್ ಲಾಟರಿಯಾಗಿದ್ದರ ಜತೆಗೆ, ಚುನಾವಣೆಯಲ್ಲಿ ಬಿಜೆಪಿಗೆ ಅನಿರೀಕ್ಷಿತ 'ಡಿವಿಡೆಂಡ್' ನೀಡಿತು. ಹಾಗೆಯೇ, ಸರಕಾರಿ ನೌಕರರಿಗೆ 8ನೇ ವೇತನ ಆಯೋಗ ರಚಿಸಿದ್ದು ಮತ್ತು ಇದರನ್ವಯ ನೌಕರರಲ್ಲಿ ಗಣನೀಯ ಪ್ರಮಾಣದಲ್ಲಿ ಸಂಬಳದ ಹೆಚ್ಚಳದ ಭರವಸೆ ಮೂಡಿಸಿದ್ದು, ದೆಹಲಿಯಲ್ಲಿ ಗಮನಾರ್ಹ ಪ್ರಮಾಣದಲ್ಲಿರುವ ಸರಕಾರಿ ನೌಕರರನ್ನು ಬುಟ್ಟಿಗೆ ಹಾಕಿಕೊಂಡಿತು. ಹಾಗೆಯೇ ಬಜೆಟ್ ಅನುದಾನದಲ್ಲಿ ಬಿಹಾರ ಮತ್ತು ಆಂಧ್ರಪ್ರದೇಶಗಳಿಗೆ ಆದ್ಯತೆ ನೀಡಿ, ದೆಹಲಿಯಲ್ಲಿರುವ ಆ ರಾಜ್ಯದವರನ್ನು ಸೆಳೆದುಕೊಂಡಿದ್ದು ಇನ್ನೊಂದು ವಿಶೇಷ.

ಇತ್ತೀಚಿನ ಚುನಾವಣೆಗಳಲ್ಲಿ ಮೋದಿ ಮಾಡಿದ ಉಚಿತಗಳು/ಗ್ಯಾರಂಟಿಗಳ ಭರವಸೆಗಳನ್ನು 'ಬಿಟ್ಟಿ-ಭಾಗ್ಯಗಳು' ಎಂದು ತಾನು ಲೇವಡಿಮಾಡಿದರೂ, ಆಮ್ ಆದ್ಮಿ ಪಕ್ಷ ನೀಡಿದ ಉಚಿತಗಳನ್ನು ನಿವಾಳಿಸಿ ತೆಗೆಯುವಂತೆ ದೆಹಲಿಯ ಜನರಿಗೆ ಉಚಿತಗಳ ಭರವಸೆಯ ಪ್ರವಾಹವನ್ನು ಹರಿಬಿಟ್ಟಿದ್ದು ಬಿಜೆಪಿಗೆ ವರವಾಗಿ ಪರಿಣಮಿಸಿತು. ಇಂಥ ಭರವಸೆಗಳ ವಿಷಯದಲ್ಲಿ ಕೇಜ್ರಿವಾಲರಿಗಿಂತ ಮೋದಿಯವರಿಗೆ ಹೆಚ್ಚು ಅಂಕ ಇರುವುದು ಎಲ್ಲರಿಗೂ ತಿಳಿದ ವಿಷಯವೇ. ಉಚಿತಗಳ ತುರುಸಿನ ಸ್ಪರ್ಧೆಯಲ್ಲಿ ಮೋದಿಯವರು ಕೇಜ್ರಿವಾಲರನ್ನು ಹಿಂದಿಕ್ಕಿಬಿಟ್ಟರು.

ಲೋಕಸಭಾ ಚುನಾವಣೆಯಲ್ಲಿ ಕೊಂಚ ಹಿನ್ನಡೆ ಅನುಭವಿಸಿ ಮುಜುಗರಕ್ಕೊಳಗಾದ ಬಿಜೆಪಿಯು ಈ ಬಾರಿ ತನ್ನ ಕಾರ್ಯತಂತ್ರವನ್ನು ಅನುಭವದ ಹಿನ್ನೆಲೆಯಲ್ಲಿ ಬದಲಿಸಿತ್ತು. ಅಯೋಧ್ಯಾ ಮಂದಿರ, ಕುಂಭಮೇಳದಂಥ ಧಾರ್ಮಿಕ/ದೇಶಭಕ್ತಿಯ ವಿಷಯಗಳಿಗೆ ಒತ್ತುನೀಡದೇ, ಅಭಿವೃದ್ಧಿ, ಉತ್ತಮ ಆಡಳಿತ ಮತ್ತು ಜನಕಲ್ಯಾಣದಂಥ ವಿಷಯಗಳಿಗೆ ಆದ್ಯತೆ ನೀಡಿತು. ಹಾಗೆಯೇ ಆಮ್ ಆದ್ಮಿ ಸರಕಾರದ ಭ್ರಷ್ಟಾಚಾರವನ್ನು ಬ್ರಹ್ಮಾಸ್ತ್ರವನ್ನಾಗಿ ಬಳಸಿತು. ಚುನಾವಣೆ ದೆಹಲಿಯಲ್ಲಾಗಿದ್ದರಿಂದ, ಮೋದಿ ಮತ್ತು ಅಮಿತ್ ಶಾ ಪ್ರಚಾರದಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳುವಂತಾಗಿ ಪಕ್ಷಕ್ಕೆ ಭಾರಿ ಅನುಕೂಲವಾಯಿತು. ಅಮಿತ್ ಶಾ ಅವರಂತೂ 'ವಿಶೇಷ ಕಾರ್ಯಪಡೆ'ಯನ್ನೇ ರಚಿಸಿ, ತಮ್ಮೊಂದಿಗೆ ಕಾರ್ಯಕರ್ತರನ್ನೂ ಸಕ್ರಿಯವಾಗಿ ತೊಡಗಿಸಿಕೊಂಡು ಪಕ್ಷಕ್ಕೆ ಗೆಲುವು ತಂದಿತ್ತರು. ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಆಸಕ್ತಿ ತೋರದಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘವು, ಮಹಾರಾಷ್ಟ್ರ ಚುನಾವಣೆಯಂತೆ ದೆಹಲಿಯಲ್ಲೂ ಕ್ರಿಯಾಶೀಲವಾಗಿದ್ದು ಬಿಜೆಪಿ ಹೊತ್ತಿದ್ದ ಕಾರ್ಯಭಾರವನ್ನು ಸುಲಭಗೊಳಿಸಿತು.

'ಇಬ್ಬರ ಜಗಳ ಮೂರನೆಯವನಿಗೆ ಲಾಭ' ಎಂಬುದು ಹಳೆಯ ಗಾದೆ. 'ಇಂಡಿಯ' ಒಕ್ಕೂಟದ ಆಮ್ ಆದ್ಮಿ ಮತ್ತು ಕಾಂಗ್ರೆಸ್ ಪಕ್ಷಗಳ ಒಳಜಗಳ-ವಿಚ್ಛೇದನವು ದೆಹಲಿಯಲ್ಲಿ ಬಿಜೆಪಿಗೆ ವರವಾಗಿ ಪರಿಣಮಿಸಿತು. ವರದಿಗಳ ಪ್ರಕಾರ, ಸುಮಾರು 17 ಕ್ಷೇತ್ರಗಳಲ್ಲಿ ಆಮ್ ಆದ್ಮಿಯ ಗೆಲುವಿಗೆ ಕಾಂಗ್ರೆಸ್ ಅಡ್ಡಗಾಲು ಹಾಕಿದೆಯಂತೆ. ಕ್ಷುಲ್ಲಕ ವಿಷಯಗಳನ್ನು, ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಅವೆರಡೂ ಒಟ್ಟಾಗಿ ಹೋರಾಡಿದ್ದಿದ್ದರೆ, ಬಿಜೆಪಿಯ ಓಟಕ್ಕೆ ಸ್ವಲ್ಪ ತಡೆಯೊಡ್ಡಬಹುದಿತ್ತು.

ಕೆಲವರು ಇತಿಹಾಸದಿಂದ ಪಾಠ ಕಲಿಯುವುದಿಲ್ಲ ಎಂಬುದು ಕಾಂಗ್ರೆಸ್‌ನ ಶೂನ್ಯ ಸಂಪಾದನೆಯಲ್ಲಿ ಇನ್ನೊಮ್ಮೆ ಸಾಬೀತಾಗಿದೆ. ಒಂದೆರಡು ನಿದರ್ಶನಗಳನ್ನು ಹೊರತುಪಡಿಸಿದರೆ, ಕಾಂಗ್ರೆಸ್ 2014ರಿಂದ ಪಾತಾಳಕ್ಕೆ ಇಳಿಯುತ್ತಿದೆ. ತನ್ನ ಸೋಲಿಗಿರುವ ಕಾರಣವನ್ನು ಹುಡುಕುವಲ್ಲಿ ಅದು ಇನ್ನೊಮ್ಮೆ ವಿಫಲವಾಗಿದೆ. ಬದಲಾದ ಚಿಂತನೆಗಳಿಗೆ ಸ್ಪಂದಿಸದೇ, ತನ್ನ ಹಳೆಯ ಸಿದ್ಧಾಂತಗಳಿಗೇ ಜೋತುಬಿದ್ದು ಚುನಾವಣೆಯಲ್ಲಿ ಅದು ನೆಲಕಚ್ಚುತ್ತಿದೆ. ಇಡೀ ದೇಶವೇ ಒಪ್ಪಿರುವ ಕೆಲ ಪರಿಕಲ್ಪನೆಗಳನ್ನು, ದೇಶದಲ್ಲಿ ಸಾರಾಸಗಟಾಗಿ ತಿರಸ್ಕರಿಸಲ್ಪಡುತ್ತಿರುವ ಸೆಕ್ಯುಲರಿಸಂನ ಹೆಸರಲ್ಲಿ ಅದು ವಿರೋಧಿಸಿ ಬಹುಸಂಖ್ಯಾತರಿಂದ ದೂರವಾಗುತ್ತಿದೆ. ಅಂದರೆ, ತ್ರಿವಳಿ ತಲಾಖ್ ರದ್ದತಿ ವಿಧೇಯಕ, 370ನೇ ವಿಧಿಯ ರದ್ದತಿ, ಸದ್ಯದಲ್ಲಿ ಮಂಡಿಸಲ್ಪಡುವ ಏಕರೂಪ ನಾಗರಿಕ ಸಂಹಿತೆ, ಹಿಜಾಬ್ ನಿಷೇಧ ಮುಂತಾದ ವಿಷಯಗಳಲ್ಲಿ ಅದು ಅಪಸ್ವರವೆತ್ತಿ, ಅಪಾಯವನ್ನು ಆಹ್ವಾನಿಸಿಕೊಂಡಿದೆ. 'ಇಂಡಿಯ' ಒಕ್ಕೂಟದ ಸದಸ್ಯ ಪಕ್ಷದವರೊಬ್ಬರು ಸನಾತನ ಧರ್ಮವನ್ನು ಟೀಕಿಸಿದಾಗ ಕಾಂಗ್ರೆಸ್ಸಿಗರು ಜಾಣಮೌನ ವಹಿಸಿದರು, ಅಯೋಧ್ಯಾ ರಾಮಮಂದಿರವನ್ನು ಜಗತ್ತೇ ಸಂಭ್ರಮಿಸುವಾಗ ಅಪಸ್ವರವೆತ್ತಿದರು. ಸಾಲದೆಂಬಂತೆ, ''ಕುಂಭಮೇಳದಲ್ಲಿ ಮಿಂದರೆ ಬಡತನ ನಿವಾರಣೆಯಾಗುವುದೇ?'' ಎಂದು ಕೇಳಿ ಹಿಂದೂಗಳ ಭಾವನೆಯನ್ನು ಕೆಣಕಿದರು. ಇವೆಲ್ಲವನ್ನೂ ಗಮನಿಸಿ ಜನರು ಬಹುಶಃ ಕಾಂಗ್ರೆಸ್‌ಗೆ ಮತಹಾಕಿಲ್ಲ ಎಂಬ ವಿಶ್ಲೇಷಣೆಯಲ್ಲಿ ಅರ್ಥವಿಲ್ಲದಿಲ್ಲ.

'ಸೆಕ್ಯುಲರಿಸಂ' ಎಂಬ ಕಾಂಗ್ರೆಸ್‌ನ ಟ್ರಂಪ್‌ಕಾರ್ಡ್ ಚಲಾವಣೆ ಕಳೆದುಕೊಂಡಿದೆ. ರಾಷ್ಟ್ರದ ರಾಜಕೀಯ ಭೂಪಟದಲ್ಲಿ ಕಾಂಗ್ರೆಸ್ ಇನ್ನೊಮ್ಮೆ ಮೆರೆಯಬೇಕಾದರೆ, ಅದು ತನ್ನ ಸಿದ್ಧಾಂತಗಳನ್ನು ಬದಲಿಸಿಕೊಂಡು, ದೇಶದ ಜನರ ಬದಲಾದ ಚಿಂತನೆಗೆ ಸ್ಪಂದಿಸಬೇಕು. ಇಲ್ಲದಿದ್ದರೆ ಅದು ಇತಿಹಾಸದ ಪುಟಗಳನ್ನು ಸೇರುವುದು ನಿಶ್ಚಿತ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ನಾಕ್

- ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಅನುಮಾನಿಸುವುದು ಕೂಡ ಒಂದು ವಿಧದಲ್ಲಿ ಅವಮಾನಿಸಿದಂತೆ ಅಲ್ಲವೇ?
– **ಅದನ್ನೂ ಸನ್ಮಾನ ಅಂತ ಯಾರಾದರೂ ಭಾವಿಸುತ್ತಾರಾ?!**

- ಘಂಟಿ ರಾಮಾಚಾರ್ಯ, ಮೈಸೂರು
ಭಟ್ರೇ, ಮದುವೆಯಲ್ಲಿ ಮದುಮಕ್ಕಳಿಗೆ ಕಾಣದ ಅರುಂಧತಿ ನಕ್ಷತ್ರ ಪುರೋಹಿತರಿಗೆ ಮಾತ್ರ ಸ್ಪಷ್ಟವಾಗಿ ಗೋಚರಿಸುವುದು ಹೇಗೆ?
– **ದಕ್ಷಿಣೆ ಕೊಡೋ ತನಕ ಬೇರೇನನ್ನೋ ತೋರಿಸಿ, ಕೊಟ್ಟ ಬಳಿಕ ತೋರಿಸ್ತಾರೆ!**

- ಕಲ್ಮಂಗಿ ಆಚಾರ್ಯ, ಮೈಸೂರು
ಭಟ್ರೇ, ರಾಜ್ಯಸಭೆಯಲ್ಲಿ ಆಗಾಗ ದೊಡ್ಡಗೌಡರು ಮೋದಿಯವರನ್ನು ಅತಿಯಾಗಿ ಹೊಗಳುತ್ತಾರಲ್ಲ?
– **ಮಗನಿಗೆ ಕೊಟ್ಟ ಮಂತ್ರಿ ಖಾತೆ ಭದ್ರವಾಗಿರಲಿ ಅಂತ ಮುಂಜಾಗ್ರತಾ ಕ್ರಮವಂತೆ!**

- ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ರಾಹುಲ್ ಗಾಂಧಿಯವರ ಬಗ್ಗೆ ನೀವು ಅಭಿಮಾನದಿಂದ ಮಾತಾಡಲಾರಂಭಿಸಿದ್ದೀರಂತೆ?
– **ಕಳೆದ 15 ವರ್ಷಗಳಿಂದ ಒಂದೇ ಲೆವೆಲ್ (ದಿಲ್ಲಿಯಲ್ಲಿ ಸೊನ್ನೆ ಸ್ಥಾನ) ಅನ್ನು ಕಾಪಾಡಿಕೊಂಡಿದ್ದಾರಲ್ಲ, ಅದಕ್ಕಾದರೂ ಅಭಿಮಾನ ತೋರಿಸಬೇಕಲ್ಲ!?**

- ಹರಿ ಓಂ ಶಾಸ್ತ್ರೀ, ಶಂಕರಪುರ
ಭಟ್ರೇ, ಇಂದು ಶಸ್ತ್ರಚಿಕಿತ್ಸೆ ಮಾಡಿದ ರೋಬೋಟ್ ಮುಂದೊಂದು ದಿನ ಮದುವೆ, ಶ್ರಾದ್ಧ ಮಾಡಿಸಲ್ಲ ಅಂತ ಏನು ಗ್ಯಾರಂಟಿ?
– **ಬಿಡ್ತು ಅನ್ನು, ಮಕ್ಕಳನ್ನು ಮಾಡುವ ಕಾಲ ಬಂದರೂ ಬರಬಹುದು!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಕೆಲವರ ಪಿತ್ತಕ್ಕೆ ಕಾರಣವೇನು!
– **ಮೋದಿ!**

- ಮನಗೂಳಿ ಭೀಮು, ಸೀತಾಪತಿ ಅಗ್ರಹಾರ
ಭಟ್ಟರು ಮಸ್ಕತ್‌ನಲ್ಲಿ ಸಮಾರಂಭ ಮಾಡಿದರೂ ಅವರ ಬೆಂಬಿಡದ ವಿರೋಧಿಗಳ ಆ ಅನುಮಾನವೇನು?
– **ಈವಯ್ಯ ಏನೋ ಮಸ್ಲತ್ ಮಾಡ್ತವ್ನೇ ಅಂತ ಅನಿಸ್ತಾಯಿಲ್ವ ಅಂತ ಗೊಣಗೋದು!**

- ಎಲ್.ವಿ.ಸತೀಶ್, ಮೈಸೂರು
ಭಟ್ರೇ, ಮನುಷ್ಯನಿಗೆ ನೆಮ್ಮದಿಯಾಗಿ ಇರಲು ಏನು ಬೇಕು?
– **ಸ್ವಲ್ಪ ಹಣ ಮತ್ತು ದಿನವೂ ಭಟ್ಟರ ಸ್ನಾಕ್!**

- ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ಕುಮಾರಣ್ಣ ಹಿಂದಿ ಕಲಿಯಲು ಶುರು ಮಾಡಿದ್ದಾರಂತೆ?
– **ಸಿ.ಟಿ.ರವಿಯವರೇ ಪ್ರೇರಣೆಯಂತೆ!**

ರೆಪೋ ರೇಟ್ ಕುಸಿತ ಅಂದಾಕ್ಷಣ ಅದು ಶುಭಸುದ್ದಿಯಲ್ಲ!

ಪಾಶ್ಚಾತ್ಯ ಆರ್ಥಿಕತೆ ನಿಂತಿರುವುದು ಸಾಲದ ಮೇಲೆ, ತಾವು ಗಳಿಸಿದ, ಖರ್ಚು ಮಾಡಿದ ಪ್ರತಿಯೊಂದು ಹಣವನ್ನೂ ಲೆಕ್ಕ ಇಟ್ಟು ಅದರ ಆಧಾರದ ಮೇಲೆ ಸಮಾಜದ ಆರ್ಥಿಕತೆ ಎಷ್ಟು ದೊಡ್ಡ ಮಟ್ಟದಲ್ಲಿದೆ ಎನ್ನುವುದನ್ನ ಅಳೆಯುವುದರ ಮೇಲೆ. ಇದನ್ನೇ ಜಿಡಿಪಿ ಎನ್ನುವುದು. ಭಾರತವೂ ಸೇರಿದಂತೆ ಬಹಳ ದೇಶಗಳಲ್ಲಿ ಹೀಗೆ ಎಲ್ಲವನ್ನೂ ಲೆಕ್ಕ ಇಡಲು ಹೋಗುವುದಿಲ್ಲ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ರೆಪೋ ರೇಟ್ ಎಂದರೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಇತರ ಬ್ಯಾಂಕುಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರ. ಅಂದರೆ ಆರ್‌ಬಿಐ ಯಾವುದೇ ಭಾರತೀಯ ಬ್ಯಾಂಕಿಗೆ ಸಾಲ ನೀಡಿದರೆ ಆ ಬ್ಯಾಂಕು 6.5 ಪ್ರತಿಶತ ಬಡ್ಡಿ ನೀಡಬೇಕಿತ್ತು. ಅದನ್ನು ಕಡಿಮೆ ಮಾಡಿದ್ದಾರೆ. ಈಗ ರೆಪೋ ರೇಟ್ 6.25 ಪ್ರತಿಶತ ಆಗಿದೆ. 5 ವರ್ಷದ ನಂತರ ಇಂಥ ಒಂದು ಕಡಿತವನ್ನು ಮಾಡಲಾಗಿದೆ. ಈ ಹಿಂದೆ ಇದೇ ರೀತಿ ರೆಪೋ ರೇಟ್ ಕಡಿಮೆ ಮಾಡಿದ್ದಾಗ ಬ್ಯಾಂಕುಗಳು ತಮಗೆ ಸಿಕ್ಕ ಲಾಭವನ್ನು ಗ್ರಾಹಕರಿಗೆ ತಕ್ಷಣ ನೀಡಿರಲಿಲ್ಲ. ಈಗಲೂ ಅಷ್ಟೇ, ಅದು ಆಯಾ ಬ್ಯಾಂಕುಗಳ ಮೇಲೆ ಅವಲಂಬಿತ. ಆರ್‌ಬಿಐ ರೆಪೋ ರೇಟ್ ಕಡಿಮೆ ಮಾಡಿದಾಕ್ಷಣ ಆಟೋಮ್ಯಾಟಿಕ್ ಆಗಿ ಬ್ಯಾಂಕುಗಳಲ್ಲಿ ಕೂಡ ಬಡ್ಡಿ ದರಗಳು ಕಡಿಮೆಯಾಗುತ್ತವೆ ಎನ್ನುವುದು ಸುಳ್ಳು. ಅಲ್ಲದೆ ಆರ್‌ಬಿಐ 0.25 ಪ್ರತಿಶತ ಕಡಿಮೆ ಮಾಡಿದ್ದಾಗ ಬ್ಯಾಂಕುಗಳು ಹೆಚ್ಚೆಂದರೆ 0.15 ಪ್ರತಿಶತ ಕಡಿತಗೊಳಿಸಬಹುದು. ಹೀಗಾಗಿ ಗ್ರಾಹಕನಿಗೆ ಪೂರ್ಣಲಾಭ ಸಿಗುವುದಿಲ್ಲ, ತಕ್ಷಣವೂ ಸಿಗುವುದಿಲ್ಲ. ಸಾಲ ತೆಗೆದುಕೊಂಡವರು ಹೋಗಿ ಕೇಳದಿದ್ದರೆ ಬ್ಯಾಂಕುಗಳು ಆಟೋಮ್ಯಾಟಿಕ್ ಆಗಿ ಕಡಿಮೆ ಮಾಡುವ ಸಂಭವ ಕೂಡ ಕಡಿಮೆ. ಸೂಪರ್ ಫಾಸ್ಟ್ ಆಗಿ ಇದನ್ನು ಬ್ಯಾಂಕುಗಳು ಅಳವಡಿಸಿಕೊಳ್ಳುತ್ತವೆ ಎಂದರೂ ಕನಿಷ್ಠ 2 ವಾರ ವೇಳೆ ತಗಲುತ್ತದೆ. ಹಿರಿಯ ನಾಗರಿಕರು, ಬ್ಯಾಂಕಿನಲ್ಲಿ ಠೇವಣಿ ಇಡಲು ಬಯಸುವವರು ತ್ವರೆ ಮಾಡಿ. ಇಲ್ಲವಾದಲ್ಲಿ ಸಿಗುವ ಬಡ್ಡಿಯಲ್ಲಿ ಸ್ವಲ್ಪ ಕಡಿಮೆಯಾಗಲಿದೆ.

ಇದು ಶುಭಸುದ್ದಿ ಎನ್ನುವಂತೆ ಬಹಳಷ್ಟು ಜನ ನೋಡುತ್ತಾರೆ. ಹಣದುಬ್ಬರ ಕಡಿಮೆಯಾಗದೆ ರೆಪೋ ರೇಟ್ ಕಡಿಮೆ ಮಾಡುವುದು ಒಳ್ಳೆಯದಲ್ಲ. ಆರ್‌ಬಿಐ ಪ್ರಕಾರ ಫೆಬ್ರವರಿ 2025ರಲ್ಲಿ ರಿಟೇಲ್ ಹಣದುಬ್ಬರ 4.2ರಷ್ಟಿದೆ! ಮಜಾ ಎಂದರೆ ಹಣದುಬ್ಬರದ ಕಾರಣ 15 ರುಪಾಯಿ ಆದ ಕಾಫಿ ಮತ್ತೆಂದೂ 10 ರುಪಾಯಿ ಆಗುವುದಿಲ್ಲ. ಏರಿದ ಬಸ್ ಟಿಕೆಟ್ ಇಳಿದ ಉದಾಹರಣೆ ಕಂಡಿಲ್ಲ. ಹೀಗೆ ಎಲ್ಲವೂ. ಆದರೂ ರಿಟೇಲ್ ಹಣದುಬ್ಬರ ಕಡಿಮೆಯಾಗಿದೆಯಂತೆ, ಇರಲಿ.

ಭಾರತದಲ್ಲಿ ಹಣದುಬ್ಬರ ಕಡಿಮೆಯಾಗಿಲ್ಲ ಎನ್ನುವುದಕ್ಕೆ ಕಳೆದ ಐದು ವರ್ಷದಿಂದ ಆರ್‌ಬಿಐ ತನ್ನ ರೆಪೋ ರೇಟ್ ಕಡಿಮೆ ಮಾಡದೆ ಇರುವುದು ಬಹುದೊಡ್ಡ ಸಾಕ್ಷಿ. ಕನ್ಸ್ಯೂಮರ್ ಪ್ರೈಸ್ ಇಂಡೆಕ್ಸ್ ಪ್ರಕಾರ ಅಕ್ಟೋಬರ್ 2024ರಲ್ಲಿ ಹಣದುಬ್ಬರ ಸಂಖ್ಯೆ ಭಾರತದಲ್ಲಿ 6.1 ಮತ್ತು ಫೆಬ್ರವರಿ 2025ರಲ್ಲಿ 4.2! ಇದು ಯಾವುದೇ ಲೆಕ್ಕಾಚಾರದಲ್ಲೂ ಹೊರಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಹಣದುಬ್ಬರದ ಹತ್ತಿರವೂ ಸುಳಿಯುವುದಿಲ್ಲ ಎನ್ನುವುದು ತಿಂಗಳ ಕೊನೆ ಮುಟ್ಟಲು ಹೆಣಗುವ ಪ್ರತಿಯೊಬ್ಬ ನಾಗರಿಕರಿಗೂ ಗೊತ್ತಿರುವ ಸತ್ಯ. ನೀವೇ ಗಮನಿಸಿ ನೋಡಿ, ನಮ್ಮಲ್ಲಿ ರೆಪೋ ರೇಟ್ 6.25 ಪ್ರತಿಶತವಿದೆ. ಹಣದುಬ್ಬರವು ಸರಕಾರ ಹೇಳುವ ಪ್ರಕಾರ 4.2 ಪ್ರತಿಶತ ಇರುವುದು ನಿಜವೇ ಆಗಿದ್ದಿದ್ದರೆ ಕಳೆದ ಬಾರಿಯ ಸಭೆಯಲ್ಲಿ ಆರ್‌ಬಿಐ ರೆಪೋ ರೇಟ್ ಕಡಿಮೆ ಮಾಡಬೇಕಾಗಿತ್ತು. ಅದು ಆಗಿಲ್ಲ. ಇನ್ನೊಂದು ಪ್ರಮುಖ ಅಂಶವೇನು ಗೊತ್ತೇ? ಭಾರತೀಯ ಮಧ್ಯಮವರ್ಗದವರು ಬ್ಯಾಂಕುಗಳಿಂದ ಬಹಳ ಬೇಸತ್ತಿದ್ದಾರೆ. ಸರಿಯಾಗಿ ಸಿಗದ ಸೇವೆ, ಕಡಿಮೆ ಬಡ್ಡಿದರ, ಬ್ಯಾಂಕ್ ನೌಕರರ ಸಿಡುಕಾಟ ಇವೆಲ್ಲವೂ ಅವರನ್ನು ಬ್ಯಾಂಕಿನಿಂದ ದೂರ ಮಾಡುತ್ತಿವೆ. ಆದ್ದರಿಂದ ಪ್ರಥಮ ಬಾರಿಗೆ ಭಾರತದಲ್ಲಿ ಹಣ ಉಳಿಸುವರ ಸಂಖ್ಯೆಯಲ್ಲಿ, ಹಣದ ಮೊತ್ತದಲ್ಲಿ ಎರಡರಲ್ಲೂ ಕುಸಿತ ಕಂಡಿದೆ. ಹೀಗಾಗಿ ಬ್ಯಾಂಕುಗಳಲ್ಲಿ ಲಿಕ್ವಿಡಿಟಿ ಸಮಸ್ಯೆ ಶುರುವಾಗುತ್ತದೆ. ನಿಜ ಹೇಳಬೇಕೆಂದರೆ ಆ ಸಮಸ್ಯೆಯ ಬಿಸಿ ಆಗಲೇ ತಟ್ಟಲು ಶುರುವಾಗಿದೆ. ಬ್ಯಾಂಕುಗಳಲ್ಲಿ ಠೇವಣಿ ಹಣ ಇಲ್ಲದ ಸಮಯದಲ್ಲಿ ಆರ್‌ಬಿಐ ರೆಪೋ ರೇಟ್ ಕಡಿತ ಮಾಡಿರುವುದು ನಿಜಕ್ಕೂ ಅಚ್ಚರಿ.

ನಮ್ಮದು ಬಹಳ ಹಿಂದಿನಿಂದಲೂ ಉಳಿಕೆಯನ್ನ ಅದರಲ್ಲೂ ಸಣ್ಣ ಉಳಿತಾಯವನ್ನ ನಂಬಿ ಬದುಕುತ್ತಿರುವ ಸಮಾಜ. ಮನೆ ಖರ್ಚಿಗೆಂದು ನೀಡುವ ಹಣದಲ್ಲೂ ಒಂದಷ್ಟು ಉಳಿಕೆ ಮಾಡಿ ಅದೆಷ್ಟೋ ಸಂಸಾರಗಳನ್ನ ಕಷ್ಟಕಾಲದಲ್ಲಿ ಕಾಪಾಡಿದ ನಿದರ್ಶನಗಳು ನಮ್ಮ ಮುಂದಿದೆ. ಆದರೆ ಇತ್ತೀಚೆಗಂತೂ ಭಾರತದಲ್ಲಿ ಕೂಡ ಸಾಮಾನ್ಯ ಜನರು ಉಳಿತಾಯ ಮಾಡುವುದರಿಂದ ಏನು ಪ್ರಯೋಜನ ಎಂದು ಕೇಳುವ ಮಟ್ಟಕ್ಕೆ ಸರಕಾರವು ಉಳಿತಾಯದ ಮೇಲಿನ ಬಡ್ಡಿಯನ್ನ ಕಡಿಮೆ ಮಾಡಿದೆ. ಎಲ್ಲಕ್ಕೂ ಪಾಶ್ಚಾತ್ಯ ಆರ್ಥಿಕತೆಯನ್ನ ಅನುಸರಿಸಿದರೆ ಅವರಿಗಾದ ಗತಿಯೇ ನಮ್ಮದು ಕೂಡ ಆಗಲಿದೆ. ಭಾರತದಲ್ಲಿ ಕೂಡ ಮುಂದಿನ ಹತ್ತಾರು ವರ್ಷದ ಹಣವನ್ನ ಮುಂಗಡವಾಗಿ ತೆಗೆದುಕೊಂಡು ಖರ್ಚು ಮಾಡುವ ಸಂಪ್ರದಾಯ ಬೆಳೆದುಬಿಟ್ಟಿದೆ. ಇಂದು ಅಮೆರಿಕದಲ್ಲಿ ಆಗುತ್ತಿರುವ ಘಟನೆಗಳು ನಮಗೆ ಎಚ್ಚರಿಕೆಯ ಗಂಟೆ! ಈಗ ನಿಮ್ಮಲ್ಲಿ ಒಂದು ಪ್ರಶ್ನೆ ಮೂಡಿರುತ್ತದೆ, ಖರ್ಚು ಮಾಡದೆ ಮಿತವಾಗಿ ಬಳಸಿಕೊಂಡು ಸಾಲವನ್ನ ಮಾಡದೆ ಇದ್ದರೆ ದೇಶ ಅಭಿವೃದ್ಧಿ ಕಾಣುವುದು ಹೇಗೆ? ನಮ್ಮ ಕಾಲಘಟ್ಟದ ಅತ್ಯಂತ ದೊಡ್ಡ ದುರಂತವೆಂದರೆ ಸಾಲ ಮಾಡಿ ಸೃಷ್ಟಿಯಾದ ಸಂಪತ್ತನ್ನ ಅಭಿವೃದ್ಧಿ ಎನ್ನುವಂತೆ ಬಿಂಬಿಸುತ್ತಿರುವುದು. ಇಲ್ಲದ ಆಸ್ತಿಯನ್ನ ಸೃಷ್ಟಿಸಿ ಆನಂದ ಪಡುವುದು ಜಾಣತನವೇ? ನಿಮ್ಮನ್ನ ನೀವೇ ಪ್ರಶ್ನಿಸಿಕೊಳ್ಳಿ.

ಪಾಶ್ಚಾತ್ಯ ಆರ್ಥಿಕತೆ ನಿಂತಿರುವುದು ಸಾಲದ ಮೇಲೆ, ತಾವು ಗಳಿಸಿದ, ಖರ್ಚು ಮಾಡಿದ ಪ್ರತಿಯೊಂದು ಹಣವನ್ನೂ ಲೆಕ್ಕ ಇಟ್ಟು ಅದರ ಆಧಾರದ ಮೇಲೆ ಸಮಾಜದ ಆರ್ಥಿಕತೆ ಎಷ್ಟು ದೊಡ್ಡ ಮಟ್ಟದಲ್ಲಿದೆ ಎನ್ನುವುದನ್ನ ಅಳತೆ ಮಾಡುವುದರ ಮೇಲೆ. ಇದನ್ನೇ ನಾವು ಜಿಡಿಪಿ ಎನ್ನುವುದು. ಭಾರತವೂ ಸೇರಿದಂತೆ ಬಹಳ ದೇಶಗಳಲ್ಲಿ ಹೀಗೆ ಎಲ್ಲವನ್ನೂ ಲೆಕ್ಕ ಇಡಲು ಹೋಗುವುದಿಲ್ಲ. ಅದು ನಮ್ಮ ಸಂಸ್ಕಾರವೂ ಅಲ್ಲ. ಉದಾಹರಣೆಗೆ ಇಂಗ್ಲೆಂಡ್ ಮತ್ತು ಅಮೆರಿಕದಂಥ ದೇಶಗಳಲ್ಲಿ ಫಂಡ್ ರೈಸಿಂಗ್ ಎನ್ನುವುದು ಒಂದು ದೊಡ್ಡ ಉದ್ಯಮ. ದಾನ-ಧರ್ಮಕ್ಕೆ ಎಂದು ತೆರೆದ ಲಾಭಕ್ಕಲ್ಲದ ಸಂಸ್ಥೆಗಳಿಗೆ ಹಣವನ್ನ ದೇಣಿಗೆಯ ರೂಪದಲ್ಲಿ ತರಲು ಕೂಡ ಬಹಳಷ್ಟು ಜನರು, ಸಂಸ್ಥೆಗಳು ಇವೆ. ಆದರೆ ಭಾರತದಲ್ಲಿ ಅದು ಇಲ್ಲ. ಇದ್ದರೂ ಅಲ್ಲಿನಷ್ಟು ಭರಾಟೆಯಂತೂ ಖಂಡಿತ ಇಲ್ಲ. ಏಕೆಂದರೆ ನಮ್ಮದು ಎಡಗೈಯಲ್ಲಿ ಕೊಟ್ಟದ್ದು ಬಲಗೈಗೆ ತಿಳಿಯಬಾರದು ಎನ್ನುವ ಸಂಪ್ರದಾಯ ಅಥವಾ ಮನಸ್ಥಿತಿ ಹೊಂದಿದ ದೇಶ.

ಕೇವಲ ದಾನ-ಧರ್ಮದ ವಿಷಯದಲ್ಲಿ ಮಾತ್ರವಲ್ಲ, ಬಹಳ ವಿಷಯದಲ್ಲಿ ನಮ್ಮದು ಎಲ್ಲವನ್ನೂ ಸಮಸ್ಥಿತಿಯಲ್ಲಿ ಇಟ್ಟಿದ್ದ ಸಮಾಜ. ಉದಾಹರಣೆ ನೋಡೋಣ- ಹಿಂದೆ ನಮ್ಮ ಮನೆಯ ಹಿತ್ತಲಲ್ಲಿ ಒಂದೆರಡು ಆಕಳುಗಳು ಇರುತ್ತಿದ್ದವು. ಅವುಗಳಿಂದ ಹಾಲು, ಅದರಲ್ಲೂ ಕಲಬೆರಕೆಯಿಲ್ಲದ ತಾಜಾ ಹಾಲು ಸಿಗುತ್ತಿತ್ತು. ಹಾಗೆಯೇ ತರಕಾರಿ, ಹೂವು, ಸೊಪ್ಪು ಇತ್ಯಾದಿಗಳು ಅಲ್ಲಿಯೇ ಸಿಗುತ್ತಿದ್ದವು. ಅವುಗಳನ್ನ ನಾವು ಕೊಳ್ಳುವ ಪ್ರಮೇಯವೇ ಬರುತ್ತಿರಲಿಲ್ಲ. ಹೀಗೆ ನಾವು ಕೊಳ್ಳದೆ ಅದರ ಉಪಭೋಗವನ್ನ ಮಾಡಿದರೆ ಅದು ಜಿಡಿಪಿ ಲೆಕ್ಕಕ್ಕೆ ಬರುವುದಿಲ್ಲ! ಪಾಶ್ಚಾತ್ಯರ ಪ್ರಕಾರ ನೀವು ಯಾವುದೇ ವಸ್ತುವನ್ನ ಅಥವಾ ಸೇವೆಯನ್ನ ಹಣವನ್ನ ನೀಡದೆ ಬಳಸಿಕೊಂಡರೆ ಅದು ಲೆಕ್ಕಕ್ಕೆ ಬರುವುದಿಲ್ಲ. ಹೀಗಾಗಿ ನಿಮ್ಮ ಸಮಾಜವೆಷ್ಟು ದೊಡ್ಡದು, ನಿಮ್ಮ ಆರ್ಥಿಕತೆಯೆಷ್ಟು ಸಬಲ ಎನ್ನುವ ಅವರ ಲೆಕ್ಕಾಚಾರದಲ್ಲಿ ತಪ್ಪಾಗುತ್ತದೆ.

ರೆಪೋ ರೇಟ್ ಕುಸಿತದಿಂದ ಮುಖ್ಯವಾಗಿ ಯಾರಿಗೆಲ್ಲಾ ಲಾಭ, ಯಾರಿಗೆ ನಷ್ಟ ಎಂದು ನೋಡಬಹುದು. ಜತೆಗೆ ಸಮಾಜದಲ್ಲಿ ಸಾಮರಸ್ಯ ಕೆಡದಂತೆ ಇಡಲು ಇದು ಅವಶ್ಯಕ ಕೂಡ.

1) ಮೊದಲ ಸಾಲಿನಲ್ಲಿ ಹೇಳಿದಂತೆ ನಮ್ಮದು ಅತ್ಯಂತ ದೊಡ್ಡ ದೇಶ. ಎಲ್ಲಾ ನಿರ್ಧಾರಗಳು ಎಲ್ಲರಿಗೂ ಅನುಕೂಲ ಮಾಡಿಕೊಡುವುದಿಲ್ಲ. ಆದರೆ ಬಡ್ಡಿ ದರ ಇಳಿಕೆಯು, 12 ಕೋಟಿಗೂ ಮೀರಿ ಇರುವ ಹಿರಿಯ ನಾಗರಿಕರ ಮುಖದಲ್ಲಿದ್ದ ಸಣ್ಣನೆಯ ನಗುವನ್ನ ಕಸಿಯುವುದು ಮಾತ್ರ ಸುಳ್ಳಲ್ಲ. ಗಮನಿಸಿ- ಇಂಗ್ಲೆಂಡ್ ಮತ್ತು ಕೆನಡಾ ದೇಶಗಳ ಒಟ್ಟು ಜನಸಂಖ್ಯೆಯಷ್ಟು ನಮ್ಮಲ್ಲಿ ಹಿರಿಯ ನಾಗರಿಕರು ಇದ್ದಾರೆ! ಇವರ ಆದಾಯದ ಮೂಲ ಜೀವನ ಪೂರ್ತಿ ಕಷ್ಟಪಟ್ಟು ಗಳಿಸಿ ಉಳಿಸಿದ ಒಂದಷ್ಟು ಹಣ. ಅದನ್ನ ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ಬಡ್ಡಿಯಲ್ಲಿ ಅವರ ಜೀವನ ಸಾಗಬೇಕು. ಸೋಷಿಯಲ್ ಸೆಕ್ಯೂರಿಟಿ ಇಲ್ಲದ ನಮ್ಮ ದೇಶದಲ್ಲಿ ಪಿಂಚಣಿ ಗಳಿಸುವವರ ಸಂಖ್ಯೆ ನಗಣ್ಯ. ಹೀಗಾಗಿ ಈ ವರ್ಗದ ಜನರ ಜತೆಗೆ ಕೈಲಾಗದವರು, ಅಸಹಾಯಕರು ಸೀಮಿತ ಹಣದ ಮೇಲಿನ ಬಡ್ಡಿಯಲ್ಲಿ ಜೀವನ ಸಾಗಿಸುವ ಲಕ್ಷಾಂತರ ಜನರಿಗೆ ಬಡ್ಡಿದರ ಕಡಿಮೆಯಾದರೆ ಅದು ಶಾಪ. ಸದ್ಯದ ಮಟ್ಟಿಗೆ ಇವರ ಬದುಕು ಬಹಳ ಕಷ್ಟವಾಗಲಿದೆ.

2) ಬಡ್ಡಿ ದರ ಕಳೆದ 7 ವರ್ಷದಿಂದ ಇಳಿಮುಖವಾಗಿದೆ. ಇದು ಕಳೆದ 5 ವರ್ಷದಿಂದ ಅಲುಗಾಡದೆ ನಿಂತಲ್ಲೆ ನಿಂತಿತ್ತು. ಇದು ರಿಯಲ್ ಎಸ್ಟೇಟ್‌ಗೆ ವರದಾನವಾಗಿದೆ. ಲಕ್ಷಾಂತರ ಜನ ಇಳಿದ ಬಡ್ಡಿ ದರದ ಅನುಕೂಲ ಪಡೆದು ಮನೆ ಕಟ್ಟಲು, ಕಾರು ಕೊಳ್ಳಲು ಸಾಲ ಪಡೆದರು. ಇದೀಗ ಕಡಿಮೆಯಾಗಿರುವ ಬಡ್ಡಿ ದರದಿಂದ ಒಂದಷ್ಟು ಮಾಸಿಕ ಕಂತು ಕಟ್ಟುವ ಹಣದಲ್ಲಿ ಕಡಿಮೆಯಾಗಲಿದೆ. ಭಾರತದಲ್ಲಿ ಹಣದುಬ್ಬರ ಎರಡು ಅಂಕಿಯಲ್ಲಿದೆ. ಹೀಗಿದ್ದೂ ಬಡ್ಡಿ ಕಡಿಮೆ ಮಾಡಿರುವುದು ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಲಿದೆ. ಕಳೆದ ವಾರದ ಬಜೆಟ್‌ನಲ್ಲಿ 12 ಲಕ್ಷ ರುಪಾಯಿ ತನಕ ತೆರಿಗೆ ಇಲ್ಲವಾಗಿಸಿದ್ದು ಮತ್ತು ಈಗಿನ ಬಡ್ಡಿ ದರ ಕುಸಿತ ಎರಡೂ ಮಧ್ಯಮ ವರ್ಗದ ಜನರ ಕೈಯಲ್ಲಿ ಒಂದಷ್ಟು ಹಣ ಉಳಿಯುವಂತೆ ಮಾಡುತ್ತದೆ.

3) ಕಳೆದ 5 ತಿಂಗಳಿನಿಂದ ಒಂದೇ ಸಮನೆ ಕುಸಿತದ ಹಾದಿಯಲ್ಲಿರುವ ಷೇರು ಮಾರುಕಟ್ಟೆ ಇದರಿಂದ ಒಂದಷ್ಟು ಚೇತರಿಕೆ ಕಾಣುವ ಸಾಧ್ಯತೆಗಳಿವೆ. ಕುಸಿದ ಬಡ್ಡಿಯು ತಕ್ಷಣ ಅಲ್ಲದಿದ್ದರೂ ಮಾರುಕಟ್ಟೆಯ ಮೇಲೆ ಧನಾತ್ಮಕವಾಗಿ ಪರಿಣಾಮವನ್ನು ಬೀರಲಿದೆ. ಮಧ್ಯಮವರ್ಗದ ಜನರ ಕೈಯಲ್ಲಿ ಉಳಿದ ಹಣ ಮಾರುಕಟ್ಟೆಗೆ ಬರುತ್ತದೆ. ಏಕೆಂದರೆ ಬ್ಯಾಂಕಿನಲ್ಲಿ ಸಿಗುವ ಠೇವಣಿ ಮೇಲಿನ ಬಡ್ಡಿದರ ಕೂಡ ಕುಸಿತ ಕಾಣುತ್ತದೆ. ಹೀಗಾಗಿ ಅವರಿಗೆ ಷೇರು ಮಾರುಕಟ್ಟೆ ಪ್ರವೇಶಿಸದೆ ಅನ್ಯ ಮಾರ್ಗವಿಲ್ಲ.

4) ಕಾರ್ಪೊರೇಟ್ ಸಂಸ್ಥೆಗಳಿಗೆ ಸಾಲ ಇನ್ನಷ್ಟು ಚೀಪ್ ಆಗುತ್ತದೆ. ಹೀಗಾಗಿ ಅವರು ಹೆಚ್ಚಿನ ಸಾಲವನ್ನು ಪಡೆಯಬಹುದು. ಹೀಗೆ ಪಡೆದ ಸಾಲವನ್ನು ಸಂಸ್ಥೆಯ ಉತ್ಪಾದನೆಯಲ್ಲಿ ತೊಡಗಿಸಿಕೊಂಡರೆ ಅದರಿಂದ ದೇಶದ ಅಭಿವೃದ್ಧಿ, ಕೆಲಸ ಹೆಚ್ಚಳ ಕೂಡ ಆಗುತ್ತದೆ.

ಬಡ್ಡಿ ದರ ಕಡಿಮೆಯಾದರೆ ಒಳ್ಳೆಯದು, ಜಾಸ್ತಿಯಾದರೆ ಕೆಟ್ಟದ್ದು ಎನ್ನುವಂತಿಲ್ಲ. ಇದು ದೇಹದಲ್ಲಿ ಶುಗರ್ ಇದ್ದಂತೆ! ಹೆಚ್ಚಾದರೂ, ಕಡಿಮೆಯಾದರೂ ಕಷ್ಟ. ಇದು ಸಮಪ್ರಮಾಣದಲ್ಲಿರಬೇಕು. ಆದರೆ ಇದನ್ನು ಸಮ ಪ್ರಮಾಣದಲ್ಲಿಡುವುದು ಬಹಳ ಕಷ್ಟದ ಕೆಲಸ. ಭಾರತೀಯ ಬ್ಯಾಂಕುಗಳಲ್ಲಿ ಲಿಕ್ವಿಡಿಟಿ ಸಮಸ್ಯೆಯಿದೆ. ಇದರಿಂದ ಪಾರಾಗಲು ಹೆಚ್ಚಿನ ಡೆಪಾಸಿಟ್ ಬೇಕು. ಜನ ಬ್ಯಾಂಕಿನಲ್ಲಿ ಹಣವನ್ನು ಇಡಬೇಕು ಎಂದರೆ ಡೆಪಾಸಿಟ್ ಬಡ್ಡಿ ದರ ಹೆಚ್ಚಿರಬೇಕು. ಈಗ ಬಡ್ಡಿ ದರವನ್ನು ಕಡಿಮೆ ಮಾಡಿದ್ದಾರೆ. ಜನರೇಕೆ ಕಡಿಮೆ ಬಡ್ಡಿಗೆ ಬ್ಯಾಂಕಿನಲ್ಲಿ ಹಣವನ್ನು ಇಡುತ್ತಾರೆ? ಹೀಗಾಗಿ ಭಾರತದ ಬ್ಯಾಂಕುಗಳಲ್ಲಿ ಮುಂದಿನ ವರ್ಷಗಳಲ್ಲಿ ಇನ್ನಷ್ಟು ಲಿಕ್ವಿಡಿಟಿ ಕೊರತೆ ಹೆಚ್ಚಾಗುವ ಸಾಧ್ಯತೆಯಿದೆ. ಭದ್ರತೆಯನ್ನು ಮಾತ್ರ ಪ್ರಮುಖವಾಗಿ ನೋಡುವ ಜನರು ಮಾತ್ರ ಬ್ಯಾಂಕಿನಲ್ಲಿ ಹಣವನ್ನು ಇಡುತ್ತಾರೆ. ಆದರೆ ಬ್ಯಾಂಕು ನೀಡುವ ಬಡ್ಡಿ ದರಕ್ಕಿಂತ ಹಣದುಬ್ಬರ ಸದಾ ಹೆಚ್ಚಾಗಿರುತ್ತದೆ. ಆದ್ದರಿಂದ ಬ್ಯಾಂಕಿನಲ್ಲಿ ತೊಡಗಿಸಿದ ಹಣ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಹೀಗಾಗಿ ಇದು ಎರಡು ಅಲಗಿನ ಖತ್ತಿ. ಸದಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ.



ನಾರದ ಸಂಚಾರ
ಕಲಹಪ್ರಿಯ
naadigru@gmail.com

ನಿತೀಶ್ ಎಂಬ ಕಿಲಾಡಿ

‘ನಾವು ಕಾಲಕ್ಕೆ ತಕ್ಕಂತೆ ನಡೆಯಬೇಕು, ಎಂದೂ ತಾಳಕ್ಕೆ ತಕ್ಕಂತೆ ಕುಣಿಯಬೇಕು’ ಎಂಬ ಹಾಡಿನ ಸಾಲು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಸಖತ್ತಾಗಿ ಸೂಟ್ ಆಗುತ್ತೆ ಕಣ್ರಿ. ಏಕೆಂದರೆ, ರಾಜಕೀಯದ ಅಖಾಡದಲ್ಲಿ ಯಾವಾಗ ಏನು ಪಟ್ಟು ಹಾಕಬೇಕು, ಎದುರಾಳಿಗಳನ್ನು ಹೇಗೆ ಮಣ್ಣು ಮುಕ್ಕಿಸಬೇಕು ಎಂಬುದನ್ನು ಮಾತ್ರವಲ್ಲದೆ, ಸ್ವಂತ ಅಸ್ತಿತ್ವಕ್ಕೇ ಧಕ್ಕೆ ಬಂದಾಗ ಅವಕಾಶವಾದಿ ರಾಜಕಾರಣವನ್ನು ಹೇಗೆ ಮಾಡಬೇಕು ಎಂಬುದನ್ನೂ ಚೆನ್ನಾಗಿ ಅರಿತಿರುವ ಮಹಾನುಭಾವರು ನಮ್ ನಿತೀಶರು.

ಅದರಲ್ಲೂ ನಿರ್ದಿಷ್ಟವಾಗಿ, ಜಿತನ್ ರಾಮ್ ಮಾಂಝಿ ಅವರ ವಿಷಯದಲ್ಲಿ ನಿತೀಶ್ ಕುಮಾರರು ಆಡುತ್ತಿರುವ ನವ ರಂಗಿ ಆಟಗಳು, ಯಾವುದೇ ಬಾಲಿವುಡ್ ಸಿನಿಮಾದ ಸ್ಕ್ರಿಪ್ಟ್‌ಗೆ ಗ್ರಾಸವನ್ನು ಒದಗಿಸಬಲ್ಲವು. ಮೊಟ್ಟಮೊದಲಿಗೆ ಅವರು 2014ರಲ್ಲಿ ಮಾಂಝಿ ಅವರಿಗೆ ಬಿಹಾರದ ಮುಖ್ಯಮಂತ್ರಿಯಾಗಿ ಪಟ್ಟಾಭಿಷೇಕ ಮಾಡಿದರು, ಆದರೆ ಇಬ್ಬರ ನಡುವೆ ಅದೇನು ಎಡವಟ್ಟಾಯ್ತೋ ಗೊತ್ತಿಲ್ಲ, 2015ರಲ್ಲಿ ಅದೇ ಮಾಂಝಿಯವರನ್ನು ನಿತೀಶರು ಪದಚ್ಯುತಗೊಳಿಸಿ ಕೈತೊಳೆದುಕೊಂಡರು. ಹಗ್ಗಜಗ್ಗಾಟ ಇಷ್ಟಕ್ಕೇ ನಿಲ್ಲದೆ 2023ರ ಹೊತ್ತಿಗೆ ಇನ್ನೂ ತೀವ್ರವಾಯಿತು. ಮಾಂಝಿಯವರಂಥ ಮಹಾದಲಿತ ನಾಯಕನನ್ನೇ ‘ಯಾವುದೇ ಪ್ರಯೋಜನಕ್ಕೆ ಬಾರದ ವ್ಯಕ್ತಿ’ ಎಂಬರ್ಥದಲ್ಲಿ ಹೀಗಳೆದ ನಿತೀಶರು, ಲಾಲು ಪ್ರಸಾದ್ ಯಾದವ್‌ರ ರಾಷ್ಟ್ರೀಯ ಜನತಾದಳ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡರು. ತರುವಾಯ ಅದನ್ನೂ ಝಾಡಿಸಿ, ಎನ್‌ಡಿಎ ಜತೆಗೆ ಪ್ರಸ್ತುತ ‘ಹನಿಮೂನ್’ ನಡೆಸಿದ್ದಾರೆ. ಆದರೀಗ, ಬಿಹಾರದಲ್ಲಿ ಚುನಾವಣಾ ಅಖಾಡ ರಂಗೇರುತ್ತಿರುವುದರಿಂದ ಮತ್ತೊಂದು ಸುತ್ತಿನ ನವರಂಗಿ ನಾಟಕಕ್ಕೆ ನಿತೀಶ್ ಚಾಲನೆ ನೀಡಿದ್ದಾರೆ. ಫೆಬ್ರವರಿ 2ರಂದು ಏಕಾಏಕಿ ಮಾಂಝಿ ಅವರ ಪಟನಾ ಮನೆಗೆ ಭೇಟಿಯಿತ್ತ ನಿತೀಶರು, ‘ಇವರೊಂದು ದೊಡ್ಡ ಬ್ಲಂಡರ್’ ಎಂದು ತಾವೇ ಒಂದು ಕಾಲಕ್ಕೆ ಕರೆದಿದ್ದ ಆ ವ್ಯಕ್ತಿಯನ್ನು ಬಾಚಿ ತಬ್ಬಿಕೊಂಡರು. ಚುನಾವಣಾ ಪರ್ವವು ಠಳಾಯಿಸುತ್ತಿರುವಾಗ, ಕೆಲವರ ಕೆಲವೊಂದು ತಪ್ಪುಗಳು ಅಷ್ಟೊಂದು ದೊಡ್ಡದಾಗಿ ಕಾಣುವುದಿಲ್ಲ ಎಂಬುದಕ್ಕೆ ನಿತೀಶರಿಗಿಂತ ಮತ್ತು ಅವರ ಅವಕಾಶವಾದಿತನಕ್ಕಿಂತ ಮತ್ತೊಂದು ನಿದರ್ಶನ ಬೇಕಿದೆಯೇ?!

ಕಮಾಲ್ ಮಾಡದ ‘ದೂಸ್ರಾ’

ಮಾಜಿ ಕ್ರಿಕೆಟಿಗ ಹಾಗೂ ಹಾಲಿ ರಾಜ್ಯಸಭಾ ಸದಸ್ಯ ಹರ್‌ಭಜನ್ ಸಿಂಗ್‌ರನ್ನು ಆಪ್ತರು ‘ಭಜ್ಜಿ’ ಎಂದೇ ಪ್ರೀತಿಯಿಂದ ಕರೆಯುವುದು ವಾಡಿಕೆ. ಕ್ರಿಕೆಟ್ ಪಿಚ್‌ನಲ್ಲಿ ಸಾಕಷ್ಟು ಕಮಾಲ್ ಮಾಡಿದ್ದ ಭಜ್ಜಿ, ರಾಜಕೀಯದ ಪಿಚ್‌ನಲ್ಲೂ ಕಮಾಲ್ ತೋರಿಸುವುದಿನ್ನೂ ಬಾಕಿಯಿದೆ. ಆದರೆ ಅದಕ್ಕೆ ಅವಕಾಶಗಳೇ ಸಿಗದಿದ್ದುದಕ್ಕೆ ಭಜ್ಜಿ ಮಾತ್ರವಲ್ಲದೆ ಅವರ ಅಭಿಮಾನಿಗಳೂ ಶಾನೆ ಬೇಸರ ಮಾಡಿಕೊಂಡಿದ್ದುಂಟು. ಕಾರಣ, ಲೋಕಸಭೆಯ ಪ್ರಚಾರಕಾರ್ಯದ ವೇಳೆಯಾಗಲೀ ಅಥವಾ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲರ ಬಂಧನದ ವಿರುದ್ಧ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯ ವೇಳೆಯಾಗಲೀ ಪಕ್ಷದವರು ಭಜ್ಜಿಯನ್ನು ಬಳಸಿಕೊಳ್ಳದೆ ಮೂಲೆಗುಂಪು ಮಾಡಿದ್ದು. ಆದರೆ, ದೆಹಲಿ ವಿಧಾನಸಭಾ ಚುನಾವಣಾ ಪ್ರಚಾರವು ‘ಅಂತಿಮ ಓವರ್’ ಹಂತಕ್ಕೆ ಪ್ರವೇಶಿಸುವಾಗ ಮಾತ್ರವೇ ಕಾಟಾಚಾರಕ್ಕೆಂಬಂತೆ ಹರ್‌ಭಜನ್ ಸಿಂಗ್‌ರಿಗೆ ಮಣೆಹಾಕಲಾಯಿತು. ದೆಹಲಿ ಮುಖ್ಯಮಂತ್ರಿಯಾಗಿದ್ದ ಆತಿಶಿ, ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾರ ಕಣಗಳು ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಭಜ್ಜಿ ಪ್ರಚಾರಕ್ಕೆ ಇಳಿದಿದ್ದೂ ಉಂಟು. ಆದರೆ ಮತದಾರ ಮಹಾಪ್ರಭುವು ಆಮ್ ಆದ್ಮಿ ಪಾರ್ಟಿಯನ್ನೇ ಮಕಾಡೆ ಮಲಗಿಸಿ ಬಿಜೆಪಿಯನ್ನು ಗದ್ದುಗೆಯಲ್ಲಿ ತಂದು ಕೂರಿಸಿಬಿಟ್ಟಿದ್ದಾನೆ. ಆಡಳಿತ-ವಿರೋಧಿ ಗಾಳಿ ಬೀಸುತ್ತಿರುವಾಗ ಯಾರೇನು ಕಸರತ್ತು ಮಾಡಿದರೂ ಕೆಲವೊಮ್ಮೆ ಪ್ರಯೋಜನವಾಗುವುದಿಲ್ಲ ಎಂಬುದಕ್ಕೆ ಈ ಬೆಳವಣಿಗೆಯೇ ಸಾಕ್ಷಿ!

ಟ್ರಂಪ್‌ಗೂ ಒಂದು ನೊಬೆಲ್ ಶಾಂತಿ ಪ್ರಶಸ್ತಿ ಕೊಡಬೇಕಾ?

ಜಗತ್ತಿನ ಕೆಲ ಭಾಗಗಳಲ್ಲೀಗ ಒಂದು ಕೂಗು ಶುರುವಾಗಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಗಬೇಕು ಎಂಬ ಕೂಗು ಅದು. 2009ರಲ್ಲಿ ಬರಾಕ್ ಒಬಾಮಾಗೆ ವಿನಾಕಾರಣ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿದ್ದರಿಂದ ಈಗ ಟ್ರಂಪ್‌ಗೆ ಆ ಪ್ರಶಸ್ತಿ ಕೊಡಬೇಕು ಎಂಬ ಕೂಗು ಎದ್ದರೆ ಅಪ್ರಸ್ತುತ ಏನಲ್ಲ. ಒಬಾ ಮಾಗೆ ಶಾಂತಿ ಪ್ರಶಸ್ತಿ ಕೊಟ್ಟಾಗ ನೊಬೆಲ್ ಸಮಿತಿ ‘ಅಂತಾ ರಾಷ್ಟ್ರೀಯ ರಾಜತಾಂತ್ರಿಕತೆಯನ್ನು ಗಟ್ಟಿಗೊಳಿಸಲು ಅದ್ಭುತ ಪ್ರಯತ್ನ ಮಾಡಿದ ಹಾಗೂ ಜನರ ನಡುವೆ ಅಪ್ರತಿಮ ಸಹಭಾಗಿತ್ವವನ್ನು ತರಲು ಶ್ರಮಿಸಿದ ಕಾರಣಕ್ಕಾಗಿ ಪ್ರಶಸ್ತಿ ನೀಡಲಾಗುತ್ತಿದೆ’ ಎಂದು ಹೇಳಿತ್ತು. ಮಜಾ ಏನು ಅಂದರೆ ಆಗಷ್ಟೇ ಒಬಾಮಾ ಶ್ವೇತಭವನದ ಕುರ್ಚಿಯಲ್ಲಿ ಕುಳಿತು ಸೆಟಲ್ ಆಗುತ್ತಿದ್ದರು. ಅಷ್ಟು ಸಣ್ಣ ಸಮಯದಲ್ಲೇ ಅವರು ಇಷ್ಟೆಲ್ಲಾ ಸಾಧನೆ ಮಾಡಿಬಿಟ್ಟಿದ್ದರು! ಹೀಗಾಗಿ ಈಗ ಮತ್ತೊಮ್ಮೆ ನೊಬೆಲ್ ಶಾಂತಿ ಪ್ರಶಸ್ತಿಯ ಸಮಿತಿ ಅತ್ಯಂತ ಶಾಂತಿಯುತವಾಗಿ ಟ್ರಂಪ್ ಮುಂದೆ ಮಂಡಿಯೂರಿ ಕುಳಿತುಕೊಳ್ಳಲು ಎಲ್ಲಾ ಕಾರಣಗಳೂ ಇವೆ.

ಆದರೆ ನಾವು ಇಲ್ಲೊಂದು ವಿಷಯವನ್ನು ಮರೆತುಬಿಟ್ಟಿದ್ದೇವೆ. ಪತ್ರಿಕೆಗಳಲ್ಲಿ ಅಂಕಣ ಬರೆಯುವವರಿಗೆ ಸಲ್ಲಿಸಿದ ಸೇವೆಗಾಗಿ ಟ್ರಂಪ್‌ಗೆ ನಿಜವಾಗಿಯೂ ನೊಬೆಲ್ ಪ್ರಶಸ್ತಿ ಸಿಗಬೇಕು. ಅವರಿಂದಾಗಿ ನಮ್ಮಂಥ ಅಂಕಣಕಾರರಿಗೆ ಭರಪೂರ ವಿಷಯಗಳು ಸಿಗುತ್ತಿವೆ. ಪ್ರತಿ ವಾರ ‘ಈ ಸಲ ಏನು ಅಂಕಣ ಬರೆಯಲಿ’ ಎಂದು ತಲೆ ಕೆರೆದುಕೊಳ್ಳುವ ಪ್ರಮೇಯವೇ ಇಲ್ಲ. ಟ್ರಂಪ್ ಏನಾದರೊಂದು ಸುದ್ದಿ ಕೊಡುತ್ತಿರುತ್ತಾರೆ. ಹೀಗಾಗಿ ಸಿಐಎ ತಪ್ಪು ತಿಳಿದುಕೊಳ್ಳದಿರಲಿ ಎಂಬ ಕಾರಣಕ್ಕೆ ಇನ್ನೊಮ್ಮೆ ಅತ್ಯಂತ ವಿನೀತ ಭಾವದಿಂದ ಹಾಗೂ ಕೃತಜ್ಞತೆಯಿಂದ ಅವರಿಗೆ ನೊಬೆಲ್ ಪ್ರಶಸ್ತಿ ಸಿಗಲಿ ಎಂದು ಹಾರೈಸುತ್ತೇನೆ.

ಇತ್ತೀಚೆಗೆ ಜಗತ್ತಿನಾದ್ಯಂತ ಪತ್ರಿಕಾ ಸಂಪಾದಕರನ್ನು ಬ್ಯುಸಿಯಾಗಿಡಲು ಅಮೆರಿಕದ ಶ್ವೇತಭವನ ದಿನಕ್ಕೊಂದು ಹೆಡ್‌ಲೈನ್ ಸೃಷ್ಟಿ ಮಾಡುತ್ತಿದೆ. ಕೆಲ ಸುದ್ದಿಗಳು ನಿಜಕ್ಕೂ ಪರಿಣಾಮಕಾರಿಯಾಗಿದ್ದರೆ, ಕೆಲವು ಭಯಾನಕವಾಗಿರುತ್ತವೆ. ಆದರೆ ಎಲ್ಲವೂ ಅಗಾಧ ಪ್ರಭಾವ ಬೀರುವ ಶಕ್ತಿಯನ್ನಂತೂ ಹೊಂದಿರುತ್ತವೆ. ಜಗತ್ತಿನ ಮುಂದೆ ಟ್ರಂಪ್ ಇಡುವ ಕೆಲ ಬೇಡಿಕೆಗಳು ವಿವಿಧ ದೇಶಗಳ ನರನಾಡಿಗಳಲ್ಲಿ ವಿದ್ಯುತ್ ಸಂಚಾರ ಮಾಡಿಸುತ್ತವೆ. ಅದರಲ್ಲೂ ವಿಶೇಷವಾಗಿ, ಅಮೆರಿಕ ಇಷ್ಟು ಕಾಲ ನಿಮಗೆ ನೀಡುತ್ತಿದ್ದ ಉಚಿತ ನೆರವು ಅಥವಾ ತೆರಿಗೆ ವಿನಾಯಿತಿಯನ್ನು ನಿಲ್ಲಿಸುತ್ತೇವೆಂದು ಹೇಳಿದಾಗ ಕೆಲ ದೇಶಗಳು ಕಂಗಾಲಾಗುತ್ತವೆ. ರಷ್ಯಾ ವಿರುದ್ಧ ಯುದ್ಧ ಮಾಡುತ್ತಿರುವ ಉಕ್ರೇನ್‌ಗೆ ನೆರವು ನೀಡಿದ ಯಾವುದೇ ದೇಶಗಳೂ ಇಲ್ಲಿಯವರೆಗೆ ಉಕ್ರೇನ್‌ನಿಂದ ಪ್ರತ್ಯುಪಕಾರವನ್ನು ಕೇಳಿರಲಿಲ್ಲ. ಆದರೆ ಟ್ರಂಪ್ ಬರುತ್ತಿದ್ದಂತೆ ಉಕ್ರೇನ್ ಅಧ್ಯಕ್ಷ ಜೆಲೆನ್‌ಸ್ಕಿಗೆ ಚಳಿಜ್ವರ ಶುರುವಾಗಿದೆ. ಭ್ರಷ್ಟಾಚಾರ ಹಾಗೂ ಅಸಹಾಯಕತೆಯ ತೂಗುಯ್ಯಾಲೆಯಲ್ಲಿ ಕುಳಿತಿರುವ ಜೆಲೆನ್‌ಸ್ಕಿ ಬಳಿ ಟ್ರಂಪ್ ದೊಡ್ಡ ಬೇಡಿಕೆಯನ್ನೇ ಇಟ್ಟಿದ್ದಾರೆ. ನಿಮಗೆ ಯುದ್ಧ ಮಾಡಲು ಅಮೆರಿಕದಿಂದ 200 ಬಿಲಿಯನ್ ಡಾಲರ್ ನೆರವು ನೀಡಿದ್ದೇವಲ್ಲವೆ, ಅದಕ್ಕೆ ಪ್ರತಿಯಾಗಿ ನಿಮ್ಮ ದೇಶದಲ್ಲಿರುವ ಖನಿಜಗಳನ್ನು ತೆಗೆಯಲು ನಮಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ಮೊದಲಿಗೆ ಅಮೆರಿಕ ನಮಗೆ 200 ಬಿಲಿಯನ್ ಡಾಲರ್ ನೆರವು ನೀಡಿರುವುದೇ ಕಟ್ಟುಕತೆ ಎಂದ ಜೆಲೆನ್‌ಸ್ಕಿ, ಬಳಿಕ ಟ್ರಂಪ್ ಹಾಕಿದ ಬಿಗಿಪಟ್ಟುಗಳನ್ನು ನೋಡಿ ಯೋಗಗುರುಗಳು ತಮ್ಮ ಯೌವನದ ತುರೀಯದಲ್ಲಿ ಬಿಲ್ಲಿನ ರೀತಿ ಬಾಗುವಂತೆ ಟ್ರಂಪ್ ಎದುರು ನಡು ಬಗ್ಗಿಸಿ ನಿಂತಿದ್ದಾರೆ. ಅಮೆರಿಕದ ಕಂಪನಿಗಳು ನಮ್ಮ ದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಬರಲು ಅಡ್ಡಿಯಿಲ್ಲ ಎಂದು ಈಗ ಮುಕ್ತ ಆಹ್ವಾನ ನೀಡುತ್ತಿದ್ದಾರೆ. ಅಷ್ಟೇ ಅಲ್ಲ, ರಷ್ಯಾದ ಪುಟಿನ್ ಜತೆ ಮಾತುಕತೆ ನಡೆಸುವುದಕ್ಕೂ ನಾನು ಸಿದ್ಧ ಎಂದು ಪ್ರಕಟಿಸಿ, ಮುಂದಿನ ಆದೇಶಕ್ಕಾಗಿ ಕಾಯುತ್ತಿದ್ದಾರೆ. ಅಂದರೆ ಟ್ರಂಪ್ ತಂತ್ರ ಕೆಲಸ ಮಾಡುತ್ತಿದೆ.

ಆದರೆ ಎಲ್ಲಾ ಸಲವೂ ಅದು ಕೆಲಸ ಮಾಡುವುದಿಲ್ಲ. ರಕ್ತಸಿಕ್ತ ಗಾಜಾಪಟ್ಟಿಯನ್ನು ಜಗತ್ತಿನ ಶ್ರೀಮಂತರ ಬೀಚ್ ವಾಲಿಬಾಲ್ ಆಡುವ ಮೋಜಿನ ಜಾಗ ಮಾಡಲು ಟ್ರಂಪ್ ಹೊರಟಿದ್ದರು. ಅಲ್ಲೇ ಪಕ್ಕದಲ್ಲಿ ‘ಟ್ರಂಪ್ ಟವರ್’ ಹಾಗೂ ‘ಟ್ರಂಪ್ ಕ್ಯಾಸಿನೋ’ ನಿರ್ಮಿಸುವ ಯೋಚನೆ ಕೂಡ ಅವರಲ್ಲಿತ್ತು ಅಂತ ಕಾಣಿಸುತ್ತದೆ. ಆದರೆ ಅದೆಲ್ಲ ಯಾವತ್ತೂ ಸಾಧ್ಯವಿಲ್ಲ. ನಿಜ ಹೇಳಬೇಕೆಂದರೆ, ಗಾಜಾಪಟ್ಟಿಯನ್ನು ವಶಪಡಿಸಿಕೊಳ್ಳುತ್ತೇವೆಂದು ಟ್ರಂಪ್ ಹೇಳಿದ್ದು ಪೂರ್ತಿ ನಿಜವಲ್ಲ. ಅವರಿಗೂ ಗೊತ್ತು, ನಾನಿದನ್ನು ಗಂಭೀರವಾಗಿ ಹೇಳುತ್ತಿಲ್ಲ ಎಂದು. ಟ್ರಂಪ್ ಬಹಳ ಚಾಣಾಕ್ಷ ಮನುಷ್ಯ. ಯಾವುದೇ ಕೊಲ್ಲಿ ರಾಷ್ಟ್ರವಾಗಲಿ ಅಥವಾ ಯಾವೊಬ್ಬ ಪ್ಯಾಲೆಸ್ತೀನಿಯಾಗಲಿ ಗಾಜಾದಿಂದ ಗುಳೆ ಹೋಗುವ ಪ್ಯಾಲೆಸ್ತೀನಿಯನ್ನು ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಟ್ರಂಪ್ ಗಾಜಾಪಟ್ಟಿಯನ್ನು ವಶಪಡಿಸಿಕೊಳ್ಳುತ್ತೇವೆ ಎಂದು ಹೇಳಿದ್ದು ಇಸ್ರೇಲ್‌ನ ಬೆಂಜಮಿನ್ ನೆತನ್ಯಾಹುಗೆ ತೋರಿಸಿದ ಕ್ಯಾರೆಟ್ ಅಷ್ಟೆ. ಇಸ್ರೇಲ್ ಜತೆಗೆ ಯಾವುದೋ ಡೀಲ್ ಮಾಡಿಕೊಳ್ಳಲು ಟ್ರಂಪ್ ಈ ಪಟ್ಟು ಹಾಕಿದ್ದಾರೆ. ಅಪಾಯ ಇರುವುದು ಎಲ್ಲಿ ಅಂದರೆ, ಕೆಲವೊಮ್ಮೆ ಇಂಥ ಭಯಂಕರ ಐಡಿಯಾಗಳು ಒಳ್ಳೆಯ ಸಂಗತಿಗಳನ್ನು ಹಾಳುಗೆಡವುತ್ತವೆ.

• • •

21ನೇ ಶತಮಾನ ಬಹುಶಃ ನೊಬೆಲ್ ಪ್ರಶಸ್ತಿಯನ್ನೇ ಅಣಕವಾಡುವ ಶತಮಾನವಿದ್ದಂತಿದೆ. ಬಾಂಗ್ಲಾದೇಶದ ಸ್ವಯಂಘೋಷಿತ ನಾಯಕ ಮೊಹಮ್ಮದ್ ಯೂನಸ್ ಕೂಡ ಹಿಂದೊಮ್ಮೆ ನೊಬೆಲ್ ಶಾಂತಿ ಪ್ರಶಸ್ತಿ ಗೆದ್ದವರು. ಈಗ ಬಾಂಗ್ಲಾದೇಶದಲ್ಲಿ ರಕ್ತ ಹರಿಸುತ್ತಿದ್ದಾರೆ. ಹಿಂದೆ 1971ರ ಪಾಕಿಸ್ತಾನದ ಜತೆಗಿನ ಯುದ್ಧದಲ್ಲಿ ಬಾಂಗ್ಲಾದಲ್ಲಿ ಲಕ್ಷಾಂತರ ಜನರ ನೆತ್ತರು ಹರಿದ ಇತಿಹಾಸವನ್ನೇ ಮುಚ್ಚಿಹಾಕಲು ಅವರು ಯತ್ನಿಸುತ್ತಿದ್ದಾರೆ. ಅದಕ್ಕಾಗಿ ಅವರು ಮಾಡುತ್ತಿರುವ ಸಾಕಷ್ಟು ಪ್ರಯತ್ನಗಳಲ್ಲಿ ಇತ್ತೀಚಿನ ಹೊಸ ನಿರ್ಧಾರವೆಂದರೆ ಕರಾಚಿ ಮತ್ತು ಢಾಕಾ ನಡುವೆ ನೇರ ವಿಮಾನ ಪ್ರಯಾಣಕ್ಕೆ ಅನುಮತಿ ನೀಡಿರುವುದು. ‘ಫ್ಲೈ ಜಿನ್ನಾ’ ಹೆಸರಿನ ವಿಮಾನ ಬಾಂಗ್ಲಾ ಮತ್ತು ಪಾಕ್ ನಡುವೆ ಹಾರಾಟ ನಡೆಸಲು ಯೂನಸ್ ಒಪ್ಪಿಗೆ ನೀಡಿದ್ದಾರೆ. ಪಾಕಿಸ್ತಾನ ಸೃಷ್ಟಿಯಾದ ಮರುವರ್ಷವೇ 1948ರಲ್ಲಿ ಮೊಹಮ್ಮದ್ ಅಲಿ ಜಿನ್ನಾ ಒಂದು ದಿನ ದೇಶವನ್ನುದ್ದೇಶಿಸಿ ಮಾತನಾಡಿ ‘ಇಂದಿನಿಂದ ಪೂರ್ವ ಪಾಕಿಸ್ತಾನದಲ್ಲಿ ಬಂಗಾಳಿಯ ಬದಲು ಉರ್ದು ಅಧಿಕೃತ ರಾಷ್ಟ್ರೀಯ ಭಾಷೆಯಾಗಲಿದೆ’ ಎಂದು ಘೋಷಿಸಿದ್ದರು. ಅದನ್ನು ಕೇಳಿ ಎಲ್ಲರೂ ಅವಾಕ್ಕಾಗಿದ್ದರು. ಬಂಗಾಳಿ ಭಾಷೆಗೆ ಸಮಾನಾಂತರ ಸ್ಥಾನಮಾನ ಕೂಡ ಸಿಗಲಿಲ್ಲ. ಅಲ್ಲಿಯವರೆಗೆ ಹೀರೋ ಆಗಿದ್ದ ಜಿನ್ನಾ ಏಕಾಏಕಿ ಈ ಘೋಷಣೆಯೊಂದಿಗೆ ಪೂರ್ವ ಪಾಕಿಸ್ತಾನಕ್ಕೆ ವಿಲನ್ ಆಗಿಬಿಟ್ಟರು. ಪೂರ್ವ ಪಾಕಿಸ್ತಾನದಲ್ಲಿ ನಡೆದ ಮೊದಲ ಚುನಾವಣೆಯಲ್ಲೇ ಜಿನ್ನಾರ ಮುಸ್ಲಿಂ ಲೀಗ್ ಪಕ್ಷ ಸರ್ವನಾಶವಾಯಿತು. ಬಾಂಗ್ಲಾದೇಶದ ಉದಯಕ್ಕೆ ಕಾರಣವಾಗಿದ್ದೇ ಭಾಷೆಯ ಸಂಘರ್ಷ. ಯೂನಸ್‌ಗೆ ಆ ಇತಿಹಾಸವೂ ನೆನಪಿಲ್ಲವೇ? ಇತಿಹಾಸದ ಅಪಾಯಕಾರಿ ಅಧ್ಯಾಯವನ್ನೂ ಮರೆಯುವಷ್ಟು ಈ ಮನುಷ್ಯನ ಮಿದುಳು ಮಂಕಾಗಿದೆಯೇ?

ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಫ್ಲೈ ಜಿನ್ನಾ ವಿಮಾನ ಢಾಕಾದಲ್ಲಿ ಬಂದಿಳಿದರೆ ಬಹುಶಃ ಪ್ರತಿರೋಧ ಜೋರಾಗಬಹುದು. ಏರ್‌ಲೈನ್ಸ್‌ನ ಪಾಕಿಸ್ತಾನಿ ಮಾಲೀಕನಿಗಾದರೂ ಹಳೆಯದು ನೆನಪಿದೆಯೋ ಇಲ್ಲವೋ. ವಿಮಾನ ಹಾರಾಟಕ್ಕೆ ಅನುಮತಿ ಸಿಕ್ಕ ಖುಷಿಯಲ್ಲಿರುವ ಆತ ಮುಂದೆ ಏನೇನು ನೋಡಬೇಕಿದೆಯೋ ಗೊತ್ತಿಲ್ಲ. ಫ್ಲೈ ಜಿನ್ನಾ ಏರ್‌ಲೈನ್ಸ್ ಸೋವಿ ದರದ ವಿಮಾನ. ಅದು ಢಾಕಾ ಪ್ರಯಾಣಕ್ಕೆ ದುಬಾರಿ ಬೆಲೆ ತೆರಬೇಕಾದೀತು.

• • •

ಸಾಹಿತ್ಯೋತ್ಸವಗಳಲ್ಲಿ ನಾನಾ ವಿಧದ ಹೊಸ ಚಿಂತನೆಗಳು ಮೂಡುತ್ತವೆ. ಇತ್ತೀಚೆಗೆ ಭೋಪಾಲ್ ಲಿಟ್ ಫೆಸ್ಟ್‌ಗೆ ಹೋಗಿದ್ದೆ. ಲೆಫ್ಟಿನೆಂಟ್ ಕರ್ನಲ್ (ನಿವೃತ್ತ) ರಾಜ್ ಶುಕ್ಲಾ ಜತೆ ಮಧ್ಯಪ್ರಾಚ್ಯದ ಬಗ್ಗೆ ಸಂವಾದವಿತ್ತು. ಅಲ್ಲಿ ನಡೆದ ಮಾತುಕತೆಯ ಕೆಲ ತುಣುಕನ್ನು ನಾನಿಲ್ಲಿ ಪ್ರಸ್ತಾಪಿಸಬೇಕು. ಭಾಷೆಯ ಉಗಮ ಮತ್ತು ಇತಿಹಾಸದ ಬಗ್ಗೆ ಆಸಕ್ತಿಯಿರುವವರಿಗೆ ಇದು ಇಷ್ಟವಾಗಬಹುದು.

ಮೊದಲಿಗೆ ಮಧ್ಯಪ್ರಾಚ್ಯದಿಂದಲೇ ಶುರುಮಾಡೋಣ. ಇದರಲ್ಲಿರುವ ಪ್ರಾಚ್ಯ ಯಾವುದಕ್ಕೆ ಪೂರ್ವ? ಇದರಲ್ಲಿರುವ ಮಧ್ಯ ಯಾವುದರ ಮಧ್ಯ? ಜಗತ್ತಿನ ಪೂರ್ವಭಾಗದ ಮಧ್ಯ ಎಂದು ಯಾವುದಾದರೂ ಏಷ್ಯನ್ ಪ್ರದೇಶವನ್ನು ಕರೆಯುವುದಾದರೆ ಅದು ಭಾರತವೇ ಆಗುತ್ತದೆ. ಬ್ರಿಟಿಷ್ ಕಾಲದ ಹೆಸರುಗಳು ಬ್ರಿಟಿಷರ ದೃಷ್ಟಿಕೋನದಿಂದ ಸೃಷ್ಟಿಯಾಗಿವೆ. ಆದರೆ ನಾವು ಇವತ್ತಿಗೂ ನಮ್ಮದೇ ಆದ ಸ್ವತಂತ್ರ ಭೂರಾಜಕೀಯ ಪರಿಭಾಷೆಯೊಂದನ್ನು ಅಭಿವೃದ್ಧಿಪಡಿಸಿಕೊಳ್ಳಲಾಗದೆ ಹೆಣಗಾಡುತ್ತಿದ್ದೇವೆ.

ಭೋಪಾಲ್ ಸಂವಾದದಲ್ಲಿ ಭಾಗವಹಿಸಿದ್ದಾಗ ನಾವು ಬಳಸುವ ಪದಗಳ ನಿಗೂಢ ಜಗತ್ತು ನನ್ನನ್ನು ಗಾಢವಾದ ಚಿಂತನೆಗೆ ಹಚ್ಚಿತ್ತು. ಇಂಗ್ಲಿಷ್‌ನಲ್ಲಿ ಹರ್ಸ್ ಎಂಬ ಪದವಿದೆ. ಅದರ ವಿರುದ್ಧಾರ್ಥಕ ಪದ ರಿಹರ್ಸ್ ಆಗಬಹುದೇ? ಹರ್ಸ್ ಅಂದರೆ ಶವಾಗಾರ ಅಥವಾ ಹೆಣ ಸಾಗಿಸುವ ವಾಹನ. ರಿಹರ್ಸ್ ಅಂದರೆ ತಾಲೀಮು! ಎಂಥಾ ವ್ಯತ್ಯಾಸ. ರಿಹರ್ಸಲ್‌ಗೂ ಹೆಣಕ್ಕೂ ಏನು ಸಂಬಂಧ? ಪದಗಳ ಜತೆಗೆ ಆಟವಾಡಲು ನಮ್ಮ ಕಲ್ಪನಾಶಕ್ತಿಯನ್ನು ಕೊಂಚ ವಿಸ್ತರಿಸಿಕೊಳ್ಳಬೇಕು. ಆಗ ಅದರ ಮಜಕೂರು ಏನೆಂಬುದು ತಿಳಿಯುತ್ತದೆ.

ಇಂಗ್ಲಿಷ್ ಭಾಷೆ ಹೇಗೆ ಇಂದು ಜಾಗತಿಕ ಭಾಷೆಯಾಗಿ ಯಶಸ್ಸು ಪಡೆದಿದೆ ಎಂಬ ಬಗ್ಗೆ ನಿಮಗೆ ಕುತೂಹಲವಿದ್ದರೆ ಇಲ್ಲೊಂದಷ್ಟು ಸಂಗತಿಗಳಿವೆ, ಗಮನಿಸಿ. ಇಂಗ್ಲಿಷ್‌ನಲ್ಲಿರುವ ಸುಮಾರು 80,000 ಪದಗಳು, ಅಂದರೆ ಇಂಗ್ಲಿಷ್‌ನ ಹೆಚ್ಚುಕಮ್ಮಿ ಶೇ.40ರಷ್ಟು ಶಬ್ದಕೋಶದ ಮೂಲವು ಫ್ರೆಂಚ್‌ನಲ್ಲಿದೆ. 11ನೇ ಶತಮಾನದ ಮಧ್ಯಭಾಗದಲ್ಲಿ ಉತ್ತರ ಫ್ರೆಂಚರು ಅಥವಾ ನಾರ್ಮನ್‌ಗಳು ಬ್ರಿಟನ್ನನ್ನು ಗೆದ್ದ ಮೇಲೆ ಆ ಕಾಲದ ಫ್ರೆಂಚ್ ಭಾಷೆಯು ಕುಲೀನ ಇಂಗ್ಲಿಷ್ ಜನರ ಭಾಷೆಯಾಯಿತು. ಹೊಸ ಶ್ರೀಮಂತ ವರ್ಗವು ತಮ್ಮ ಮೇಲ್ಮೆಯನ್ನು ತೋರಿಸಿಕೊಳ್ಳಲು ಫ್ರೆಂಚ್ ಮಾತನಾಡುತ್ತಿತ್ತು. ಆದರೆ, ಅವರಿಗೆ ಸರಿಯಾಗಿ ಫ್ರೆಂಚ್ ಭಾಷೆ ಬರುತ್ತಿರಲಿಲ್ಲ. ಹೀಗಾಗಿ ಫ್ರೆಂಚನ್ನೂ ಇಂಗ್ಲಿಷ್ ಭಾಷೆಯನ್ನೂ ಮಿಕ್ಸ್ ಮಾಡುತ್ತಿದ್ದರು. ನಂತರ ಅದೇ ಶ್ರೀಮಂತ ಬ್ರಿಟಿಷರ ಭಾಷೆಯಾಯಿತು. ಅದರ ಪರಿಣಾಮವಾಗಿ 16ನೇ ಶತಮಾನದಲ್ಲಿ ಶೇಕ್ಸ್‌ಪಿಯರ್ ಹುಟ್ಟಿದ. ಇಂದು ಇಂಗ್ಲಿಷ್ ಓದುವವರಿಗೆ ಶೇಕ್ಸ್‌ಪಿಯರ್ ಏಕೆ ಕಷ್ಟ ಅಂದರೆ, ಅವನು ಆ ಕಾಲದಲ್ಲಿ ಶ್ರೀಮಂತ ಬ್ರಿಟಿಷರು ಆಡುತ್ತಿದ್ದ ಫ್ರೆಂಚ್ ಮಿಶ್ರಿತ ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದ. ಇಂಗ್ಲಿಷರ ಜತೆಗೆ ಫ್ರೆಂಚರು ಪೈಪೋಟಿಗಿಳಿಯಲು ಹೋಗಲಿಲ್ಲ, ಏಕೆಂದರೆ ಇಂಗ್ಲಿಷೇ ಫ್ರೆಂಚ್‌ನ ಅಪಭ್ರಂಶವಾಗಿತ್ತು. ಇಂದಿಗೂ ಇಂಗ್ಲಿಷ್ ಭಾಷೆಗೆ ಭಾಷಾಶುದ್ಧತೆಯ ಬಗ್ಗೆ ಅಸೀಮ ನಿರ್ಲಕ್ಷ್ಯವಿದೆ. ಗ್ರಾಮರ್ ಬಗ್ಗೆ ಇಂಗ್ಲಿಷ್ ಭಾಷೆ ತಲೆಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ ಇಂಗ್ಲಿಷ್ ಅತ್ಯಂತ ಪ್ರಜಾಸತ್ತಾತ್ಮಕ ಭಾಷೆಯಾಗಿದೆ. ಇಂಥ ನಿರ್ಲಕ್ಷ್ಯದಿಂದಾಗಿಯೇ ಅದು ಎಲ್ಲಿ ಬೇಕಾದರೂ ಅಡ್ಜಸ್ಟ್ ಆಗಬಲ್ಲ ಭಾಷೆಯಾಗಿ ಹೊರಹೊಮ್ಮಿದೆ. ಅಯ್ಯೋ ಎನ್ನಲು ಫ್ರೆಂಚರು ವೊಯ್ಲಾ ಎನ್ನುತ್ತಾರೆ. ಇಂಗ್ಲಿಷರು ಅಯ್ಯೋ ಎನ್ನುವುದಕ್ಕೆ ಏನು ಬೇಕಾದರೂ ಹೇಳುತ್ತಾರೆ!

ಇತ್ತೀಚೆಗೆ ನಾನು ಓದುತ್ತಿದ್ದ ‘ಹೌ ದ ವರ್ಲ್ಡ್ ಮೇಡ್ ದಿ ವೆಸ್ಟ್: ಎ 4000 ಇಯರ್ ಹಿಸ್ಟರಿ’ ಪುಸ್ತಕದಿಂದ ಹೆಕ್ಕಿಟ್ಟುಕೊಂಡಿದ್ದ ಕೆಲ ತುಣುಕುಗಳು ಇಲ್ಲಿವೆ. ಈ ಕೃತಿಯ ಲೇಖಕ ಜೋಸೆಫಿನ್ ಕ್ವಿನ್.

- ಜಗತ್ತಿನಲ್ಲಿ ಅತ್ಯಂತ ಜಾತ್ಯತೀತ ಎಂದು ಕರೆಯಬಹುದಾದ ಭಾಷೆ ಜನಿಸಿದ್ದು ಪುರಾತನ ಈಜಿಪ್ಟ್‌ನಲ್ಲಿ. ಹೀಗಾಗಿ ನಮಗಿಂದು ಬೇರೆ ಬೇರೆ ಭಾಷೆಗಳಲ್ಲಿ ಒಂದೇ ಅರ್ಥ ನೀಡುವ ಒಂದೇ ರೀತಿಯ ಪದಗಳೇನಾದರೂ ಕಾಣಿಸಿದರೆ ಅವುಗಳ ಮೂಲ ಈಜಿಪ್ಷಿಯನ್ ಭಾಷೆಯಲ್ಲಿರುತ್ತದೆ. ಈಜಿಪ್ಷಿಯನ್ ಭಾಷೆಯಲ್ಲಿ ಇಂಗ್ಲಿಷ್‌ನ ‘ಎ’ ಅಕ್ಷರ ಗೂಳಿಯ ತಲೆಯನ್ನು ಹೋಲುತ್ತದೆ. ಅಲ್ಲಿ ಅಲೆಫ್ ಅಂದರೆ ಗೂಳಿ. ಇಂಗ್ಲಿಷ್‌ನ ‘ಬಿ’ ಅಕ್ಷರ ಈಜಿಪ್ಷಿಯನ್‌ನಲ್ಲಿ ಮನೆಯನ್ನು ಹೋಲುತ್ತದೆ. ಮನೆಗೆ ಅಲ್ಲಿ ಬಾಯಿತ್ ಎನ್ನುತ್ತಾರೆ. ಇಂಗ್ಲಿಷ್‌ನ ‘ಡಿ’ ಅಕ್ಷರ ಈಜಿಪ್ಷಿಯನ್ ಭಾಷೆಯಲ್ಲಿ ಬಾಗಿಲು ಎಂಬರ್ಥದಲ್ಲಿ (ಡೇಲೆಟ್) ಬಳಕೆಯಾಗುತ್ತದೆ. ಇಂಥ ಸಾಕಷ್ಟು ಉದಾಹರಣೆಗಳಿವೆ. ಲೆಬನಾನ್‌ನ ವ್ಯಾಪಾರಿಗಳು ಈಜಿಪ್ಟ್‌ನ ಲಿಪಿಯನ್ನು ಕ್ರಿಸ್ತಪೂರ್ವ 750ರಲ್ಲಿ ಗ್ರೀಸ್‌ಗೆ ತಂದರು.

- ಯುರೋಪಿಯನ್ನರಿಗೆ ತುಂಬಾ ಉತ್ಸಾಹವಿದೆ, ಆದರೆ ಅವರ ತಲೆಯಲ್ಲಿ ಹೆಚ್ಚು ಬುದ್ಧಿಯಿಲ್ಲ ಎಂದು ಅರಿಸ್ಟಾಟಲ್ ಹೇಳುತ್ತಿದ್ದ. ಅದೇ ರೀತಿ, ಏಷ್ಯನ್ನರ ತಲೆಯಲ್ಲಿ ಅಪಾರ ಬುದ್ಧಿವಂತಿಕೆಯಿದೆ, ಆದರೆ ಅವರಿಗೆ ಉತ್ಸಾಹವಿಲ್ಲ ಎಂದೂ ಹೇಳುತ್ತಿದ್ದ. ಯುರೋಪಿಯನ್ ನಾಗರಿಕತೆಯ ಮೊದಲ ಶಿಕ್ಷಕ ಎಂದು ಅರಿಸ್ಟಾಟಲ್‌ನನ್ನು ಗುರುತಿಸಲಾಗುತ್ತದೆ. ಅವನ ಪ್ರಭಾವ ಅರೇಬಿಯನ್ ಮತ್ತು ಪರ್ಷಿಯನ್ ತತ್ವಶಾಸ್ತ್ರದ ಮೇಲೂ ಸಾಕಷ್ಟಾಗಿದೆ. ಅರೇಬಿಕ್‌ನಲ್ಲಿ ಅರಿಸ್ಟಾಟಲ್‌ನನ್ನು ಅರಿಸ್ತು ಎಂದು ಕರೆಯುತ್ತಾರೆ. ಅವನಿಂದು ಬದುಕಿರಬೇಕಿತ್ತು. ಭಾಷೆ ಎಷ್ಟೆಲ್ಲಾ ಬದಲಾಗಿದೆ, ಆದರೂ ಎಷ್ಟೊಂದು ಕಡಿಮೆ ಬದಲಾವಣೆಯಾಗಿದೆ!

- ಪುರಾತನ ಅಥೆನ್ಸ್‌ನ ಪ್ರಜಾಪ್ರಭುತ್ವದಲ್ಲಿ ಏಳರಲ್ಲಿ ಆರು ಮಂದಿ ಸರಕಾರಿ ಅಧಿಕಾರಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡುತ್ತಿದ್ದರು. ಏಳನೆಯ ಹುದ್ದೆಯನ್ನು ಮಿಲಿಟರಿಗೆ ಮೀಸಲಿಡಲಾಗಿತ್ತು. ಇಂದೂ ಚುನಾವಣೆಗಳಲ್ಲಿ ಕೆಲವೊಮ್ಮೆ ಲಾಟರಿ ಮೂಲಕ ಆಯ್ಕೆ ಮಾಡುವ ಪ್ರಸಂಗಗಳು ಬರುತ್ತವೆ. ಆ ಕಾಲದಲ್ಲಿ ಅಥೆನ್ಸ್‌ನ ಮಹಿಳೆಯರು ಮುಖವನ್ನು ಪರದೆಯಿಂದ ಮುಚ್ಚಿಕೊಳ್ಳುತ್ತಿದ್ದರು. ಅವರು ಹೊರಗೆ ಪ್ರಯಾಣಿಸಬೇಕು ಅಥವಾ ಹೊರಗೆ ಕೆಲಸ ಮಾಡಬೇಕು ಅಂದರೆ ಮನೆಯ ಗಂಡಸರು ಯಾರಾದರೂ ಜತೆಗಿರಬೇಕಿತ್ತು. ಈಗಿನ ತಾಲಿಬಾನ್ ಸರಕಾರವೊಮ್ಮೆ ಇಸ್ಲಾಮಿಕ್-ಪೂರ್ವ ಇತಿಹಾಸವನ್ನು ಅಧ್ಯಯನ ಮಾಡಬೇಕು! ಇದಕ್ಕೆ ವ್ಯತಿರಿಕ್ತವಾಗಿ ಪರ್ಷಿಯಾದ ಮಹಿಳೆಯರು ಆ ಕಾಲದಲ್ಲೇ ಉದ್ದಿಮೆಗಳನ್ನು ನಡೆಸುತ್ತಿದ್ದರು. ಆಸ್ತಿಗಳನ್ನು ಹೊಂದುತ್ತಿದ್ದರು. ಅಂಗಡಿಗಳಲ್ಲಿ ಕುಳಿತು ವ್ಯಾಪಾರ ಮಾಡುತ್ತಿದ್ದರು. ಹೊರಗೆಲ್ಲ ಮುಕ್ತವಾಗಿ ಸಂಚರಿಸುತ್ತಿದ್ದರು.

ಭಾಷೆಯನ್ನು ಎಷ್ಟೆಲ್ಲಾ ಅದ್ಭುತವಾಗಿ ಬಳಸಬಹುದು ನೋಡಿ. ಅಮೆರಿಕದ ರಿಪಬ್ಲಿಕನ್ ಪಕ್ಷದ ರಾಜಕಾರಣಿ ಜಾನ್ ವಾರ್ನರ್. ಆತ ವರ್ಜೀನಿಯಾದಿಂದ ಸತತ 5 ಬಾರಿ ಸೆನೆಟ್‌ಗೆ ಆಯ್ಕೆಯಾಗಿದ್ದರೂ ಯಾವತ್ತೂ ಪ್ರಸಿದ್ಧ ವ್ಯಕ್ತಿಯಾಗಿರಲಿಲ್ಲ. ಆದರೆ 1976ರಲ್ಲಿ ಹಾಲಿವುಡ್ ನಟಿ ಎಲಿಜಬೆತ್ ಟೇಲರ್‌ಳನ್ನು ಮದುವೆಯಾದಾಗ ಅವನು ರಾತ್ರೋರಾತ್ರಿ ಫೇಮಸ್ ಆಗಿಬಿಟ್ಟ. ಹಾಲಿವುಡ್ ಬಗ್ಗೆ ತಿಳಿದುಕೊಂಡವರಿಗೆ ಎಲಿಜಬೆತ್ ಟೇಲರ್‌ಗೆ ಅವನೊಬ್ಬನೇ ಗಂಡ ಅಲ್ಲವೆಂಬುದು ಗೊತ್ತಿರುತ್ತದೆ. ಸುಂಟರಗಾಳಿಯಂಥ ವ್ಯಕ್ತಿತ್ವದ ಎಲಿಜಬೆತ್ ಗಂಡನನ್ನು ಪದೇಪದೆ ಬದಲಿಸುತ್ತಿದ್ದಳು. ಎಷ್ಟು ಅಂದರೆ, ಕೆಲವೊಮ್ಮೆ ಈ ಹಿಂದೆ ಮದುವೆಯಾದವನನ್ನೇ ಇನ್ನೊಮ್ಮೆ ಮದುವೆಯಾಗು ತ್ತಿದ್ದಳು. ರಿಚರ್ಡ್ ಬರ್ಟನ್‌ನನ್ನು ಅವಳು ಎರಡು ಬಾರಿ ಮದುವೆಯಾಗಿದ್ದಳು. ಅವಳಿಗೆ ಜಾನ್ ವಾರ್ನರ್ ಆರನೇ ಗಂಡನಾಗಿದ್ದ. ಅವನ ಜತೆಗೆ ಎಲಿಜಬೆತ್ ಆರು ವರ್ಷ ಸಂಸಾರ ಮಾಡಿದ್ದಳು. ಅವರ ಮದುವೆ ಮುರಿದುಬಿದ್ದ ಮೇಲೆ ಜಾನ್ ವಾರ್ನರ್‌ನ ಎದುರಾಳಿಯೊಬ್ಬ ತನ್ನ ಚುನಾವಣಾ ಭಾಷಣದಲ್ಲಿ ‘ವರ್ಜೀನಿಯಾದ ಜನರು ದೇಶದ ಮೂರು ಅತಿದೊಡ್ಡ ಬೂಬ್ಸ್ ಆಯ್ಕೆ ಮಾಡಿದ್ದರು’ ಎಂದು ಹೇಳಿದ್ದ!

ಬೂಬ್ ಎಂಬುದಕ್ಕೆ ಇಂಗ್ಲಿಷ್‌ನಲ್ಲಿ ಸ್ತನ ಮತ್ತು ಮೂರ್ಖ ಎಂಬ ಎರಡು ಅರ್ಥಗಳಿವೆ!

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 28

ಸಮಾಚಾರ ಸಣ್ಣದಲ್ಲ

ಎಐ ಆ್ಯಕ್ಷನ್ ಶೃಂಗ: ಫ್ರಾನ್ಸ್‌ನಲ್ಲಿ ಮೋದಿ

ಪ್ಯಾರಿಸ್: ಪ್ರಧಾನಿ ಮೋದಿ ಮೂರು ದಿನಗಳ ವಿದೇಶ ಪ್ರವಾಸವನ್ನು ಸೋಮವಾರ ಆರಂಭಿಸಿದ್ದು, ಮಂಗಳವಾರದಂದು ಇಲ್ಲಿ ಎಐ ಆ್ಯಕ್ಷನ್ ಶೃಂಗದಲ್ಲಿ

ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಜತೆ ಸಹ-ಅಧ್ಯಕ್ಷತೆ ವಹಿಸಲಿದ್ದಾರೆ. ಉಭಯ ನಾಯಕರು ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದು, ವ್ಯಾಪಾರ ಕ್ಷೇತ್ರದ ಪ್ರಮುಖರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಮಾರ್ಸೇಲ್ ನಗರದಲ್ಲಿನ ಯುದ್ಧ ಸ್ಮಾರಕಕ್ಕೆ ಬುಧವಾರ ಇಬ್ಬರೂ ಭೇಟಿ ನೀಡಲಿದ್ದು, ಮೊದಲ ಮಹಾಯುದ್ಧದಲ್ಲಿ ಹುತಾತ್ಮರಾದ ಭಾರತೀಯ ಸೈನಿಕರಿಗೆ ಅಲ್ಲಿ ಗೌರವ ಸಲ್ಲಿಸಲಿದ್ದಾರೆ. ಮಾರ್ಸೇಲ್‌ನಲ್ಲಿ ಭಾರತದ ಹೊಸ ಕಾನ್ಸುಲೇಟ್ ಜನರಲ್ ಕಚೇರಿಯನ್ನು ಮೋದಿ ಉದ್ಘಾಟಿಸಲಿದ್ದಾರೆ. ಇದು ಫ್ರಾನ್ಸ್‌ಗೆ ಮೋದಿಯವರ ಆರನೇ ಭೇಟಿಯಾಗಿದೆ. ಫ್ರಾನ್ಸ್‌ನಿಂದ ಮೋದಿ ನೇರವಾಗಿ ಅಮೆರಿಕಕ್ಕೆ ತೆರಳಲಿದ್ದಾರೆ.

ರಶೀದ್‌ಗೆ 2 ದಿನ ಕಸ್ಟಡಿ ಪೆರೋಲ್

ದೆಹಲಿ: ಪ್ರಸ್ತುತ ಜೈಲಿನಲ್ಲಿರುವ ಸಂಸದ ರಶೀದ್ ಎಂಜಿನಿಯರ್, ಸಂಸತ್ ಅಧಿವೇಶನದಲ್ಲಿ ಪಾಲ್ಗೊ

ಳ್ಳಲು ದೆಹಲಿ ಹೈಕೋರ್ಟ್ 2 ದಿನಗಳ ಕಸ್ಟಡಿ ಪೆರೋಲ್ ನೀಡಿದೆ. ಫೆಬ್ರವರಿ 11 ಮತ್ತು 13 ರಂದು ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳಬಹುದು ಎಂದು ನ್ಯಾ. ವಿಕಾಸ್ ಮಹಾಜನ್ ಆದೇಶಿಸಿದ್ದಾರೆ. ಬಾರಾಮುಲ್ಲಾ ಲೋಕಸಭಾ ಕ್ಷೇತ್ರದ ಸಂಸದರಾಗಿರುವ ರಶೀದ್ ಎಂಜಿನಿಯರ್, ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡಿದ ಆರೋಪದಡಿ 2019ರಿಂದ ತಿಹಾರ್ ಜೈಲಿನಲ್ಲಿದ್ದಾರೆ.

ನಿವೃತ್ತ ಐಪಿಎಸ್ ಅಧಿಕಾರಿಗೆ ಜೈಲುಶಿಕ್ಷೆ

ಭುಜ್: 1984ರಲ್ಲಿ ಕಾಂಗ್ರೆಸ್ ನಾಯಕರೊಬ್ಬರ ಮೇಲೆ ಹಲ್ಲೆ ನಡೆಸಿ, ತಪ್ಪಾಗಿ ಅವರನ್ನು ಬಂಧಿಸಿದ್ದ ಪ್ರಕರಣದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕುಲದೀಪ್ ಶರ್ಮಾ ಅವರಿಗೆ ಗುಜರಾತ್‌ನ ಕಛ್ ಜಿಲ್ಲೆಯ ನ್ಯಾಯಾಲಯವೊಂದು ಸೋಮವಾರ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಘಟನೆ ನಡೆದಾಗ ಕುಲದೀಪ್ ಶರ್ಮಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದರು. ಭುಜ್‌ನ ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಬಿ.ಎಂ ಪ್ರಜಾಪತಿ ಅವರ ನ್ಯಾಯಾಲಯವು ಇದೇ ಪ್ರಕರಣದಲ್ಲಿ ಆಗಿನ ಪೊಲೀಸ್ ಇನ್‌ಸ್ಪೆಕ್ಟರ್ ಜಿಎಚ್ ವಸವಾಡಾ ಅವರಿಗೂ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ನ್ಯಾಯಾಲಯವು ಶರ್ಮಾ ಮತ್ತು ವಸವಾಡಾ ಅವರಿಗೆ ತಲಾ 1,000 ರೂ.ಗಳ ದಂಡ ವಿಧಿಸಿದೆ.

ಸೋಮವಾರ ನಡೆದ 8ನೇ ಆವೃತ್ತಿ ಕಾರ್ಯಕ್ರಮ । ದಾಖಲೆ ವಿದ್ಯಾರ್ಥಿಗಳಿಂದ ನೋಂದಣಿ

ಪರೀಕ್ಷಾ ಪೆ ಚರ್ಚಾ: ಮೋದಿ ಪಾಠ

ದೆಹಲಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ನಡೆಸುವ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮದ ಎಂಟನೇ ಆವೃತ್ತಿ ಸೋಮವಾರ ನಡೆಯಿತು. ವಿದ್ಯಾರ್ಥಿಗಳೊಂದಿಗೆ ಪರೀಕ್ಷೆಗಳು ಮತ್ತು ಒತ್ತಡ ನಿರ್ವಹಣೆಗೆ ಸಂಬಂಧಿಸಿದ ಹಲವಾರು ವಿಷಯಗಳ ಕುರಿತು ಅವರು ಸಂವಾದ ನಡೆಸಿದ್ದಾರೆ. ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮಗಳ ಮೂಲಕ ಸಲಹೆ ನೀಡಿರುವ ಮೋದಿ, ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗದೆ ಓದಿನ ಕಡೆ ಗಮನ ಹರಿಸಬೇಕು, ಪರೀಕ್ಷೆಗಳೇ ಎಲ್ಲವೂ ಎಂಬ ಕಲ್ಪನೆಯೊಂದಿಗೆ ಬದುಕಬಾರದು ಎಂದು ಹೇಳಿದ್ದಾರೆ. ಈ ಸಲ ಸುಮಾರು ಮೂರೂವರೆ ಕೋಟಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ನೋಂದಣಿಯಾಗಿ ದಾಖಲೆ ಬರೆದಿದ್ದಾರೆ. ವಿದ್ಯಾರ್ಥಿಗಳಿಗೆ ಸಲಹೆ ನೀಡುವ ಜೊತೆಯಲ್ಲಿ ಪಾಲಕರು ಹಾಗೂ ಶಿಕ್ಷಕರಿಗೂ ಮೋದಿ ಕೆಲವು ಉತ್ತಮ ಸಲಹೆಗಳನ್ನು ನೀಡಿದ್ದಾರೆ.

ಸಮಯ ನಿರ್ವಹಣೆ: ಪ್ರಧಾನಿ ಮೋದಿ ಅವರು ಸಮಯದ ಬಳಕೆಯ ಮಹತ್ವವನ್ನು ಒತ್ತಿ ಹೇಳಿದರು. ವಿದ್ಯಾರ್ಥಿಗಳು ತಮ್ಮ ಸಮಯವನ್ನು ಯಾವುದಕ್ಕೆ ಎಷ್ಟು ಹೊತ್ತು ನೀಡಬೇಕು ಎಂದು ಮೊದಲೇ ವೇಳಾಪಟ್ಟಿ ಮಾಡಿಕೊಳ್ಳಬೇಕು, ನೆಚ್ಚಿನ ವಿಷಯಗಳನ್ನು ಕೇಂದ್ರೀಕರಿಸುವ ಬದಲು ಸವಾಲೆನಿಸುವ ವಿಷಯಗಳ ಬಗ್ಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಹೇಳಿದ್ದಾರೆ.

ಶಿಕ್ಷಕರಿಗೆ ಸಲಹೆ: ಪ್ರಧಾನಮಂತ್ರಿಯವರು ಶಿಕ್ಷಕರಿಗೆ ವಿಶೇಷವಾದ ಸಲಹೆಯನ್ನು ನೀಡಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳ ವಿಶಿಷ್ಟ ಸಾಮರ್ಥ್ಯಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡಬೇಕು ಎಂದು ಹೇಳಿದ್ದಾರೆ. ವಿದ್ಯಾರ್ಥಿಗಳಿಗೆ ಕಲಿಕೆಗೆ ಬೇಕಾದ ವಾತಾವರಣವನ್ನು ನಿರ್ಮಿಸಬೇಕು ಎಂದಿದ್ದಾರೆ.

ಪರೀಕ್ಷೆ ಹಾಗೂ ಜ್ಞಾನ : ಪರೀಕ್ಷೆಗಳ ಮಹತ್ವವನ್ನು ಹೇಳಿರುವ ಪ್ರಧಾನಿ, ಕೇವಲ ಅಂಕ ಗಳಿಕೆ ಮಾತ್ರ ಜೀವನವಲ್ಲ ಎಂದು ಹೇಳಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ತಯಾರಿ ನಡೆಸುವುದಕ್ಕಿಂತ ಹೆಚ್ಚಾಗಿ ಜ್ಞಾನವನ್ನು ಗಳಿಸುವತ್ತ ಗಮನಹರಿಸಬೇಕೆಂದು ಸಲಹೆ ನೀಡಿದ್ದಾರೆ.

ಹವ್ಯಾಸಗಳು ಮತ್ತು ಪಠ್ಯೇತರ ಚಟುವಟಿಕೆಗಳು: ಪೋಷಕರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಮಕ್ಕಳಿಗೆ ತಮ್ಮ ಆಸಕ್ತಿಗಳನ್ನು ಅನ್ವೇಷಿಸಲು

ಪ್ರಧಾನಿ ಹೇಳಿದ್ದು...

- ಜ್ಞಾನ ಮತ್ತು ಪರೀಕ್ಷೆ ಎರಡು ವಿಭಿನ್ನ ವಿಷಯಗಳು.
- ಸಮಯವನ್ನು ಯೋಜಿತ ರೀತಿಯಲ್ಲಿ ಬಳಸಬೇಕು.
- ಪೋಷಕರು ಯಾವುದೋ ಒಂದು ವಿಚಾರಕ್ಕೆ ಮಕ್ಕಳನ್ನು ಸೀಮಿತಗೊಳಿಸಬೇಡಿ.
- ತಮ್ಮ ಮಕ್ಕಳನ್ನು ಇತರ ಮಕ್ಕಳೊಂದಿಗೆ ಹೋಲಿಸದೆ, ಬೆಂಬಲಿಸಬೇಕು.
- ವಿದ್ಯಾರ್ಥಿಗಳು ಈ ಕ್ಷಣದಲ್ಲಿ ಬದುಕಲು ಕಲಿಯಬೇಕು.
- ವಿದ್ಯಾರ್ಥಿಗಳು ಸದಾ ಸವಾಲುಗಳಿಗೆ ಒಡ್ಡಿಕೊಳ್ಳಬೇಕು.
- ಸಕಾರಾತ್ಮಕ ಅಂಶಗಳನ್ನು ವಿದ್ಯಾರ್ಥಿಗಳು ಕಂಡುಕೊಳ್ಳಬೇಕು.
- ಹೆಚ್ಚಿನ ಅಂಕ ಬರದಿದ್ದರೆ ಜೀವನ ಮುಗಿಯಿತು ಎಂದು ಭಾವಿಸಬಾರದು.
- ಪರೀಕ್ಷೆಗಳನ್ನು ಜೀವನದ ಸರ್ವಸ್ವ ಮತ್ತು ಅಂತ್ಯ ಎಂದು ನೋಡಬಾರದು.

ಸ್ವಾತಂತ್ರ್ಯ ನೀಡಿ ಎಂದಿದ್ದಾರೆ. ವಿದ್ಯಾರ್ಥಿಗಳು ಪುಸ್ತಕಗಳಿಗೆ ಮಾತ್ರ ಸೀಮಿತವಾಗಿರಬಾರದು ಮತ್ತು ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು, ಇದು ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿ ಎಂದು ಹೇಳಿದ್ದಾರೆ.

ಒತ್ತಡ ನಿಭಾಯಿಸುವಿಕೆ: ಕ್ರೀಡೆಯಿಂದ ಸ್ಫೂರ್ತಿ ಪಡೆದು, ಒತ್ತಡ ನಿಭಾಯಿಸುವುದನ್ನು ಕಲಿತಿಕೊಳ್ಳಬೇಕು. ಕ್ರಿಕೆಟ್‌ನಲ್ಲಿ ಜನಸಂದಣಿಯ ಗದ್ದಲದ ನಡುವೆ ಬ್ಯಾಟ್ಸ್‌ಮನ್ ಚೆಂಡಿನ ಮೇಲೆ ಗಮನ ಕೇಂದ್ರೀಕರಿಸುವಂತೆ, ವಿದ್ಯಾರ್ಥಿಗಳು ಒತ್ತಡದ ಬಗ್ಗೆ ಚಿಂತಿಸುವ ಬದಲು ಕಲಿಕೆಯತ್ತ ಗಮನ ಹರಿಸಬೇಕು ಎಂಬ ಸೂಚನೆ ಕೊಟ್ಟಿದ್ದಾರೆ.

ಆರೋಗ್ಯ, ನಿದ್ರೆ ಮತ್ತು ಆಹಾರ ಪದ್ಧತಿ: ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಪ್ರಧಾನಿ ಒತ್ತಿ ಹೇಳಿದ್ದಾರೆ. ಸರಿಯಾದ ನಿದ್ರೆ ಮತ್ತು ಸಮತೋಲಿತ ಆಹಾರ ಪದ್ಧತಿ ದೇಹಕ್ಕೆ ಮಾತ್ರವಲ್ಲದೆ ಮಾನಸಿಕ ಆರೋಗ್ಯಕ್ಕೂ ಉತ್ತಮವಾಗಿದೆ. ಆರೋಗ್ಯ ಸರಿಯಾಗಿ ಕಾಪಾಡಿಕೊಂಡರೆ ಮಾತ್ರ ಸಾಧನೆ ಸಾಧ್ಯ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಮಹಾ ಕುಂಭಮೇಳಕ್ಕೆ ಮತ್ತಷ್ಟು ಜನಸಾಗರ

ತ್ರಿವೇಣಿಯಲ್ಲಿ ರಾಷ್ಟ್ರಪತಿ ಪುಣ್ಯಸ್ನಾನ

ಲಖನೌ: ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಜಗತ್ತಿನ ಬಹುದೊಡ್ಡ ಧಾರ್ಮಿಕ ಉತ್ಸವವಾದ ಮಹಾ ಕುಂಭಮೇಳದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ಭಾಗವಹಿಸಿದ್ದು, ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದರು. ಬಳಿಕ ಬಡೇ ಹನುಮಾನ್ ಮತ್ತು ಅಕ್ಷಯವತ್ ದೇವಸ್ಥಾನಗಳಿಗೆ ಭೇಟಿ ನೀಡಿರುವ ಮುರ್ಮು ಅಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಪ್ರಯಾಗ್‌ರಾಜ್‌ಗೆ ಆಗಮಿಸಿದ ಮುರ್ಮು ಅವರನ್ನು ಉತ್ತರಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಮತ್ತು ಸಿಎಂ ಯೋಗಿ ಆದಿತ್ಯನಾಥ್ ಅವರು ಬರಮಾಡಿಕೊಂಡರು. ಸೋಮವಾರ ಉತ್ತರಾಖಂಡ ಸಿಎಂ ಪುಷ್ಕರ್ ಸಿಂಗ್ ಧಾಮಿ ಅವರು ಸಂಗಮದಲ್ಲಿ ಪುಣ್ಯಸ್ನಾನ ಮಾಡಿದರು.

300 ಕಿ.ಮೀ ದಾಖಲೆಯ ಟ್ರಾಫಿಕ್

ಮಹಾ ಕುಂಭಮೇಳ ನಡೆಯುತ್ತಿರುವ ಹಿನ್ನೆಲೆಯಲ್ಲಿ ಲಕ್ಷಾಂತರ ಭಕ್ತರು ಪ್ರತಿ ದಿನ ಆಗಮಿಸುತ್ತಿದ್ದಾರೆ. ಕುಂಭಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನ ಬರುತ್ತಿರುವ ಹಿನ್ನೆಲೆಯಲ್ಲಿ ನೂರಾರು ಕಿಲೋಮೀಟರ್‌ಗಳಷ್ಟು ಉದ್ದಕ್ಕೆ ಭಾರೀ ಟ್ರಾಫಿಕ್ ಜಾಮ್ ಕಂಡು ಬಂದ. ಇದರಿಂದ ಮಹಾಕುಂಭಕ್ಕೆ ಹೋಗುವ ಸಾವಿರಾರು ಭಕ್ತರು ಹೆದ್ದಾರಿಗಳಲ್ಲಿ ಸಿಲುಕಿಕೊಂಡಿದ್ದಾರೆ. ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಬಿದ್ದ ವಾಹನಗಳ ಸಾಲು 300 ಕಿ.ಮೀ.ವರೆಗೆ ವಿಸ್ತರಿಸಿದೆ ಎಂದು ಮೂಲಗಳು ತಿಳಿಸಿವೆ. ವಸಂತ ಪಂಚಮಿಯ ಅಮೃತ್ ಸ್ನಾನದ ಬಳಿಕವೂ ಲಕ್ಷಾಂತರ ಜನರು ಪವಿತ್ರ ಸ್ನಾನಕ್ಕಾಗಿ ಪ್ರಯಾಗ್‌ರಾಜ್‌ಗೆ ಹೋಗುತ್ತಿದ್ದಾರೆ. ಸಂಚಾರವನ್ನು ನಿರ್ವಹಿಸಲು ಕಷ್ಟಪಡುತ್ತಿರುವ ನೆರೆಯ ಮಧ್ಯಪ್ರದೇಶದ ಹಲವಾರು ಜಿಲ್ಲೆಗಳ ಪೊಲೀಸರು ಮಾರ್ಗದಲ್ಲಿ ವಾಹನ ಸಂಚಾರವನ್ನು ನಿಲ್ಲಿಸಿದ್ದಾರೆ.



ಸೈಕಲ್ ಟ್ರ್ಯಾಕ್: ಸುಪ್ರೀಂ ಚಾಟಿ

ದೆಹಲಿ: ಕೊಳೆಗೇರಿಯ ಜನರಿಗೆ ಕಡಿಮೆ ಬೆಲೆಯಲ್ಲಿ ಮನೆಗಳನ್ನು ನಿರ್ಮಿಸಲು ಕೂಡ ರಾಜ್ಯ ಸರಕಾರಗಳ ಬಳಿ ಹಣವಿಲ್ಲ, ಅಲ್ಲದೇ

ಎಷ್ಟೋ ಜನರಿಗೆ ಶುದ್ಧ ಕುಡಿಯುವ ನೀರೂ ಸಿಗುತ್ತಿಲ್ಲ. ಅಂತಹದ್ದರಲ್ಲಿ ನೀವು ಸೈಕಲ್ ಟ್ರ್ಯಾಕ್‌ಗಳನ್ನು ನಿರ್ಮಿಸುವ ಬಗ್ಗೆ ಹಗಲುಗನಸು ಕಾಣುತ್ತೀರಲ್ಲ? ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿತು.

ದೇಶಾದ್ಯಂತ ಪ್ರತ್ಯೇಕ ಸೈಕಲ್ ಟ್ರ್ಯಾಕ್‌ಗಳನ್ನು ನಿರ್ಮಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರ ನ್ಯಾಯಪೀಠ, ದೇಶದ ಮುಂದಿರುವ ಆದ್ಯತೆಗಳೇನು ಎಂಬುದನ್ನು ಅರ್ಜಿದಾರರು ಸರಿಯಾಗಿ ತಿಳಿದುಕೊಳ್ಳಬೇಕಿದೆ. ಸೈಕಲ್ ಟ್ರ್ಯಾಕ್‌ಗಿಂತಲೂ ಪ್ರಮುಖ ತುರ್ತು ವಿಷಯಗಳು ದೇಶದ ಮುಂದಿದ್ದು, ಅವುಗಳ ಬಗ್ಗೆ ಗಮನಹರಿಸಬೇಕಿದೆ ಎಂದು ಹೇಳಿತು.

ಕೊಳೆಗೇರಿಗಳಲ್ಲಿ ಜನ ಎಂಥ ಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆ ಎಂಬುದನ್ನು ಅಲ್ಲಿಗೆ ಹೋಗಿ ನೋಡಿ, ಅವರಿಗೆ ಮನೆಗಳನ್ನು ನೀಡಲು ಸಹ ರಾಜ್ಯ ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಅಂಥದ್ದರಲ್ಲಿ ನೀವು ಸೈಕಲ್ ಟ್ರ್ಯಾಕ್‌ಗಳ ಬಗ್ಗೆ ಹಗಲುಗನಸು ಕಾಣುತ್ತಿರುವಿರಲ್ಲ. ಜನರಿಗೆ ಮೂಲಭೂತ ಸೌಕರ್ಯಗಳು ಬೇಕಿವೆ, ಅದನ್ನು ಬಿಟ್ಟು ನೀವು ಸೈಕಲ್ ಟ್ರ್ಯಾಕ್‌ಗಳ ಬಗ್ಗೆ ಮಾತನಾಡುತ್ತಿರುವಿರಿ ಎಂದು ನ್ಯಾಯಾಲಯ ಹೇಳಿತು. ನಮ್ಮ ಆದ್ಯತೆಗಳು ತಪ್ಪಾಗುತ್ತಿವೆ. ನಾವು ನಮ್ಮ ಆದ್ಯತೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿದೆ. ಸಂವಿಧಾನದ ಅನುಚ್ಛೇದ 21ರ ಬಗ್ಗೆ ನಾವು ತಿಳಿಯಬೇಕಿದೆ. ಜನರಿಗೆ ಕುಡಿಯಲು ಶುದ್ಧ ನೀರು ಇಲ್ಲ. ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ನಿಮಗೆ ಸೈಕಲ್ ಟ್ರ್ಯಾಕ್ ಬೇಕೇ? ಎಂದು ಸುಪ್ರೀಂ ಕೋರ್ಟ್ ಅರ್ಜಿದಾರರಿಗೆ ಪ್ರಶ್ನಿಸಿತು.

ಲಡ್ಡು ಪ್ರಕರಣದಲ್ಲಿ ನಾಲ್ವರು ಪ್ರಮುಖ ಡೈರಿ ಮುಖ್ಯಸ್ಥರ ಬಂಧನ । ತುಪ್ಪದಲ್ಲಿ ಕಲಬೆರಕೆ ಹಗರಣ

ತಿರುಪತಿ ಲಡ್ಡು ಪ್ರಕರಣ: ನಾಲ್ವರ ಬಂಧನ

ಹೈದರಾಬಾದ್: ಕಳೆದ ವರ್ಷ ದೇಶವನ್ನೇ ಬೆಚ್ಚಿಬೀಳಿಸಿದ್ದ ತಿರುಪತಿ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ನಾಲ್ವರನ್ನು ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ



ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ತನಿಖೆ ನಡೆಸಿದ್ದ ಹೈದರಾಬಾದ್ ವಿಭಾಗದ ಜಂಟಿ ನಿರ್ದೇಶಕ ವೀರೇಶ್ ಪ್ರಭು, ವಿಶಾಖಪಟ್ಟಣಂ ಸಿಬಿಐ ಎಸ್ಪಿ ಮುರಳೀರಾಂಬ, ವಿಶಾಖಪಟ್ಟಣಂ ಡಿಐಜಿ ಗೋಪಿನಾಥ್ ಜೆಟ್ಟಿ, ಗುಂಟೂರು ಐಜಿ ಸರ್ವಶ್ರೇಷ್ಠಿ ತ್ರಿಪಾಠಿ ಮತ್ತು ಎಫ್‌ಎಸ್‌ಎಸ್‌ಎಐ ಅಧಿಕಾರಿ ಸತ್ಯಕುಮಾರ್ ಪಾಂಡಾ ನೇತೃತ್ವದ ತಂಡ ನಾಲ್ವರು ಆರೋಪಿಗಳನ್ನು ಬಂಧಿಸಿದೆ.

ಭೋಲೆ ಬಾಬಾ ಡೈರಿಯ ಮಾಜಿ ನಿರ್ದೇಶಕರಾದ ವಿಪಿನ್ ಜೈನ್ ಮತ್ತು ಪೊಮಿಲ್ ಜೈನ್ (ರೂರ್ಕಿ, ಉತ್ತರಾಖಂಡ), ವೈಷ್ಣವಿ ಡೈರಿಯ (ಪೂನಂಬಾಕ್ಕಂ) ಸಿಇಒ ಅಪೂರ್ವ ವಿನಯ್ ಕಾಂತ್ ಚಾವ್ಡಾ ಮತ್ತು ಎಆರ್ ಡೈರಿ (ದುಂಡಿಗಲ್) ಎಂ.ಡಿ ರಾಜು ರಾಜಶೇಖರನ್ ಲಡ್ಡು ಪ್ರಸಾದ ಕಲಬೆರಕೆ ಹಗರಣದಲ್ಲಿ ಬಂಧಿತರಾಗಿರುವ ಆರೋಪಿಗಳಾಗಿದ್ದಾರೆ. ಆರೋಪಿಗಳನ್ನು ವಶಕ್ಕೆ ಪಡೆದಿರುವ ಎಸ್‌ಐಟಿ ಅಧಿಕಾರಿಗಳು ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಮೂಲಗಳ ಪ್ರಕಾರ ಆರೋಪಿಗಳನ್ನು ಅಪರಾಧ ಸಂಖ್ಯೆ 470/24 ರ ಅಡಿಯಲ್ಲಿ ಬಂಧಿಸಿ ತಿರುಪತಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ತನಿಖೆಯಲ್ಲಿ ತುಪ್ಪ ಪೂರೈಕೆಯಲ್ಲಿ ಪಾಲಿಸಬೇಕಾದ ನಿಯಮಗಳ ಉಲ್ಲಂಘನೆಯಾಗಿರುವುದು ಬಹಿರಂಗವಾಗಿದೆ. ಟೆಂಡರ್ ಪಡೆಯಲು ನಕಲಿ ದಾಖಲೆಗಳು ಮತ್ತು ಸ್ಟ್ಯಾಂಪ್‌ಗಳನ್ನು ಬಳಸಿರುವುದು ಕೂಡ ಸೇರಿಕೊಂಡಿದೆ. ವೈಷ್ಣವಿ ಡೈರಿಯು ಭೋಲೆ ಬಾಬಾ ಡೈರಿಯ ತುಪ್ಪ ಪೂರೈಕೆಯ ನಿಯಮಗಳನ್ನು ತಿರುಚಿರುವುದು ಬೆಳಕಿಗೆ ಬಂದಿದೆ. ವಿಚಾರಣೆಯಲ್ಲಿ ಪೂರೈಕೆಯಲ್ಲಿ ಹಲವು ವ್ಯತ್ಯಾಸಗಳು ಮತ್ತು ಸುಳ್ಳು ದಾಖಲೆಗಳನ್ನು ನೀಡಿರುವುದು ಕಂಡುಬಂದಿವೆ.

ಇತ್ತೀಚೆಗೆ ಇದೇ ಘಟನೆಗೆ ಸಂಬಂಧಿಸಿದಂತೆ ಎಸ್‌ಐಟಿ ನಾಲ್ವರನ್ನು ಬಂಧಿಸಿತ್ತು. ಇವುಗಳಲ್ಲಿ ಎಆರ್ ಡೈರಿ, ಪರಾಗ್ ಫುಡ್ಸ್, ಪ್ರೀಮಿಯರ್ ಅಗ್ರಿ ಫುಡ್ಸ್ ಮತ್ತು ಆಲ್ಫಾ ಮಿಲ್ಕ್ ಫುಡ್ಸ್ ಸೇರಿವೆ.

ಏನಿದು ಘಟನೆ?

ತಿರುಪತಿ-ತಿರುಮಲ ದೇವಾಲಯದಲ್ಲಿ ನೀಡುವ ಲಡ್ಡು ಪ್ರಸಾದದ ರೂಪದಲ್ಲಿ ನೀಡುವ ಲಡ್ಡುವಿನಲ್ಲಿ ಹಸುವಿನ ಕೊಬ್ಬು ಮತ್ತು ಪ್ರಾಣಿಗಳ ತ್ಯಾಜ್ಯ ಮಿಶ್ರಣ ಮಾಡಲಾಗಿದೆ ಎಂದು ಚಂದ್ರಬಾಬು ನಾಯ್ಡು ಸರಕಾರ ಆರೋಪಿಸಿತ್ತು. ಈ ಹಿಂದಿನ ವೈಎಸ್‌ಆರ್ ಸಿಪಿ ಸರ್ಕಾರ ತಿರುಮಲ ಲಡ್ಡುವಿನ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಲಿಲ್ಲ ಎಂದು ಗಂಭೀರ ಆರೋಪ ಮಾಡಿದ ಬೆನ್ನಲ್ಲೇ ತನಿಖೆ ತೀವ್ರಗೊಂಡು ಪ್ರಸಾದದಲ್ಲಿ ದನದ ಕೊಬ್ಬು ಮಿಶ್ರಣ ಮಾಡಲಾಗಿದೆ ಎಂಬ ಅಘಾತಕಾರಿ ಘಟನೆ ಹೊರಬಿದ್ದಿತ್ತು.

ಪುರಸಭಾ ಕಾರ್ಯಾಲಯ ಮಾಲೂರು

ದೂರವಾಣಿ ಸಂ: 08151-232238/232840/232847, E-mail: ka.malur.tmc@gmail.com

ನಂ: ಪು.ಸ.ಮಾ/ಕಿ.ಅ/ಇ-ಪ್ರೊಕ್/ಸಿಆರ್/10/2024-25 ದಿನಾಂಕ: 07.02.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಮಾಲೂರು ಪುರಸಭೆ ವ್ಯಾಪ್ತಿಯಲ್ಲಿ 2024-25 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ.-1999 ನಿಯಮಗಳು 2000) ಅನ್ವಯ ದ್ವಿ-ಲಕೋಟೆ ಪದ್ಧತಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಸರಬರಾಜುದಾರರು/ಗುತ್ತಿಗೆದಾರರು ಟೆಂಡರ್‌ಗಳನ್ನು, ತಾಂತ್ರಿಕ ಬಿಡ್‌ನ್ನು ಹಾಗು ಆರ್ಥಿಕ ಬಿಡ್‌ನ್ನು ತೆರೆಯುವ ವಿವರಗಳನ್ನು KPPP portal ನಲ್ಲಿ ಕಾಣಬಹುದು.

ಕ್ರ.ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2024-25/RD/WORK_INDENT34502	133.00

ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾದಿನದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು, ಹಾಗೂ ಮೇಲ್ಕಂಡ ಟೆಂಡರ್‌ಗಳಿಗೆ ನಿಗದಿಪಡಿಸಿದ ಸಮಯದಲ್ಲಿ ಯಾರೂ ಭಾಗವಹಿಸದಿದ್ದ ಸಂದರ್ಭದಲ್ಲಿ ಏಳು ದಿನಗಳ ಅಧಿಕ ಅವಧಿಯನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಅಳವಡಿಸಿದೆ.

ಸಹಿ/- ಅಧ್ಯಕ್ಷರು, ಪುರಸಭೆ, ಮಾಲೂರು | ಸಹಿ/- ಉಪಾಧ್ಯಕ್ಷರು, ಪುರಸಭೆ, ಮಾಲೂರು | ಸಹಿ/- ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಮಾಲೂರು | ಸಹಿ/- ಮುಖ್ಯಾಧಿಕಾರಿ, ಪುರಸಭೆ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:452/ಕೆಎಸ್‌ಎಂಸಿಎ/2024-25

ನೈನಿತಾಲ್ ದೇಗುಲಕ್ಕೆ ದೇವೇಗೌಡರ ಭೇಟಿ

ನೈನಿತಾಲ್: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಉತರಾ ಖಂಡ್‌ನ ನೈನಿತಾಲ್‌ನಲ್ಲಿರುವ ಪ್ರಸಿದ್ಧ ನೈನಾದೇವಿ ದೇಗುಲಕ್ಕೆ ಸೋಮವಾರ ಭೇಟಿ ನೀಡಿ, ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆ. ದೇಗುಲದ ಆವರಣದಲ್ಲಿ

ಅವರು ಮಂತ್ರ ಪಠಿಸಿದರು. ಬಳಿಕ ಮಾತನಾಡಿದ ಅವರು, ನೈನಿ ಕೆರೆ ಮತ್ತು ನೈನಿತಾಲ್ ನನಗೆ ಕಾಶ್ಮೀರವನ್ನು ನೆನಪಿಸುತ್ತಿದೆ. ಕಾಶ್ಮೀರದ ಕೆರೆಗಳಲ್ಲಿನ ಸೌಂದರ್ಯ ನೈನಿತಾಲ್‌ನಲ್ಲೂ ಇದೆ. ಎರಡೂ ಒಂದೇ ರೀತಿಯಾಗಿ ನೋಡಲು ಬಹಳ ಸುಂದರವಾಗಿವೆ ಎಂದರು.

ಇದಕ್ಕೂ ಮುನ್ನ, ನೈನಾದೇವಿ ದೇಗುಲ ಟ್ರಸ್ಟ್‌ನ ಅಧ್ಯಕ್ಷ ರಾಜೀವ್ ಲೋಚನ್ ಶಾ, ಉಪ ಕಾರ್ಯದರ್ಶಿ ಪ್ರದೀಪ್ ಶಾ ಮತ್ತು ಇತರರರು ಮಾಜಿ ಪ್ರಧಾನಿಯನ್ನು ಬರಮಾಡಿಕೊಂಡರು. ಮಾತೆ ನೈನಾದೇವಿಯ ಪ್ರತಿಮೆ ಮತ್ತು ಚುನಾರಿಯನ್ನು ಕೊಡುಗೆಯಾಗಿ ನೀಡಿದರು. ದೇವೇಗೌಡ ಪರವಾಗಿ ದೇಗುಲದ ಮುಖ್ಯ ಆಚಾರ್ಯ ಚಂದ್ರಶೇಖರ್ ತಿವಾರಿ ಪೂಜೆ ನೆರವೇರಿಸಿದರು.

ಮದುವೆ ವೇದಿಕೆಯಲ್ಲೇ ಯುವತಿಯ ಸಾವು

ವಿದಿಶಾ: ತನ್ನ ಸಂಬಂಧಿಯ ಮದುವೆ ಸಮಾರಂಭದಲ್ಲಿ ವೇದಿಕೆಯಲ್ಲಿ ಖುಷಿಯಿಂದ ಕುಣಿಯುತ್ತಿದ್ದ ಯುವತಿ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಮಧ್ಯಪ್ರದೇಶದ ವಿದಿಶಾ ಜಿಲ್ಲೆಯಲ್ಲಿ ನಡೆದಿದೆ. ರೆಸಾರ್ಟ್‌ವೊಂದರಲ್ಲಿ ಮದುವೆ ಸಮಾರಂಭ ಆಯೋಜಿಸಲಾಗಿತ್ತು. ಯುವತಿಯೊಬ್ಬರು ಖುಷಿ ಖುಷಿಯಿಂದ ವೇದಿಕೆ ಮೇಲೆ ನೃತ್ಯ ಮಾಡುತ್ತಿದ್ದಾಗ ಏಕಾಏಕಿ ಕುಸಿದುಬಿದ್ದಿದ್ದಾಳೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ವಿಡಿಯೋದಲ್ಲಿ ಸೀರೆಯುಟ್ಟ ಯುವತಿ ಬಾಲಿವುಡ್‌ನ ಲೆಹ್ರಾ ಕೆ ಬಲ್ಖಾ ಕೆ ಹಾಡಿಗೆ ನೃತ್ಯ ಮಾಡುತ್ತಿದ್ದಳು, ಇದ್ದಕ್ಕಿದ್ದಂತೆ ಕುಸಿದುಬಿದ್ದಿರುವುದನ್ನು ಕಾಣಬಹುದು. ಮೃತಳನ್ನು ಪರಿಣಿತಾ ಜೈನ್ ಎಂದು ಗುರುತಿಸಲಾಗಿದೆ. ತನ್ನ ಸೋದರ ಸಂಬಂಧಿಯ ವಿವಾಹ ಸಮಾರಂಭದಲ್ಲಿ ಭಾಗವಹಿಸಲು ವಿದಿಶಾಗೆ ಬಂದಿದ್ದರು. ಕಾರ್ಯಕ್ರಮದ ಸಮಯದಲ್ಲಿ ವೇದಿಕೆಯ ಮೇಲೆ ನೃತ್ಯ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಜನಗಣತಿ ನಡೆಯಲಿ: ಸೋನಿಯಾ ಆಗ್ರಹ

ದೆಹಲಿ: ದೇಶದಲ್ಲಿ ಆದಷ್ಟು ಬೇಗ ಜನಗಣತಿ ನಡೆಬೇಕೆಂದು ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಸೋಮವಾರ ಕೇಂದ್ರ ಸರಕಾರಕ್ಕೆ ಆಗ್ರಹಿಸಿದ್ದಾರೆ. ಆಹಾರ ಭದ್ರತಾ ಕಾನೂನಿನಡಿ

ಸೌಲಭ್ಯಗಳಿಂದ ವಂಚಿತರಾಗಿರುವ ದೇಶದ ಸುಮಾರು 14 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸಲು ಬೇಗನೆ ಜನಸಂಖ್ಯಾ ಗಣತಿ ನಡೆಸಬೇಕು ಎಂದು ಅವರು ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತನಾಡಿದ ಸೋನಿಯಾ ಗಾಂಧಿ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅಡಿ ಫಲಾನುಭವಿಗಳನ್ನು ಈಗಲೂ 2011ರ ಜನಗಣತಿಯ ಆಧಾರದಲ್ಲಿ ಗುರುತಿಸಲಾಗುತ್ತಿದೆಯೇ ಹೊರತು, ಇತ್ತೀಚಿನ ಜನಸಂಖ್ಯೆಯ ಅಂಕಿ - ಅಂಶಗಳ ಮೇಲೆ ಅಲ್ಲ ಎಂದು ಹೇಳಿದರು. ವಿಶೇಷವಾಗಿ ಕೋವಿಡ್-19 ಬಿಕ್ಕಟ್ಟಿನ ಸಮಯದಲ್ಲಿ ಲಕ್ಷಾಂತರ ದುರ್ಬಲ ಕುಟುಂಬಗಳನ್ನು ಹಸಿವಿನಿಂದ ರಕ್ಷಿಸುವಲ್ಲಿ ಈ ಶಾಸನವು ಪಾತ್ರ ವಹಿಸಿದೆ ಎಂದು ಸೋನಿಯಾ ಬಣ್ಣಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಮೂಲಸೌಕರ್ಯ ವಿಭಾಗ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560020.

ಸಂ.: ಬೆಂಅಪ್ರಾ/ಕಾನಿಅ(ಮೂವಿ)/ಹರಾಜು(ವಾಹನ)/141/2024-25 ದಿನಾಂಕ: 07-02-2025

ಟೆಂಡರ್ ಕಮ್ ಸಾರ್ವಜನಿಕ ಹರಾಜಿಗೆ ಆಹ್ವಾನ

ಕಾರ್ಯನಿರ್ವಾಹಕ ಅಭಿಯಂತರರು, ಮೂಲಸೌಕರ್ಯ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020, ಇವರು ಆಯುಕ್ತರು, ಬಿಡಿಎ, ಬೆಂಗಳೂರು ಇವರ ಪರವಾಗಿ ಈ ಕೆಳಕಂಡ ನಿರುಪಯುಕ್ತ ವಾಹನಗಳಿಗೆ ಮೊಹರು ಮಾಡಿದ ಟೆಂಡರ್ ಕಮ್ ಸಾರ್ವಜನಿಕ ಹರಾಜನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಕಮ್ ಸಾರ್ವಜನಿಕ ಹರಾಜಿಗಾಗಿ ಪ್ರಸ್ತಾಪಿಸಲಾದ ನಿರುಪಯುಕ್ತ ವಾಹನಗಳ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

ಕ್ರ.ಸಂ.	ವಾಹನ ನೋಂದಣಿ ಸಂಖ್ಯೆ	ವಾಹನದ ಹೆಸರು	ವಾಹನದ ಮಾದರಿ
1	KA-04 MC 7296	ಟಾಟಾ ಇಂಡಿಗೋ	2006
2	KA-04 MJ 777	ಟಾಟಾ ಇಂಡಿಗೋ	2003
3	KA-04 MC 7291	ಟಾಟಾ ಇಂಡಿಗೋ	2006
4	KA-04 MC 7293	ಟಾಟಾ ಇಂಡಿಗೋ	2006
5	KA-04 MB 925	ಟಾಟಾ ಇಂಡಿಗೋ	2004
6	KA-04 MG 5949	ಷೆವ್ರೋಲೆ ಕ್ಯಾಪ್ಟಿವಾ	2008
7	KA-04 Z 9329	ಟೆಂಪೋ ಟ್ರಾವೆಲರ್	2002

ಟೆಂಡರ್ ನಮೂನೆಯ ವೆಚ್ಚ: ರೂ. 1000/-

ಟೆಂಡರ್ ಕಮ್ ಸಾರ್ವಜನಿಕ ಹರಾಜಿನ ವೇಳಾಪಟ್ಟಿ ಈ ಕೆಳಗಿನಂತಿದೆ: (1) ಖಾಲಿ ಟೆಂಡರ್ ನಮೂನೆಯ ವಿತರಣೆ: 12-02-2025 ರಿಂದ 18-02-2025, ಸಾಯಂಕಾಲ: 4:00 ಗಂಟೆಯವರೆಗೆ. (2) ಟೆಂಡರ್ ನಮೂನೆಯ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 19-02-2025, ಮಧ್ಯಾಹ್ನ 12.00 ಗಂಟೆಗಿಂತ ಮೊದಲು. (3) ಹರಾಜಿನ ದಿನಾಂಕ: 20-02-2025 ಬೆಳಿಗ್ಗೆ 11.30 ಗಂಟೆಗೆ. (4) ಹರಾಜು ಸ್ಥಳ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮೇಲಿನ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಮೂಲಸೌಕರ್ಯ ವಿಭಾಗ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.
ಬಳ್ಳಾರಿ-ಬೆಂಗಳೂರು ರಸ್ತೆ, ಬಂಡಿಮೋಟ್, ಬಳ್ಳಾರಿ-583101
ಇಮೇಲ್- apmcballari@gmail.com, ದೂ:08392-250442
ಫ್ಯಾಕ್ಸ್:08392-250890

ಸಂ:ಕೃಮಾಇ/ಕೃಉಮಾಸ/ಅಭಿಕೆ/ 855 /2024-25 ದಿನಾಂಕ:07/02/2025

ಇ-ಟೆಂಡರ್ ಪ್ರಕಟಣೆ

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಆಲದಹಳ್ಳಿಯ ಗ್ರಾಮದಲ್ಲಿ Construction Of 3000 MT Capacity Cold Storage At Aladahalli Chilly Market Yard of APMC Ballari (R.O Code RM3008) ಕಾಮಗಾರಿಯನ್ನು ಕೈಗೊಳ್ಳಲು 2024-25 ನೇ ಸಾಲಿನ ರಾಜ್ಯ ವ್ಯಾಪ್ತಿ ಏಕರೂಪ ಅನುಸೂಚಿತ ದರಪಟ್ಟಿ ದರಸೂಚಿಯಂತೆ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999-2000 ರನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ http://kppp.karnataka.gov.in ನಲ್ಲಿ ಸ್ಪರ್ಧಾತ್ಮಕ ಧರವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತೆ ಇರುತ್ತದೆ. Apmc/2024-25/BD/WORK_INDENT 432

01.ಬಿಡ್ ಪೂರ್ವ ಭಾವಿ ಸಭೆ ದಿನಾಂಕ: 20-02-2025
02.ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ: 10-03-2025
03.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12-03-2025
04.ಆರ್ಥಿಕ ಬಿಡ್ ತೆರೆಯುವ ದಿನಾಂಕ: (ತಾಂತ್ರಿಕ ಬಿಡ್ ಅರ್ಹತೆ ಪಡೆದ ಗುತ್ತಿಗೆದಾರರು): 18-03-2025

ಇ.ಎಂ.ಡಿ. ಹಣವನ್ನು ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರ್ಕಾರ ಸೆಂಟ್ರಲ್ ಪೊಲಿಂಗ್ ಅಕೌಂಟಿನಲ್ಲಿ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು. ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ. ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿರುವ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. http://kppp.karnataka.gov.in ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರ ಇ-ಪ್ರಕ್ಯೂರೆಮೆಂಟ್ ಸಹಾಯವಾಣಿ 080-22485867 ಮತ್ತು ಕಾರ್ಯದರ್ಶಿ ಎ.ಪಿ.ಎಂ.ಸಿ. ಬಳ್ಳಾರಿ ಸಹಾಯವಾಣಿ 08392-250442 ರವರಿಂದ ಪಡೆಯಬಹುದಾಗಿದೆ. ಟೆಂಡರ್ ನಿಯಮಾವಳಿಗಳಿಗಾಗಿ ಇ-ಪ್ರಕ್ಯೂರ್ ಮೆಂಟ್ ಅಪ್ ಲೋಡ್ ಮಾಡಿದ ಬಿಡ್ ಡಾಕ್ಯೂಮೆಂಟ್ಗಳನ್ನು ನೋಡುವುದು. ಯಾವುದೇ ತಿದ್ದುಪಡಿ ಇದ್ದಲ್ಲಿ ಮೇಲಿನ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ., ಬಳ್ಳಾರಿ. | ಸಹಿ/- ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ., ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/897/ಕೆಎಸ್‌ಎಂಸಿಎ/2024-25

ಕಾಂಗ್ರೆಸ್ ರಚನಾತ್ಮಕವಾಗಿ ವರ್ತಿಸಲಿ: ಪ್ರಲ್ಹಾದ್ ಜೋಶಿ

ದೆಹಲಿ: ಕಾಂಗ್ರೆಸ್ ಪಕ್ಷವು ದೆಹಲಿ ಚುನಾವಣೆಯಿಂದಾದರೂ ಪಾಠ ಕಲಿಯಬೇಕು. ಸದನದಲ್ಲಿ ಅನಗತ್ಯ ಗದ್ದಲ ಎಬ್ಬಿಸಿ ಸ್ಥಗಿತಗೊಳಿಸುವುದನ್ನು ನಿಲ್ಲಿಸಲಿ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಸಂಸತ್ ಆವರಣದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸದನದಲ್ಲಿ ಕಾಂಗ್ರೆಸ್ ಪಕ್ಷವು ರಚನಾತ್ಮಕ ವಿಪಕ್ಷವಾಗಿ ವರ್ತಿಸಲಿ ಎಂದು ಸಲಹೆ ನೀಡಿದರು. ದೆಹಲಿ ವಿಧಾನಸಭೆ ಚುನಾವಣೆಯಲ್ಲಿ

ಕಾಂಗ್ರೆಸ್ ಒಂದು ರಾಷ್ಟ್ರೀಯ ಪಕ್ಷವಾಗಿ ಶೂನ್ಯ ಸಂಪಾದನೆ ಸಾಧಿಸಿದೆ. ಇದು ಅವರ ಹಿಂಸಾಚಾರ ಪ್ರಚೋದನೆಗೆ ಸಿಕ್ಕ ಪ್ರತ್ಯುತ್ತರ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಟೀಕಿಸಿದರು. ದೆಹಲಿಯಲ್ಲಿ ಹ್ಯಾಟ್ರಿಕ್ ಆಡಳಿತ ನಡೆಸಿದಂತಹ ಕಾಂಗ್ರೆಸ್ ಪಕ್ಷ ಈಗ ಹ್ಯಾಟ್ರಿಕ್ ಆಗಿಯೇ ಶೂನ್ಯ ಸಂಪಾದನೆ ಮಾಡಿದೆ. ಶೇ.45-50ರಷ್ಟು ಮತ ಪಡೆಯುತ್ತಿದ್ದವರು ಈಗ ಇಂತಹ ಹೀನಾಯ ಸ್ಥಿತಿ ತಲುಪಿದ್ದಾರೆ ಎಂದು ಅವರು ಲೇವಡಿ ಮಾಡಿದರು. ಲೋಕಸಭೆಯಲ್ಲಿ ಮತ್ತು ವಿಧಾನಸಭೆಗಳಲ್ಲಿ ಒಂದು ರಚನಾತ್ಮಕ ವಿರೋಧ ಪಕ್ಷವಾಗಿ ಕಾಂಗ್ರೆಸ್ ಹೊರಹೊಮ್ಮಬೇಕು. ಆಡಳಿತ ಪಕ್ಷದೊಂದಿಗೆ ಒಂದು ಪಕ್ಷವು ವಿಪಕ್ಷವಾಗಿ ಇರಬೇಕು. ಮುಂದಿನ ದಿನಗಳಲ್ಲಾದರೂ ಕಾಂಗ್ರೆಸ್ ನಾಯಕರು ಈ ನಿಟ್ಟಿನಲ್ಲಿ ಹೆಜ್ಜೆಯಿಡಲಿ ಎಂದು ಸಚಿವ ಜೋಶಿ ಸಲಹೆ ಮಾಡಿದರು. ಹಿಂಸಾಚಾರ ಪ್ರಚೋದನೆ, ಸದನದಲ್ಲಿ ಅನಗತ್ಯ ಗದ್ದಲ, ಸುಗಮವಾಗಿ ಸದನ ನಡೆಯಲು ಬಿಡದೇ ಇರುವುದು ಇದೆಲ್ಲವನ್ನೂ ಮತದಾರರು ಗಮನಿಸಿದ್ದಾರೆ. ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ಈಗ ಜನರೇ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿದರು. ಸಂಸತ್‌ನಲ್ಲಿ ಸಣ್ಣಪುಟ್ಟ ವಿಷಯಗಳಿಗೆ ಗದ್ದಲ ಎಬ್ಬಿಸಿ ಸದನ ಸ್ಥಗಿತಗೊಳಿಸುವುದನ್ನು ಕಾಂಗ್ರೆಸ್ ಇನ್ನಾದರೂ ನಿಲ್ಲಿಸಲಿ. ಬದಲಿಗೆ ಒಂದು ರಚನಾತ್ಮಕ ವಿಪಕ್ಷವಾಗಿ ಚರ್ಚೆ ನಡೆಸುವತ್ತ ಗಮನ ಹರಿಸಲಿ ಎಂದು ಅವರು ಕಾಂಗ್ರೆಸ್ ನಾಯಕರಿಗೆ ಚಾಟಿ ಬೀಸಿದ್ದಾರೆ.

ಕೇಂದ್ರದಿಂದ ಮೂಲಸೌಕರ್ಯ ಅಭಿವೃದ್ಧಿ

ಭಾರತಕ್ಕೆ ಮೂರನೇ ದೊಡ್ಡ ಆರ್ಥಿಕತೆ ಗುರಿ: ಸಿಂಧಿಯಾ

ದೆಹಲಿ: ಕಳೆದ ಒಂದು ವರ್ಷದಲ್ಲಿ ಮೋದಿ ನೇತೃತ್ವದ ಸರ್ಕಾರ ದೇಶದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ 11 ಲಕ್ಷ ಕೋಟಿ ರೂ ವೆಚ್ಚ ಮಾಡಿದೆ. ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ ಒಂದು ವರ್ಷ ದಲ್ಲಿ ಮೂಲಸೌಕ

ರ್ಯಗಳ ಅಭಿವೃದ್ಧಿಗೆ ವ್ಯಯಿಸುತ್ತಿದ್ದುದು ಕೇವಲ 2 ಲಕ್ಷ ಕೋಟಿ ರೂ ಮಾತ್ರವೇ ಎಂದು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಎರಡು ಸರಕಾರಗಳ ಸಾಧನೆಗಳನ್ನು ತುಲನೆ ಮಾಡಿದ್ದಾರೆ.

ಹಿಂದೆ ಶೇ. 90ರಷ್ಟು ಫೋನ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ ಶೇ. 90ರಷ್ಟು ಫೋನ್‌ಗಳನ್ನು ಭಾರತದಲ್ಲೇ ತಯಾರಿಸಲಾಗುತ್ತಿದೆ. 1.28 ಲಕ್ಷ ಕೋಟಿ ರೂ ಮೌಲ್ಯದ ಸ್ಮಾರ್ಟ್‌ಫೋನ್‌ಗಳನ್ನು ರಫ್ತು ಮಾಡಲಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ. ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಬ್ಯಾಂಕುಗಳಿಗೆ ಅನುತ್ಪಾದಕ ಆಸ್ತಿಗಳ (ಎನ್‌ಪಿಎ) ಹೊರೆ ಬಹಳ ಇತ್ತು. 2014ರಲ್ಲಿ ಬ್ಯಾಂಕುಗಳ ಎನ್‌ಪಿಎ ಪ್ರಮಾಣ ಶೇ. 11.5ರಷ್ಟಿತ್ತು, ಈಗ ಅದು ಶೇ. 2.6ಕ್ಕೆ ಇಳಿಕೆ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಳೆದ ಒಂದು ವರ್ಷದಲ್ಲಿ 2,031 ಕಿ.ಮೀ.ನಷ್ಟು ರೈಲ್ವೆ ಲೈನ್‌ಗಳು, ಆರು ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ. ಟೆಲಿಕಾಂ ಸೆಕ್ಟರ್‌ನಲ್ಲಿ 10,000ಕ್ಕೂ ಹೆಚ್ಚು ಗ್ರಾಮಗಳಲ್ಲಿ ಟವರ್‌ಗಳನ್ನು ಸ್ಥಾಪಿಸುವ ಮೂಲಕ ಕನೆಕ್ಟಿವಿಟಿ ಹೆಚ್ಚಿಸಲಾಗಿದೆ ಎಂದು ಕೇಂದ್ರ ಸಚಿವರು ಮಾಹಿತಿ ನೀಡಿದ್ದಾರೆ. ಭಾರತದ ರಫ್ತು ಒಂದು ವರ್ಷದಲ್ಲಿ 600 ಬಿಲಿಯನ್ ಡಾಲರ್‌ಗೆ ಏರಿದೆ. ವಿದೇಶ ವಿನಿಮಯ ಮೀಸಲು ನಿಧಿ ವಿಶ್ವದಲ್ಲೇ ನಾಲ್ಕನೇ ಗರಿಷ್ಠ ಮಟ್ಟದಲ್ಲಿದೆ. ಜಾಗತಿಕ ಆರ್ಥಿಕತೆ ಶೇ. 3.2ರಷ್ಟು ಬೆಳೆದರೆ ಭಾರತದ ಪ್ರಗತಿ ಶೇ. 6.5ರಷ್ಟಿದೆ. 2027ರೊಳಗೆ ಭಾರತ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವ ಗುರಿ ಇದೆ. ಮುಂದಿನ ಎರಡು ವರ್ಷದಲ್ಲಿ ಜರ್ಮನಿ ಮತ್ತು ಜಪಾನ್ ಆರ್ಥಿಕತೆಗಳನ್ನು ಭಾರತ ಹಿಂದಿಕ್ಕಲಿದೆ.

ಸಮಾಚಾರ ಸಣ್ಣದಲ್ಲ

ಗ್ರಾಮೀಣ ಮಕ್ಕಳಿಗೆ ಉನ್ನತ ಸ್ಥಾನ ಸಿಗಲಿ

ಮದ್ದೂರು: ಗ್ರಾಮೀಣ ಮಕ್ಕಳು ನಗರ ಪ್ರದೇಶದ ಮಕ್ಕಳಂತೆ ಓದಿ ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ತಾವು ಹುಟ್ಟಿ ಬೆಳೆದ ಗ್ರಾಮಕ್ಕೆ ಶಾಲೆಗೆ ಕೀರ್ತಿ ತರಬೇಕೆಂದು ಸಂಗೀತ ನಿರ್ದೇಶಕ, ಹಾಸ್ಯನಟ ಡಾ. ಸಾಧುಕೋಕಿಲ ತಿಳಿಸಿದರು. ತಾಲೂಕಿನ ಬೆಸಗರಹಳ್ಳಿ ಗ್ರಾಮದ ಮಾನಸ ಎಜುಕೇಷನ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಮಾನಸೋತ್ಸವ' ಶಾಲಾ ವಾರ್ಷಿಕೋತ್ಸವದಲ್ಲಿ ಸ್ವಾತಂತ್ರ್ಯ ಹೋರಾಟಗಾರ 'ಡಿ. ಕರಡೀಗೌಡ ಕಲಾ ಕೌಸ್ತುಭ ಪ್ರಶಸ್ತಿ ' ಸ್ವೀಕರಿಸಿ ಅವರು ಮಾತನಾಡಿದರು. ಸಿನಿಮಾ, ಪೊಲೀಸ್, ಸಮಾಜ ಸೇವೆ, ಐಎಎಸ್‌ನಂಥ ಎಲ್ಲಾ ಕ್ಷೇತ್ರಗಳಲ್ಲೂ ಗ್ರಾಮೀಣ ಭಾಗದ ಮಕ್ಕಳೇ ಮುಂಚೂಣಿ ಸ್ಥಾನವನ್ನು ಅಲಂಕರಿಸಬೇಕೆಂದು ಕಿವಿಮಾತು ಹೇಳಿದರು. ಶಾಸಕ ಕೆ.ಎಂ. ಉದಯ ಮಾತನಾಡಿ, ಗ್ರಾಮೀಣ ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲಿಯೂ ಗುರುತಿಸಿಕೊಂಡ ಉದಾಹರಣೆಗಳಿದ್ದು ಅವರ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು. ವಿಧಾನ ಪರಿಷತ್ ಸದಸ್ಯ, ಮಾಜಿ ಸಭಾಪತಿ ಪುಟ್ಟಣ್ಣ ಮಾತನಾಡಿದರು. ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರಿಗೆ ಸ್ವಾತಂತ್ರ್ಯ ಹೋರಾಟಗಾರ ಡಿ.ಕರಡೀಗೌಡ ಸಾಹಿತ್ಯ ವಿಮರ್ಶಕ ರತ್ನ ಪ್ರಶಸ್ತಿ ಹಾಗೂ ಸಂಗೀತ ನಿರ್ದೇಶಕ, ಹಾಸ್ಯ ಕಲಾವಿದ ಸಾಧುಕೋಕಿಲ ರವರಿಗೆ ಡಿ. ಕರಡೀಗೌಡ ಕಲಾಕೌಸ್ತುಭ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ವೇಳೆ ಶಾಸಕ ಕೆ.ವಿವೇಕಾನಂದ, ರಾಜ್ಯ ವಕೀಲರ ಪರಿಷತ್‌ನ ಸದಸ್ಯ ಬಸವರಾಜು, ಮಾನಸ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ವಿ.ಕೆ.ಜಗದೀಶ್, ಕಾರ್ಯದರ್ಶಿ ನಾಗರಾಜು ಇತರರಿದ್ದರು.

ಪೊಲೀಸ್ ಠಾಣೆಯಲ್ಲೇ ಬೈಕ್ ಕಳವು

ಚಾಮರಾಜನಗರ: ಪೊಲೀಸ್ ಠಾಣೆಯ ಗೇಟ್ ಬೀಗ ಮುರಿದು ಜಪ್ತಿ ಮಾಡಿದ್ದ ಬೈಕನ್ನು ಕದ್ದಿರುವ ಘಟನೆ ಚಾಮರಾಜನಗರದ ಸಿಇಎನ್ ಠಾಣೆಯಲ್ಲಿ ನಡೆದಿದೆ. ಬೈಕ್ ಕದ್ದೊಯ್ದಿದ್ದ ಚಾಮರಾಜನಗರದ ಅರ್ಫಾಜ್ ಹಾಗೂ ಇಮ್ರಾನ್ ಎಂಬವರನ್ನು ಚಾಮರಾಜನಗರ ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ. ಭಾನುವಾರ ತಡರಾತ್ರಿ, ಅರ್ಫಾಜ್ ಮತ್ತು ಇಮ್ರಾನ್ ಕಾಂಪೌಂಡ್ ಹಾರಿ ಠಾಣಾ ಆವರಣಕ್ಕೆ ಬಂದು ಗೇಟಿನ ಬೀಗ ಮುರಿದಿದ್ದಾರೆ. ಬಳಿಕ, ಎನ್ ಡಿಪಿಎಸ್ ಕಾಯ್ದೆಯಡಿ ಜಪ್ತಿ ಮಾಡಿದ್ದ ಶೈನ್ ಬೈಕನ್ನು ಕದ್ದೊಯ್ದಿದ್ದಾರೆ. ಬೆಳಗ್ಗೆ ಬಂದ ಪೊಲೀಸರು ಗೇಟ್ ನ ಬೀಗ ಇಲ್ಲದಿರುವುದನ್ನು ಕಂಡು ಸಿಸಿಟಿವಿ ಪರಿಶೀಲಿಸಿದಾಗ ಕಳ್ಳರು ಬೈಕ್ ಕದ್ದೊಯ್ದಿರುವುದು ಗೊತ್ತಾಗಿದೆ. ಕೂಡಲೇ ಸಿಸಿಟಿವಿ ದೃಶ್ಯ ಆಧರಿಸಿ ಬೈಕ್ ಕದ್ದೊಯ್ದಿದ್ದ ಇಬ್ಬರನ್ನು ಬಂಧಿಸಿ ಬೈಕ್ ವಶಕ್ಕೆ ಪಡೆಯಲಾಗಿದೆ. ಪೊಲೀಸ್ ಠಾಣೆಯಲ್ಲೇ ಪೇದೆಯ ಬೈಕ್ ಕದ್ದಿರುವುದು ಮತ್ತಷ್ಟು ಆತಂಕ ಸೃಷ್ಟಿ ಮಾಡಿದೆ.

ಬೇಡಿಕೆಗಳ ಈಡೇರಿಕೆಗೆ ನೌಕರರ ಪ್ರತಿಭಟನೆ

ಮದ್ದೂರು: ಗ್ರಾಮಾಡಳಿತಾಧಿಕಾರಿಗಳು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಾಲೂಕು ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಎರಡನೇ ಹಂತದ ಅನಿರ್ದಿಷ್ಟಾವಧಿ ಧರಣಿ ಮುಂದುವರಿಸಿದ್ದಾರೆ. ಹಲವು ಬಾರಿ ಮನವಿ ಮಾಡಿದ್ದರೂ ಸಂಬಂಧಿಸಿದ ಸಚಿವರು ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಅಂತರ್ ಜಿಲ್ಲಾ ವರ್ಗಾವಣೆಯ ನಿಯಮ ಮರುಸ್ಥಾಪಿಸುವ ಬಗ್ಗೆ ಇತರ ಎಲ್ಲಾ ಇಲಾಖೆಗಳಲ್ಲಿರುವಂತೆ ಕಂದಾಯ ಇಲಾಖೆಯಲ್ಲಿ ವರ್ಗಾವಣೆಗಾಗಿ ವಿಶೇಷ ಮಾರ್ಗಸೂಚಿಯನ್ನು ರಚಿಸುವಂತೆ ಒತ್ತಾಯಿಸಿದರು.ತಾಲೂಕು ಸಂಘಟನೆಯ ಉಪಾಧ್ಯಕ್ಷ ಪ್ರಮೋದ, ಕಾರ್ಯದರ್ಶಿ ಎಸ್.ಬಿ.ಮರಳಸಿದ್ದೇಶ್ವರ, ಪದಾಧಿಕಾರಿಗಳಾದ ಮಂಜುನಾಥ್, ಎಸ್.ಸಿ.ನಾಗು, ರವಿ, ನಿಂಗೇಗೌಡ, ನಿಂಗಮ್ಮಣಿ, ಅನುಷಾ, ಪವಿತ್ರ, ವರಲಕ್ಷ್ಮಿ, ಆದರ್ಶ ನೇತೃತ್ವ ವಹಿಸಿದರು.

ಆಸ್ಪತ್ರೆ ಅಭಿವೃದ್ಧಿಗೆ ಯೋಜನೆ ರೂಪಿಸಿ

ಮಡಿಕೇರಿ : ಸೋಮವಾರಪೇಟೆ ತಾಲೂಕು ಸರಕಾರಿ ಆಸ್ಪತ್ರೆಯ ಅಭಿವೃದ್ಧಿಗೆ ಯೋಜನೆ ರೂಪಿಸುವಂತೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಅವರು ಸೂಚನೆ ನೀಡಿದ್ದಾರೆ. ಶಾಸಕರು ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದ ಅವರು ಆಸ್ಪತ್ರೆಯ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಸೇವೆ ಲಭಿಸಬೇಕು, ಆಸ್ಪತ್ರೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ವೈದ್ಯಾಧಿಕಾರಿಗಳಿಗೆ ತಿಳಿಸಿದರು. ಚಿಕಿತ್ಸೆಗಾಗಿ ಬಂದ ಸಾರ್ವಜನಿಕರ ಆರೋಗ್ಯ ವಿಚಾರಿಸಿದ ಶಾಸಕರು, ವೈದ್ಯ ಡಾ.ಜಮೀರ್ ಅಹಮ್ಮದ್ ಜತೆ ಪ್ರತಿ ವಿಭಾಗಗಳಿಗೆ ತೆರಳಿ ಮಾಹಿತಿ ಪಡೆದರು. ಒಳರೋಗಿಗಳ ಬಳಿ ಚಿಕಿತ್ಸೆಯ ಕುರಿತು ವಿಚಾರಿಸಿದರು. ಸೋಮವಾರಪೇಟೆ ಪ.ಪಂ ನಾಮ ನಿರ್ದೇಶಿತ ಸದಸ್ಯ ಡಿ.ಯು.ಕಿರಣ್ ಇದ್ದರು.

ವಿರಾಮ
ಪ್ರತಿ ಭಾನುವಾರ

{ಬಸನಗೌಡ ಪಾಟೀಲ ಯತ್ನಾಳ, } ಶಾಸಕ

ನಾವು ಬಂದ ಕೆಲಸ ಯಶಸ್ವಿಯಾಗಿದೆ. ಸಚಿವ ಸೋಮಣ್ಣ ಮೂಲಕ ವರಿಷ್ಠರು ನಮಗೆ ಸಂದೇಶ ರವಾನಿಸಿದ್ದಾರೆ. ಎಲ್ಲ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಹೊಂದಾಣಿಕೆ ರಾಜಕಾರಣ ಮಾಡುವ ಗಿರಾಕಿಗಳಲ್ಲ. ವರಿಷ್ಠರ ಭೇಟಿಗೆ ಸಮಯಾವಕಾಶ ಕೇಳಿಲ್ಲ.

ತಿರುಮಕೂಡಲು ನರಸೀಪುರದ ತ್ರಿವೇಣಿ ಸಂಗಮದಲ್ಲಿ ಕ್ಷಣಗಣನೆ

ಕುಂಭಮೇಳದ ಪುಣ್ಯಸ್ನಾನ

ಮೈಸೂರು: ಆಸ್ತಿಕ ಪರಂಪರೆಯ ಪ್ರಮುಖ ಧಾರ್ಮಿಕ ತಾಣವಾದ ತಿರುಮಕೂಡಲು ನರಸೀಪುರದ ಅಗಸ್ತ್ಯೇಶ್ವರನ ಸನ್ನಿಧಿಯಲ್ಲಿ 13ನೇ ಕುಂಭಮೇಳಕ್ಕೆ ಸೋಮವಾರ ವಿಧ್ಯುಕ್ತ ಚಾಲನೆ ದೊರೆತಿದ್ದು, ಪುಣ್ಯಸ್ನಾನಕ್ಕೆ ಕ್ಷಣಗಣನೆ ಆರಂಭವಾಗಿದೆ.

ಫೆ.12ರ ಬುಧವಾರ ಮೇಷ ಲಗ್ನದಲ್ಲಿ ಪ್ರಾತಃಕಾಲ 11ರಿಂದ 11.30ರವರೆಗೆ ಹಾಗೂ ವೃಷಭ ಲಗ್ನದಲ್ಲಿ ಮಧ್ಯಾಹ್ನ 1.30 ರಿಂದ 2 ಗಂಟೆಯೊಳಗಿನ ಗುರು-ಪುಷ್ಯಯೋಗದ ಪುಣ್ಯಸ್ನಾನಕ್ಕೆ ಶುಭ ಮುಹೂರ್ತ ನಿಗದಿ ಮಾಡಲಾಗಿದೆ.

ಫೆಬ್ರವರಿ 10ರಿಂದ 3 ದಿನಗಳ ಕಾಲ 13ನೇ ಕುಂಭಮೇಳ ಜಿಲ್ಲೆಯ ಕಾವೇರಿ, ಕಪಿಲ ಹಾಗೂ ಸ್ಫಟಿಕ ಸರೋವರಗಳು ಕೂಡುವ ತಿ. ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆಯಲಿದೆ. ಆರು ವರ್ಷಗಳ ನಂತರ ನಡೆಯುತ್ತಿರುವ 13ನೇ ಕುಂಭಮೇಳಕ್ಕೆ ಸೋಮವಾರ ದಿಂದಲೇ ಭಕ್ತರ ದಂಡು ಹರಿದುಬರತೊಡಗಿದೆ. ಈ ಹಿನ್ನೆಲೆಯಲ್ಲಿ ಇಡೀ ನಗರವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿದೆ. ಬೀದಿ ಬೀದಿಗಳು ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿದೆ. ಕುಂಭಮೇಳದ ಧಾರ್ಮಿಕ ಕಾರ್ಯಕ್ರಮಕ್ಕಾಗಿ ವೇದಿಕೆ ನಿರ್ಮಾಣ, ಸ್ವಚ್ಛತಾ, ಲೈಟಿಂಗ್ಸ್ ಅಳವಡಿಕೆ ಕಾರ್ಯ ಮಾಡಲಾಗಿದೆ. ಅಹಿತಕರ ಘಟನೆಗಳು ಜರುಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ. ನದಿ ಪಾತ್ರದ ಹಲವೆಡೆ ಮುಳುಗುತಜ್ಞರನ್ನು ನಿಯೋಜನೆ ಮಾಡಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ನೂರಾರು ಪೊಲೀಸರನ್ನು ನಿಯೋಜಿಸಲಾಗಿದೆ. ಸರಕಾರ ಇದಕ್ಕಾಗಿ 6 ಕೋಟಿ ರೂ ಅನುದಾನ ಬಿಡುಗಡೆ ಮಾಡಿದೆ.

ಧಾರ್ಮಿಕ ಸಭೆ : ಫೆ.11ರಂದು ಬೆಳಗ್ಗೆ 11 ಗಂಟೆಗೆ ಧಾರ್ಮಿಕ ಸಭೆಯನ್ನು ಏರ್ಪಡಿಸಲಾಗಿದ್ದು, 1 ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ.

ಪೂಜಾ ವಿಧಿವಿಧಾನ: ಫೆ.11ರ ಮಂಗಳವಾರ ಬೆಳಗ್ಗೆ 6ಕ್ಕೆ ಮಾಘಶುದ್ಧ ಚತುರ್ದಶೀ ಪುಷ್ಯ ನಕ್ಷತ್ರ ಪುಣ್ಯಾಹ, ನವಗ್ರಹಪೂಜೆ, ಜಪ, ನವಗ್ರಹ ಹೋಮ, ಪೂರ್ಣಾಹುತಿ ಸಂಜೆ 4ಕ್ಕೆ ಸುದರ್ಶನ ಪೂಜೆ, ಹೋಮ ಹಾಗೂ ಪೂರ್ಣಾಹುತಿ ನಡೆಯಲಿದೆ.

ತಿ.ನರಸೀಪುರದ ಅಗಸ್ತ್ಯೇಶ್ವರನ ಸನ್ನಿಧಿಯಲ್ಲಿ ಕುಂಭಮೇಳಕ್ಕೆ ಸೋಮವಾರ ವಿಧ್ಯುಕ್ತ ಚಾಲನೆ ದೊರೆಯಿತು.

> **ದಕ್ಷಿಣ ಭಾರತದ 13ನೇ ಕುಂಭಮೇಳ ಆರಂಭವಾಗಿದೆ. 4 ಎಎಸ್ಪಿ, 9 ಡಿವೈಎಸ್ಪಿ, 27 ಸರ್ಕಲ್ ಇನ್ಸ್‌ಪೆಕ್ಟರ್, 85 ಸಬ್ ಇನ್ಸ್‌ಪೆಕ್ಟರ್ ಸೇರಿ ಒಟ್ಟು 1200 ಪೊಲೀಸರನ್ನು ಬಂದೋಬಸ್ತ್ ನೇಮಕ ಮಾಡಲಾಗಿದೆ. ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಭಕ್ತರಿಗೆ ಯಾವುದೇ ತೊಂದರೆ ಆಗದ ರೀತಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.**
>
> -ವಿಷ್ಣುವರ್ಧನ್, ಪೊಲೀಸ್ ವರಿಷ್ಠಾಧಿಕಾರಿ, ಮೈಸೂರು.

ಸಾರ್ವಜನಿಕರಿಗೆ ಸೂಚನೆ: ದಕ್ಷಿಣ ಭಾರತದ ಐತಿಹಾಸಿಕ 13ನೇ ಕುಂಭಮೇಳಕ್ಕೆ ಮೊದಲ ದಿನವೇ ಭಕ್ತ ಸಾಗರ ಹರಿದುಬಂದಿದ್ದು ಯಾವುದೇ ರೀತಿ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಭಕ್ತರು ಪುಣ್ಯಸ್ನಾನದ ವೇಳೆ ಎಚ್ಚರಿಕೆ ವಹಿಸುವಂತೆ ಧ್ವನಿವರ್ಧಕದ ಮೂಲಕ ಸೂಚನೆ ನೀಡಲಾಗುತ್ತಿತ್ತು.

ತ್ರಿವೇಣಿ ಸಂಗಮದಲ್ಲಿ ಮಹಿಳೆಯರು, ಮಕ್ಕಳು ಕುಟುಂಬ ಸಮೇತ ಸಂಗಮಕ್ಕೆ ಭೇಟಿ ನೀಡಿ ಪುಣ್ಯಸ್ನಾನ ಮಾಡಿ ಪೂಜೆ ಸಲ್ಲಿಸಿದರು.

ಕುಂಭಮೇಳದ ವೇಳೆ ಭಕ್ತರ ಸಂಖ್ಯೆ ಹೆಚ್ಚಾಗಲಿದ್ದು ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಉಪ ವಿಭಾಗಾಧಿಕಾರಿ ರಕ್ಷಿತ್ ಸೇರಿ ಹಲವರು ಉಪಸ್ಥಿತರಿದ್ದರು.

ಇಂಡಿ ವ್ಯತ್ಯಾಸದ ಲಾಭ ಪಡೆದು ಬಿಜೆಪಿ ಗೆದ್ದಿದೆ

ನಾಗಮಂಗಲ: ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷ ಸೋತಿರುವುದು ಮತ್ತು ಭದ್ರ ತಳಹದಿ ಇಲ್ಲದಿರುವುದನ್ನ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಬಿಜೆಪಿ ಅವರು ನಮ್ಮ ಸಾಮರ್ಥ್ಯದಿಂದ ಬೆಳೆದಿದ್ದೇವೆ ಎಂದು ಹೇಳುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಕೆಲಗೆರೆ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,

ದೆಹಲಿ ಮತ್ತು ಹರಿಯಾಣ ಚುನಾವಣೆಗಳಲ್ಲಿ ಇಂಡಿಯಾ ಒಕ್ಕೂಟ ಜೊತೆಯಾಗಿ ಚುನಾವಣೆ ಎದುರಿಸಿದ್ದರೆ ಹರಿಯಾಣದಲ್ಲಿ ಕಾಂಗ್ರೆಸ್ ಮತ್ತು ದೆಹಲಿಯಲ್ಲಿ ಎಎಪಿಗೆ ಗೆಲುವು ಸಿಗುತ್ತಿತ್ತು. ಆದರೆ ಇಂಡಿಯಾ ಒಕ್ಕೂಟದಲ್ಲಿ ಆದ ವ್ಯತ್ಯಾಸದಿಂದ ಬಿಜೆಪಿಗೆ ಲಾಭ. ದೆಹಲಿಯಲ್ಲಿ ಬಿಜೆಪಿ ಮೋದಿ ಅವರ ವರ್ಚಸ್ಸಿನಿಂದಲೋ, ಸ್ಥಳೀಯ ನಾಯಕರ ವರ್ಚಸ್ಸಿನಿಂದಲೋ ಅಧಿಕಾರಕ್ಕೆ ಬಂದಿಲ್ಲ. ಇಂಡಿಯಾ ಒಕ್ಕೂಟದಲ್ಲಿ ಉಂಟಾದ ವ್ಯತ್ಯಾಸದಿಂದ ಲಾಭ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಜತೆಗೆ ಅಧಿಕಾರ ಹೇಗಾದರೂ ಸಿಕ್ಕದ ಮೇಲೆ ಅವರು ಮಾತನಾಡುವುದು ಸಹಜ. ಆದರೆ ವಾಸ್ತವ ಅವರು ಹೇಳುವಂತೆ ಇಲ್ಲ ಎಂದು ಹೇಳಿದರು.

ನಂತರ ರಸ್ತೆ ಅಭಿವೃದ್ಧಿಯ ವಿಚಾರವಾಗಿ ಎಂಜಿನಿಯರ್‌ಗಳು ಮತ್ತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮಾತನಾಡಿ, ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವ ಜೊತೆಗೆ ಜನರಿಗೆ ಅನುಕೂಲವಾಗುವಂತೆ ಕಾಮಗಾರಿ ನಡೆಸಿ ಎಂದು ಸೂಚನೆ ನೀಡಿದರು. ಅಲ್ಲದೇ ಕೆಲ ಗ್ರಾಮಸ್ಥರು ಕುರಿತು ಮನವಿ ಪತ್ರ ಸಚಿವರಿಗೆ ಸಲ್ಲಿಸಿದರು.

ಸ್ಥಳದಲ್ಲಿ ಕಾಂಗ್ರೆಸ್ ಮುಖಂಡರಾದ ಸುನೀಲ್ ಲಕ್ಷ್ಮೀಕಾಂತ್, ಪ್ರಸನ್ನ, ದೇವರಾಜು, ಗ್ರಾಮಸ್ಥರು ಇದ್ದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

ಆರೋಗ್ಯಕ್ಕಾಗಿ ವ್ಯಾಯಾಮ

ಡಾ. ಎಂ ಬಸವರಾಜೇಂದ್ರ, ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿದರು.

ಚಾಮರಾಜನಗರ: ಪ್ರತಿನಿತ್ಯ ವ್ಯಾಯಾಮ ಹಾಗೂ ಕ್ರೀಡೆಗಳಲ್ಲಿ ತೊಡಗಿಸಿಕೊಂಡು ಆರೋಗ್ಯ ಸಮತೋಲನ ಕಾಯ್ದುಕೊಳ್ಳಬೇಕೆಂದು ಶ್ರೀ ಬಸವರಾಜೇಂದ್ರ ಮೆಡಿಕಲ್ ಟ್ರಸ್ಟ್‌ನ ಡಾ. ಎಂ ಬಸವರಾಜೇಂದ್ರ ಸಲಹೆ ನೀಡಿದರು.

ತಿಮ್ಮರಾಜಿಪುರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಬಿ ಆರ್ ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವನ್ಯಜೀವಿ ವಲಯ, ಕೊಳ್ಳೇಗಾಲ, ಬಸವರಾಜೇಂದ್ರ ಮೆಡಿಕಲ್ ಟ್ರಸ್ಟ್ ಸಹಯೋಗದಲ್ಲಿ ವಿದ್ಯಾರ್ಥಿಗಳು, ಇಲಾಖೆಯ ಅಧಿಕಾರಿ, ಸಿಬ್ಬಂದಿಗೆ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಜನರ ಜೀವನಶೈಲಿಯು ಬದಲಾಗಿದ್ದು, ಹೆಚ್ಚು ಮೊಬೈಲ್ ಟಿವಿಗಳನ್ನು ನೋಡುವುದರಲ್ಲಿ ಸಮಯ ಕಳೆಯುತ್ತಿದ್ದು ದೈಹಿಕ ಚಟುವಟಿಕೆಗಳಿಗೆ ಆದ್ಯತೆ ನೀಡದ ಕಾರಣ ಸಾಕಷ್ಟು ಜನರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲಿಯೇ ರೋಗಗಳ ಪತ್ತೆಯಾದರೆ ಚಿಕಿತ್ಸೆ ಪಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಶಿಬಿರದಲ್ಲಿ 371 ಜನರಿಗೆ, ರಕ್ತದೊತ್ತಡ, ಮಧುಮೇಹ ತಪಾಸಣೆಗಳು ನಡೆದವು. ಉಚಿತವಾಗಿ ಔಷಧ ವಿತರಣೆ ಮಾಡಲಾಯಿತು. ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕೊಳ್ಳೇಗಾಲ ಘಟಕದ ಒಟ್ಟು 53 ಜನರಿಗೆ ಉಚಿತವಾಗಿ ನೋಂದಣಿ ಮಾಡಿಸಲಾಯಿತು.

ಪ್ರಸೂತಿ ತಜ್ಞರಾದ ಡಾ. ಶ್ವೇತಾ ಶಶಿಧರ್, ವಲಯ ಅರಣ್ಯ ಅಧಿಕಾರಿ ವಾಸು ಬಿ ಎಸ್, ಗ್ರಾಪಂ ಉಪಾಧ್ಯಕ್ಷೆ ಸಹನಪ್ರಿಯ, ಚೆನ್ನಮ್ಮ ವಸತಿ ಶಾಲೆ ಪ್ರಾಂಶುಪಾಲರಾದ ಶೋಯಬ್ ಪಾಷಾ, ಮೊರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲ ಗಿರೀಶ್, ನೋಡಲ್ ಅಧಿಕಾರಿ ನಾರಾಯಣ್ ಇದ್ದರು.

ಅಧಿಕಾರ ಸಿಕ್ಕೊಡನೆ ಸ್ವಾರ್ಥಿಗಳಾಗಬಾರದು:ಸಂಸದ

ಟಿ.ಬೆಟ್ಟಹಳ್ಳಿಯಲ್ಲಿ ಸ್ವಾಭಿಮಾನ ಭವನ, ದಾಸೋಹ ಭವನಕ್ಕೆ ಭೂಮಿ ಪೂಜೆ

ತಿ.ನರಸೀಪುರ: ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ದಲಿತ ಸಮುದಾಯಗಳ ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಅಧಿಕಾರ ಸಿಗುತ್ತಿದ್ದಂತೆ ಸ್ವಾರ್ಥಿಗಳಾಗುತ್ತಾರೆ.ಇದರಿಂದ ಸಮುದಾಯದ ಮಠ ಮಾನ್ಯಗಳು ಅಭಿವೃದ್ಧಿ ಕಾಣುತ್ತಿಲ್ಲವೆಂದು ಸಂಸದ ಸುನೀಲ್ ಬೋಸ್ ವಿಷಾದ ವ್ಯಕ್ತಪಡಿಸಿದರು.

ತಾಲೂಕಿನ ಟಿ.ಬೆಟ್ಟಹಳ್ಳಿ ಗ್ರಾಮದ ಶ್ರೀ ಉರಿಲಿಂಗ ಪೆದ್ದಿ ಮಹಾ ಸಂಸ್ಥಾನ ಶಾಖೆ ಹಾಗೂ ಶ್ರೀಗುರು ಮುದ್ದು ಮಾದಪ್ಪಸ್ವಾಮಿ ಮಠದ ಶ್ರೀ ಶಿವಯೋಗಿಸ್ವಾಮಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಂಸ್ಥೆಯ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆಯ 1 ಕೋಟಿ ಅನುದಾನದಡಿ ನಿರ್ಮಾಣಗೊಳ್ಳುತ್ತಿರುವ ಸ್ವಾಭಿಮಾನ ಭವನ, ಕೌಶಲ್ಯ ತರಬೇತಿ ಕೇಂದ್ರ ಹಾಗೂ ದಾಸೋಹ ಭವನಕ್ಕೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದರು.

ದಲಿತ ಸಮುದಾಯದ ಶಾಸಕರೇ ಆಗಲಿ, ಅಧಿಕಾರಿಗಳೇ ಇರಲಿ. ಅಧಿಕಾರ ಮತ್ತು ಹಣ ಸಿಗುತ್ತಿದ್ದಂತೆ ಕುಟುಂಬದ ಚೌಕಟ್ಟಿನೊಳಗೆ ಸಿಲುಕಿ ಬಿಡುವುದರಿಂದ ದಲಿತರು ಕೂಡ ಪ್ರಗತಿಯಾಗುತ್ತಿಲ್ಲ ಎಂದರು.

ಸಾಂವಿಧಾನಿಕ ಹಕ್ಕುಗಳ ಮೂಲಕ ಉತ್ತಮ ಬದುಕು ರೂಪಿಸಿಕೊಳ್ಳುವ ದಲಿತರು ಸಮುದಾಯದತ್ತ ತಿರುಗಿ ನೋಡಬೇಕು. ಸಾಮಾಜಿಕ ನ್ಯಾಯದ ರಥವನ್ನು ಎಳೆದು ತಂದಿದ್ದೇನೆ. ಸಾಧ್ಯವಾದರೆ ಮುಂದಕ್ಕೆ ಕೊಂಡೊಯ್ಯಿರಿ, ಇಲ್ಲದಿದ್ದರೆ ಹಿಂದಕ್ಕೆ ನೂಕಿ ಬಿಡಬೇಡಿ ಎಂದು ಹೇಳಿದ್ದರೂ ಎರಡನ್ನೂ ಮರೆತು ಬಿಟ್ಟಿದ್ದೇವೆ. ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಇಲ್ಲಿನ ಮಠದ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆಂದೇ ಕಟ್ಟಡಕ್ಕೆ ಅನುದಾನ ಮಂಜೂರು ಮಾಡಿದ್ದಾರೆಂದು ಸಂಸದರು ತಿಳಿಸಿದರು. ಶ್ರೀಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಟಿ.ಬೆಟ್ಟಹಳ್ಳಿಯ ಉರಿಲಿಂಗ ಪೆದ್ದೀಶ್ವರ ಶಾಖಾ ಮಠ ಆರಂಭದಿಂದಲೂ ಶಿಕ್ಷಣ ಕ್ರಾಂತಿಗೆ ಕೈ ಜೋಡಿಸಿ ಕಾರ್ಯನಿರ್ವಹಿಸುತ್ತಿದೆ. ಮಠದಲ್ಲಿ ಶಿಕ್ಷಣ ಪಡೆದಂತಹವರು ಐಪಿಎಸ್ ಅಧಿಕಾರಿ, ಇಂಜಿನಿಯರ್ ಹಾಗೂ ಶಾಸಕರು ಆಗಿದ್ದಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆಯನ್ನು ಸಲ್ಲಿಸುತ್ತಿರುವ ಮಠ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಂಡಿರಲಿಲ್ಲ, ಆದರೆ ಸಚಿವ ಮಹದೇವಪ್ಪ ಅವರು ತಮ್ಮದೇ ಇಲಾಖೆಯಿಂದ ಹಣ ಮಂಜೂರು ಮಾಡಿದ್ದಾರೆ ಎಂದು ತಿಳಿಸಿದರು.

ಹರಳಯ್ಯ ಸ್ವಾಮೀಜಿ ಮಾತನಾಡಿದರು. ಸಿದ್ದರಾಮ ಶಿವಯೋಗಿಸ್ವಾಮಿಗಳು, ಮಹದೇವಸ್ವಾಮಿಗಳು, ಗ್ರಾಮ ಪಂಚಾಯತಿ ಅಧ್ಯಕ್ಷೆ ಪುಟ್ಟಮ್ಮ ಶಂಭಯ್ಯ, ಉಪಾಧ್ಯಕ್ಷ ದಕ್ಷಿಣಾಮೂರ್ತಿ, ಅಭಿವೃದ್ಧಿ ಅಧಿಕಾರಿ ಕೆ.ಪಿ.ಕೆಂಪೇಗೌಡ, ತಾ.ಪಂ ಮಾಜಿ ಸದಸ್ಯರಾದ ಕುಕ್ಕೂರು ಗಣೇಶ್, ಮಲ್ಲಾಜಮ್ಮ, ಮಾಜಿ ಉಪಾಧ್ಯಕ್ಷ ಪ್ರಸನ್ನ, ತಲಕಾಡು ದೇವಾಲಯ ಸಮಿತಿ ಅಧ್ಯಕ್ಷ ಎಂ.ನಾಗರಾಜು, ಇಒ ಎಸ್.ಎಂ. ವೆಂಕಟೇಶ್ ಪ್ರಸಾದ್, ಸಮಿತಿ ಸದಸ್ಯರಾದ ಮಾದೇಶ, ಕೋಕಿಲ, ನಾಗಮ್ಮ ಹಾಗೂ ಇತರರು ಇದ್ದರು.

ಟಿ.ಬೆಟ್ಟಹಳ್ಳಿ ಗ್ರಾಮದಲ್ಲಿ ಸಂಸದ ಸುನೀಲ್ ಬೋಸ್ ಸ್ವಾಭಿಮಾನ ಭವನ, ಕೌಶಲ್ಯ ತರಬೇತಿ ಕೇಂದ್ರ ಹಾಗೂ ದಾಸೋಹ ಭವನಕ್ಕೆ ಭೂಮಿ ಪೂಜೆ ಸಲ್ಲಿಸಿದರು. ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶ್ರೀಹರಳಯ್ಯ ಸ್ವಾಮೀಜಿ, ಎಂ.ನಾಗರಾಜು, ಪುಟ್ಟಮ್ಮ ಶಂಭುಲಿಂಗ, ದಕ್ಷಿಣಾಮೂರ್ತಿ, ಕೋಕಿಲ ಇತರರು ಇದ್ದರು.

ಶುಂಠಿ ಬೆಲೆ ಕುಸಿತ, ತಂಬಾಕು ಬೆಳೆಯತ್ತ ರೈತ

ಶರತ್ ಕುಮಾರ್, ಪಿರಿಯಾಪಟ್ಟಣ

ವೈಜ್ಞಾನಿಕ ಪದ್ಧತಿ ಅನುಸರಿಸುವ ಮೂಲಕ ರೈತರು ಗುಣಮಟ್ಟದ ತಂಬಾಕು ಸಸಿ ಮಡಿಗಳ ಸಮರ್ಪಕ ಮಾಹಿತಿಗಾಗಿ ಕೇಂದ್ರೀಯ ತಂಬಾಕು ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ಪಡೆಯಬಹುದಾಗಿದೆ.

ಗುಣಮಟ್ಟದ ತಂಬಾಕು ಉತ್ಪಾದನೆಗೆ ಹೆಸರುವಾಸಿ ಕರ್ನಾಟಕ. ಈ ಬಾರಿ ಅವಧಿಗೂ ಮುನ್ನವೇ ತಂಬಾಕು ನರ್ಸರಿ ಕಾರ್ಯ ಆರಂಭಗೊಂಡಿದೆ. ಪ್ರತಿ ವರ್ಷ ಫೆಬ್ರವರಿ ತಿಂಗಳ ಕೊನೆಯಲ್ಲಿ ನರ್ಸರಿ ಕೆಲಸ ಪ್ರಾರಂಭವಾಗುತ್ತಿತ್ತು. ಆದರೆ ಈ ಬಾರಿ ಶುಂಠಿ ಬೆಳೆ ಕೈಕೊಟ್ಟ ಪರಿಣಾಮವೋ ಅಥವಾ ಮಾರುಕಟ್ಟೆಯಲ್ಲಿ ತಂಬಾಕು ದರ 300 ಗಡಿ ದಾಟಿದ ತರುವಾಯ ತಂಬಾಕು ರೈತರ ಮುಖದಲ್ಲಿ ಹರ್ಷ ಕಂಡಿದೆ. ಈಗಿನ ದರದಿಂದ ಆಕರ್ಷಿತರಾಗಿ ರೈತರು ತಂಬಾಕು ಬೆಳೆಯ ವಿಸ್ತೀರ್ಣದಲ್ಲಿ ಹೆಚ್ಚಳ ಮಾಡುವ ನಿರೀಕ್ಷೆಯಿದೆ. ಈಗಾಗಲೇ ತಂಬಾಕು ನರ್ಸರಿ ಕಾರ್ಯಕ್ಕೆ ರೈತರು ಮುಂದಾಗಿರುವುದು ಗೋಚರವಾಗುತ್ತಿದೆ.

ಬೆಡ್ ನಿರ್ವಹಣೆ : ತಂಬಾಕು ಕೃಷಿಗೆ ಸಸಿಗಳ ಪಾಲನೆ ಬಹು ಮುಖ್ಯವಾದ ಕೆಲಸ. ಆಧುನಿಕ ಕೃಷಿ ಪದ್ಧತಿ ಅನುಸರಿಸಿ ಆರಂಭಿಕ ಹಂತದಿಂದಲೇ ಆರೋಗ್ಯಕರವಾದ ಮತ್ತು ರೋಗ ಮುಕ್ತವಾದ ಸಸಿಗಳ ಬೆಳವಣಿಗೆ ಮಾಡುವುದು ರೈತನ ಬಹುದೊಡ್ಡ ಕಾರ್ಯ. ಆದ್ದರಿಂದ ಪ್ರತಿಯೊಬ್ಬ ರೈತನು ಸಸಿ ಮಡಿಗೆ (ನರ್ಸರಿಗೆ) ಹೆಚ್ಚು ಒತ್ತು ನೀಡಬೇಕು. ರೈತರು ತಮ್ಮ ಜಮೀನಿನಲ್ಲಿ ನರ್ಸರಿ ಬೆಡ್ ನಿರ್ಮಿಸುವಾಗ 15 ಸೆಂಟಿಮೀಟರ್ ಎತ್ತರ , ಒಂದು ಮೀಟರ್ ಅಗಲ,15 ಮೀಟರ್ ಉದ್ದವಿರಬೇಕು ಮತ್ತು ಬೆಡ್ ಗಳ ನಡುವೆ 30 ಸೆಂಟಿಮೀಟರ್ ಅಂತರದಲ್ಲಿ ನೀರು ಅರಿಯಲು ಕಾಲುವೆ ದಾರಿ ನಿರ್ಮಿಸಬೇಕು.

ಈ ವರ್ಷದ ಬೇಸಿಗೆಯಲ್ಲಿ ಉಷ್ಣಾಂಶ ಹೆಚ್ಚಳವಾಗುವ ಸಂಭವವಿರುವುದರಿಂದ ಸಸಿಗಳ ಬೆಳವಣಿಗೆ ಅತ್ಯವಶ್ಯಕ. ಆದ್ದರಿಂದ 15 ದಿನಗಳ ನಂತರ ನರ್ಸರಿ ಸಸಿಗಳಿಗೆ ಕಲ್ವಾಕ್ 30 ಗ್ರಾಂ ಅನ್ನು ಒಂದು ಹೂ ಕ್ಯಾನಿಗೆ ಹಾಕಿ ಸಿಂಪಡಿಸುವುದು ಉತ್ತಮ. ಕಳೆದ ವರ್ಷ ಕೊಳೆ ರೋಗ ಹೆಚ್ಚು ಕಂಡು ಬಂದಿತ್ತು. ಈ ಬಾರಿ ಸಿಟಿಆರ್ ಐ ಸಂಸ್ಥೆಯು ಎಫ್ ಸಿ ಎಚ್ 222 ಮತ್ತು 248 ತಳಿಯನ್ನು ಪರಿಚಯಿಸಿದೆ ಇದು ರೋಗ ಮುಕ್ತ ಮತ್ತು ಗ್ರೇಡ್ ಒನ್ ಎಲೆಗಳನ್ನು ಅತಿ ಹೆಚ್ಚು ನೀಡುವ ತಳಿಯಾಗಿದೆ.

ಕೋಕಾಪಿಟ್ ಬಳಕೆ : ಸಸಿ ಬೆಳೆದು 30 ದಿನಗಳ ನಂತರ ಟ್ರೇಯಲ್ಲಿ ಸಸಿಗಳನ್ನು ಬೆಳೆಸುವುದು ಸೂಕ್ತ.ಇದಕ್ಕಾಗಿ ಶೇಕಡಾ 90 ರಷ್ಟು ರೈತರು ಟ್ರೇ ಸಸಿಗಳತ್ತಾ ಹೆಚ್ಚು ಗಮನಹರಿಸುತ್ತಾರೆ. ಕಡಿಮೆ ತೇವಾಂಶದಲ್ಲಿ ಸಹ ಟ್ರೇ ಸಸಿಗಳು ಸಾಯುವುದಿಲ್ಲ.ಇದರಿಂದ ರೈತರಿಗೆ ಸಮಯ ಮತ್ತು ಹಣ ಉಳಿತಾಯವಾಗುತ್ತದೆ. ಕೋಕಾಪಿಟ್ ಗೊಬ್ಬರ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಪ್ರತಿ ಕೋಕಾಪಿಟ್ ಜೊತೆ ಜೈವಿಕ ಪೋಷಕಾಂಶಗಳಾದ ಪೆಸಿಲೋಮೈ ಸಿಸ್ ಲೀಲಾಸಿಯಂ , ಟ್ರೀಕೊಡರ್ಮ ಒಂದು ಕೆಜಿ ಮತ್ತು ಕಲ್ವಾಕ್ 50 ಗ್ರಾಂ ಪೋಷಕಾಂಶವನ್ನು ಮಿಶ್ರಣ ಮಾಡಿ ಬಳಸಿದರೆ ಬಹಳ ಒಳ್ಳೆಯದು.

15 ದಿನಗಳ ನಂತರ ಕಪ್ಪು ಚುಕ್ಕಿ ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಸಸಿ ಮಡಿಯಲ್ಲಿ ಕಾಂಡ ಕೊರಕ ಅಥವಾ ಎಲೆ ತಿನ್ನುವ ಹುಳದ ಸಮಸ್ಯೆಯಿದ್ದಲ್ಲಿ ಒಂದು ಪ್ಯಾಕೆಟ್ (5 ಗ್ರಾಂ) ಲೆಗಸ್ಸಿ ಜೊತೆಗೆ 5 ಗ್ರಾಂ ಲಾರ್ವ ಸಿಂಪಡಿಸಬೇಕು ಎನುತ್ತಾರೆ ತಜ್ಞರು.

> **ಬೀಜ ಹಾಕುವ ಹಿಂದಿನ ದಿನ 15 - 20 ಗ್ರಾಂ ರೆಡೋಮಿಲ್ ಗೋಲ್ಡ್ 10 ಲೀಟರ್ ನೀರಿಗೆ ಹಾಕಿ ಸಿಂಪಡಿಸುವುದರಿಂದ ಸೊರಗು ರೋಗವನ್ನು ತಡೆಗಟ್ಟಬಹುದು. ಇದರ ಜೊತೆಗೆ 70 ರಿಂದ 80 ಗ್ರಾಂ ಪುರಾಡಾನ್ ಕಾಳು ಹಾಕಬಹುದು.ರೈತರು ಸಾಧ್ಯವಾದಷ್ಟು ಮರಳಿನಲ್ಲಿ ಬೀಜವನ್ನು ಮಿಶ್ರಣ ಮಾಡಿ ಹಾಕಬೇಕು. ತಳಿ ಬದಲಾವಣೆಯಿಂದಲೂ ರೋಗ ನಿಯಂತ್ರಣ ಮಾಡಬಹುದಾಗಿದೆ**
>
> -ಡಾ.ಎಸ್. ರಾಮಕೃಷ್ಣನ್ , ಮುಖ್ಯಸ್ಥರು, ಸಿಟಿ ಆರ್ ಐ ಹುಣಸೂರು,

ಶಿಕ್ಷಣ ಕ್ರಾಂತಿಯಿಂದ ಸಾಧನೆ

ಆದರ್ಶ ಶಾಲಾ ವಾರ್ಷಿಕೋತ್ಸವದಲ್ಲಿ ಹೆಚ್ಚು ಅಂಕ ಗಳಿಸಿದವರನ್ನು ಸನ್ಮಾನಿಸಲಾಯಿತು.

ಮಂಡ್ಯ: ದೇಶದಲ್ಲಿ ಆಹಾರ ಕೊರತೆ ಇದ್ದಾಗ ಹಸಿರು ಕ್ರಾಂತಿ ನಡೆಯಿತು. ಕೃಷಿಯಿಂದಲೇ ದೇಶದ ಜನತೆಗೆ ಅನ್ನ ನೀಡಲು ಸಾಧ್ಯವಾಯಿತು. ಅದರಂತೆ ಪ್ರಸ್ತುತ ಶಿಕ್ಷಣ ಕ್ರಾಂತಿಯಿಂದ ವಿದ್ಯಾರ್ಥಿಗಳು ಸಾಧನೆ ಮಾಡಲು ಮುಂದಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹೇಳಿದರು.

ನಗರದ ಆಧ್ಯಯನ ಶಿಕ್ಷಣ ಟ್ರಸ್ಟ್‌ನ ಆದರ್ಶ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ, ಕಲಿಕಾ ವಾತಾವರಣ ಸೃಷ್ಟಿಸಿದರೆ ಮಕ್ಕಳ ಸಾಧನೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ದೇಶದಲ್ಲಿ ಹಸಿರು ಕ್ರಾಂತಿ ನಂತರ ಹೈನುಗಾರಿಕೆಯಲ್ಲಿ ಕ್ಷೀರ ಕ್ರಾಂತಿ ನಡೆಯಿತು. ಇದರ ಪರಿಣಾಮ ಹೈನುಗಾರಿಕೆಯಲ್ಲಿ ಮಂಡ್ಯ ಜಿಲ್ಲೆ ಕೂಡ ಮುಂದಿದೆ. ಪ್ರಸ್ತುತ ಎಲ್ಲ ಕ್ಷೇತ್ರದಲ್ಲೂ ಸ್ಪರ್ಧೆ ಇದೆ. ಅದರಲ್ಲೂ ವಿದ್ಯಾರ್ಥಿಗಳ ನಡುವೆ ಸ್ಪರ್ಧೆ ಇದ್ದರೆ ಹೆಚ್ಚು ಸಾಧನೆಗೆ ಸಹಕಾರಿಯಾಗಲಿದೆ. ಇದು ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಆತ್ಮವಿಶ್ವಾಸ ಮೂಡಲು ಸಾಧ್ಯವಾಗಲಿದೆ ಎಂದರು. ಎಲ್ಲ ಕ್ಷೇತ್ರಗಳಲ್ಲೂ ಅವಕಾಶಗಳಿದ್ದು, ಅದನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಮೊಬೈಲ್, ಟಿವಿಗಳಿಂದ ವಿದ್ಯಾರ್ಥಿಗಳ ಕಲಿಕಾ ಅವಧಿ ಕಡಿಮೆಯಾಗುತ್ತಿದೆ. ಜಾಲತಾಣ ಹೆಚ್ಚು ವೀಕ್ಷಣೆ ಮಾಡಿದರೆ ಓದಿನ ಸಮಯ ವ್ಯರ್ಥವಾಗುತ್ತಿದೆ. ಇದರಲ್ಲಿ ಪೋಷಕರ ಜವಾಬ್ದಾರಿಯೂ ಇದೆ. ಮೊದಲು ಮನೆಗಳಲ್ಲಿ ಪೋಷಕರು ಮೊಬೈಲ್ ನೋಡುವುದನ್ನು ಬಿಡಬೇಕು. ಪೋಷಕರು ಪುಸ್ತಕ ಹಿಡಿದರೆ, ಮಕ್ಕಳೂ ಸಹ ಪುಸ್ತಕ ಹಿಡಿಯಲಿದ್ದಾರೆ ಎಂದು ಹೇಳಿದರು.

16ಕ್ಕೆ ಕಾಫಿ ಬೆಳೆಗಾರರ ಸಂಘದ ಚುನಾವಣೆ

ಮಡಿಕೇರಿ: ಜಿಲ್ಲೆಯ ಪ್ರಮುಖ ಸಹಕಾರಿ ಸಂಸ್ಥೆಯಾಗಿರುವ ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆ ಫೆ.16 ರಂದು ನಡೆಯಲಿದ್ದು, ಸಂಘವನ್ನು ಸಹಕಾರಿ ತತ್ವದಡಿ ಸದೃಢವಾಗಿ ಬೆಳೆಸಲು ಅರ್ಹತೆಯಿರುವವರನ್ನು ಚುನಾಯಿಸುವಂತೆ ಸಂಘದ ಸದಸ್ಯ ಎಂ.ಕೆ.ಅಪ್ಪಚ್ಚು ಮನವಿ ಮಾಡಿದ್ದಾರೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯರ ದೂರದೃಷ್ಟಿಯ ಫಲವಾಗಿ ಸಹಕಾರಿ ತತ್ವದಡಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆಯೊಂದಿಗೆ ಜಿಲ್ಲೆಯ ಕಾಫಿ ಬೆಳೆಗಾರರಿಗೆ ಭಾವನಾತ್ಮಕ ಸಂಬಂಧವಿದೆ. ಕೊಡಗಿನ ಕಾಫಿ ಉದ್ಯಮದ ಬೆಳವಣಿಗೆಗೆ ಈ ಸಂಘ ಮಹತ್ತರ ಕೊಡುಗೆ ನೀಡಿದೆ ಎಂದರು. ಕೊಡಗಿನ ಸಣ್ಣ ಬೆಳೆಗಾರರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ನೀಡದಿದ್ದಾಗ ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘ ಸಾಲ ನೀಡಿ ಕಾಫಿ ಬೆಳೆಗಾರರ ಅಭ್ಯುದಯಕ್ಕೆ ಸಹಕಾರಿಯಾಗಿತ್ತು. ಆದರೆ ಸಮರ್ಥ ಸಹಕಾರಿ ನಾಯಕತ್ವದ ಕೊರತೆ, ರಾಜಕೀಯ ಹಸ್ತಕ್ಷೇಪದ ಫಲವಾಗಿ ಈ ಸಂಘ ಅವನತಿಯ ಹಾದಿಯಲ್ಲಿದೆ. 6314 ಸದಸ್ಯರಲ್ಲಿ ಮತ ಚಲಾಯಿಸಲು ಅರ್ಹತೆಯಿರುವುದು ಕೇವಲ 487 ಸದಸ್ಯರಿಗೆ ಮಾತ್ರ. ಸಂಘದ ಕೇವಲ ಶೇ.8 ರಷ್ಟು ಸದಸ್ಯರು ಸಂಘದ ಭವಿಷ್ಯ ನಿರ್ಣಯಿಸುವುದು ಅಪಾಯಕಾರಿ ಬೆಳವಣಿಗೆ ಎಂದು ಆರೋಪಿಸಿದರು. ಬೆಳೆಗಾರರು ಅರ್ಹರನ್ನು ಆಯ್ಕೆ ಮಾಡಿ ಸಂಘವನ್ನು ಉಳಿಸಿ ಬೆಳೆಸಬೇಕೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಸದಸ್ಯ ಟಿ.ಎಂ.ಸೋಮಯ್ಯ ಉಪಸ್ಥಿತರಿದ್ದರು.

ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಮಹೇಂದ್ರ

ಕೆ.ಆರ್.ಪೇಟೆ: ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ದೇವರಹಳ್ಳಿ ಡಿ. ಎಂ.ಮಹೇಂದ್ರ ಅವರನ್ನು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅಭಿನಂದಿಸಿದರು. ಗೋವಿಂದೇಗೌಡನಕೊಪ್ಪಲು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಅಭಿಶೇಖರ್ ಅವರ ನಿವಾಸಕ್ಕೆ ಆಗಮಿಸಿದ್ದ ವೇಳೆ ಡಿ.ಎಂ.ಮಹೇಂದ್ರ ಯುವ ಕಾಂಗ್ರೆಸ್ ಸಮಿತಿಗೆ ಪುನರಾಯ್ಕೆಯಾಗಿರುವ ವಿಚಾರವನ್ನು ತಿಳಿದು ಸನ್ಮಾನಿಸಿ ಯುವಕರನ್ನು ಸಂಘಟಿಸಿ ಪಕ್ಷದ ಶಕ್ತಿಯನ್ನು ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಯುವಕರೇ ಪಕ್ಷದ ಶಕ್ತಿಯಾಗಿದ್ದು, ಯುವ ಶಕ್ತಿಯನ್ನು ಸಂಘಟಿಸಿದರೆ ಪಕ್ಷದ ಶಕ್ತಿಯು ಹೆಚ್ಚಾಗುತ್ತದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶ ಬೆಳವಣಿಗೆ ಹೊಂದಲು ರಾಜೀವ್ ಗಾಂಧಿ ಕಾರಣಕರ್ತರಾಗಿದ್ದಾರೆ. ಅಂದು ಕಂಪ್ಯೂಟರ್ ಕ್ಷೇತ್ರಕ್ಕೆ ಕಾಂಗ್ರೆಸ್ ಒತ್ತು ನೀಡದೇ ಇದ್ದಿದ್ದರೆ ಇಂದು ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶ ಈ ಪರಿ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಐಟಿ ಬಿಟಿ ಕ್ಷೇತ್ರ ವ್ಯಾಪಕವಾಗಿ ಬೆಳೆಯಲು ಸಾಧ್ಯವೇ ಆಗುತ್ತಿರಲಿಲ್ಲ ಎಂಬ ಸತ್ಯವನ್ನು ಬಿಜೆಪಿ ಅರಿಯಬೇಕು. ಈ ವಿಚಾರವನ್ನು ಕಾಂಗ್ರೆಸ್ ಪಕ್ಷದ ಯುವ ಘಟಕದ ಕಾರ್ಯಕರ್ತರು ಜನಸಾಮಾನ್ಯರಿಗೆ ಹಾಗೂ ಮತದಾರರಿಗೆ ತಿಳುವಳಿಕೆ ಮೂಡಿಸಬೇಕು ಎಂದು ಸಚಿವರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕರುಗಳಾದ ಡಾಲು ರವಿ, ಎಂ.ಬಿ. ಹರೀಶ್, ಪುರಸಭಾ ಸದಸ್ಯರಾದ ಹೊಸಹೊಳಲು ಪ್ರವೀಣ್, ಡಿ.ಪ್ರೇಂಕುಮಾರ್, ಹಸಹೊಳಲು ಸೊಸೈಟಿ ಉಪಾಧ್ಯಕ್ಷ ಚಂದ್ರಶೇಖರ್, ನಿರ್ದೇಶಕರಾದ ಅಭಿಶೇಖರ್, ಪ್ರಕಾಶ್, ಹೆಚ್.ಎಸ್. ಕೃಷ್ಣೇಗೌಡ, ಬೊಮ್ಮೇನಹಳ್ಳಿ ಹರ್ಷ, ನಿರಂಜನ್, ಪ್ರವೀಣ್, ಕೃಷ್ಣೇಗೌಡ, ಅನಿಲ್ ಗೌಡ, ಬಳ್ಳೇಕೆರೆ ವಿಜಯ್‌ಕುಮಾರ್, ಕೃಷಿ ಸಚಿವರ ಆಪ್ತ ಸಹಾಯಕ ಚೇತನಾಮಹೇಶ್ ಇದ್ದರು.



ಕೆ.ಆರ್.ಪೇಟೆ ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ದೇವರಹಳ್ಳಿ ಡಿ.ಎಂ.ಮಹೇಂದ್ರ ಅವರನ್ನು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅಭಿನಂದಿಸಿದರು.

'ಪ್ರಸ್ತುತ ಕೃಷಿ ಬಿಕ್ಕಟ್ಟು' ವಿಚಾರ ಸಂಕಿರಣ ನಾಳೆ

ಕೆ ಆರ್ ಪೇಟೆ: ಕೃಷ್ಣ ಪ್ರತಿಷ್ಠಾನ ವತಿಯಿಂದ ಆಯೋಜಿಸಿರುವ 'ಪ್ರಸ್ತುತ ಕೃಷಿ ಬಿಕ್ಕಟ್ಟುಗಳು ಹಾಗೂ ಪರಿಹಾರಗಳು' ಕುರಿತ ವಿಚಾರ ಸಂಕಿರಣವನ್ನು ಪಟ್ಟಣದ ರಾಮದಾಸ್ ಸುಲೋಚನ ಸಭಾಂಗಣದಲ್ಲಿ ಇದೇ ತಿಂಗಳು 12 ರ ಬುಧವಾರ ಹಮ್ಮಿಕೊಳ್ಳಲಾ ಗಿದೆ. ವಿಶ್ವ ಒಕ್ಕಲಿಗರ ಮಠದ ಕೆಂಗೇರಿ ಪೀಠಾಧಿಪತಿ ಡಾ.ನಿಶ್ಚಲಾ ನಂದನಾಥ ಸ್ವಾಮೀಜಿ ಅವರು ಸಾನಿಧ್ಯ ವಹಿಸುವರು. ಗೌರವ ಉಪಸ್ಥಿತಿ ಕೆ ಆರ್ ಪೇಟೆ ಕೃಷ್ಣ ಪ್ರತಿಷ್ಠಾನ ಗೌರವಾಧ್ಯಕ್ಷರಾದ ಸ್ಪೀಕರ್ ಕೃಷ್ಣ ಅವರ ಧರ್ಮಪತ್ನಿ ಇಂದಿರಮ್ಮಕೃಷ್ಣ ಉಪಸ್ಥಿತವಿರುವ ವಿಚಾರ ಸಂಕಿರಣದಲ್ಲಿ ಉಪನ್ಯಾಸ ನೀಡಲು ನಿವೃತ್ತ ಪ್ರಾಂಶುಪಾಲ ಬಾಳೆಕಾಯಿ ಶಿವನಂಜಯ್ಯ, ಸಾವಯವ ಕೃಷಿಕರಾದ ಸಿ ಪಿ ಕೃಷ್ಣ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ನಿವೃತ್ತ ವ್ಯವಸ್ಥಾಪಕ ಎಂ ನಾಗರಾಜೇಗೌಡ, ಆಕಾಶವಾಣಿ ಕಾರ್ಯಕ್ರಮ ನಿರ್ವಹಣಾಧಿಕಾರಿ ಎನ್ ಕೇಶವಮೂರ್ತಿ ಭಾಗವಹಿಸುವರು. ಪ್ರಗತಿಪರ ರೈತರು, ಕೃಷ್ಣ ಅಭಿಮಾನಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೆ ಆರ್ ಪೇಟೆ ಕೃಷ್ಣ ಪ್ರತಿಷ್ಠಾನ ಅಧ್ಯಕ್ಷ ಗೂಡೆಹೊಸಹಳ್ಳಿ ಜವರಾಯಿಗೌಡ ತಿಳಿಸಿದರು. ಅವರು ಕಾರ್ಯ ಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾಹಿತಿ ನೀಡಿದರು.ಉಪನ್ಯಾಸಕರಾದ ಕತ್ತರಘಟ್ಟ ವಾಸು,ನ್ಯಾಯಬೆಲೆ ಅಂಗಡಿ ಮಾಲಿಕರು ಹಾಗೂ ಜಿ.ಪಂ.ಮಾಜಿ ಸದಸ್ಯ ಅಂಚನಹಳ್ಳಿ ಸುಬ್ಬಣ್ಣ, ಪತ್ರಕರ್ತ ಎಂ ಕೆ ಹರಿಚರಣ್ ತಿಲಕ್,ಹಿರಿಯ ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್,ಡಾ.ಕೆ ಆರ್ ನೀಲಕಂಠ,ಅಗ್ರಹಾರಬಾಚಹಳ್ಳಿ ಗ್ರಾ.ಪಂ. ಸದಸ್ಯ ಶ್ರೀನಿವಾಸ್ ಸಜ್ಜನ್ ಉಪಸ್ಥಿತರಿದ್ದರು.

ನಿರಂತರ ಪರಿಶ್ರಮದಿಂದ ಯಶಸ್ಸು!

● ಶರಣಬಸವ ಹುಲಿಹೈದರ

ಮನಸ್ಸಿದ್ದಲ್ಲಿ ಮಾರ್ಗವಿದೆ ಎಂಬ ಗಾದೆ ಇದೆ. ಈ ಮಾತಿಗೆ ಪಿಗ್ಮಿ ಏಜೆಂಟ್ ಆಗಿ ವೃತ್ತಿ ಬದುಕು ಆರಂಭಿಸಿ ಇಂದು ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಯಶಸ್ಸು ಸಾಧಿಸಿರುವ ಶೇಖರಪ್ಪ ಮುತ್ತೇನವರ್ ಸಾಕ್ಷಿಯಾಗಿದ್ದಾರೆ.

ಸಾಮಾನ್ಯ ಕೃಷಿಕ ಕುಟುಂಬದಲ್ಲಿ ಜನಿಸಿದ್ದ ಇವರು ಸದ್ಯ ಯಶಸ್ವಿ ಉದ್ಯಮಿಯಾಗಿ ಬೆಳೆದು ನಿಂತಿದ್ದಾರೆ. ಮೂಲತಃ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ತಾವರಗೇರ ಪಟ್ಟಣದ ಶೇಖರಪ್ಪ ಸದ್ಯ ಕೊಪ್ಪಳದಲ್ಲಿ ನೆಲೆಸಿದ್ದಾರೆ. ತಾವರಗೇರ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಲ್ಲಿ ಪಿಗ್ಮಿ ಏಜೆಂಟ್ ಆಗಿ ತಮ್ಮ ವೃತ್ತಿ ಬದುಕು ಶುರು ಮಾಡಿ, ಇದೀಗ ಹತ್ತಾರು ಜನರಿಗೆ ಕೆಲಸ ಕೊಡುವಂತೆ ಬೆಳೆದು ನಿಂತಿದ್ದಾರೆ. ತಾವರಗೇರ ಪಟ್ಟಣದ ಈರಪ್ಪ ಮುತ್ತೇನವರ್ ಮತ್ತು ಗೌರಮ್ಮ ದಂಪತಿಗಳ ನಾಲ್ಕನೇ ಮಗ ಶೇಖರಪ್ಪ ಹುಟ್ಟಿದ್ದು 1981ರ ಜೂನ್ 18 ರಂದು. ಸದ್ಯ ಹುಟ್ಟಿದ ಊರು ತಾವರಗೇರ ಮಾತ್ರವಲ್ಲದೇ ಹತ್ತಾರು ಕಡೆ ಲೇ ಔಟ್ ಮಾಡುತ್ತಿದ್ದಾರೆ. ತಮ್ಮ 19ನೇ ವಯಸ್ಸಿನಲ್ಲೇ ತಂದೆ ಕಳೆದುಕೊಂಡ ಇವರು, ಎದೆ ಗುಂದದೇ ಬದುಕು ಎದುರಿಸಿ, ಯಶಸ್ವಿ ಉದ್ಯಮಿ ಆಗಿದ್ದಾರೆ. ಬಿ.ಎ. ಓದಿರುವ ಶೇಖರಪ್ಪ ತಮ್ಮ ವಿದ್ಯಾರ್ಥಿ ಜೀವನದಿಂದಲೇ ಓದಿನ ಜೊತೆಗೆ ಕಾಯಕ ಮಾಡಿಕೊಂಡು ಬಂದಿದ್ದಾರೆ.

ಇವರು ಜನಿಸಿದ್ದು ಗ್ರಾಮೀಣ ಪ್ರದೇಶದ ಒಂದು ಪುಟ್ಟ ಹಳ್ಳಿಯಲ್ಲಿ. ಹಳ್ಳಿಯ ರೈತರ ಮಗನಾಗಿ ಜನಿಸಿದ ಇವರು, ಆರಂಭದಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು, ನಂತರ, ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ನಿವೇಶನ ಒದಗಿಸುವ ಉದ್ದೇಶದಿಂದ ರಿಯಲ್ ಎಸ್ಟೇಟ್ ಉದ್ಯಮಕ್ಕೂ ಕೈ ಹಾಕಿದರು. ಮತ್ತು ಅದರಲ್ಲಿ ಯಶಸ್ಸು ಪಡೆದಿದ್ದಾರೆ. ಅರ್ಹ ಮತ್ತು ಆರ್ಥಿಕ ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು ಇವರ ನೆಚ್ಚಿನ ಹವ್ಯಾಸ.

ವಿಶ್ವವಾಣಿ ಕೊಲ್ಲಿ ನಗರಿ ಮಸ್ಕತ್ ನಲ್ಲಿ ನಡೆಸಿದ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ ನಮ್ಮ ಜೀವನಕ್ಕೆ ದೊಡ್ಡ ತಿರುವು. ದಿವ್ಯ ಸಾನಿಧ್ಯವಹಿಸಿದ್ದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಗಣ್ಯಾತಿಗಣ್ಯರ ಜೊತೆ ಅಲ್ಲಿ ಕಳೆದ ಐದು ದಿನಗಳು ಮರೆಯಲಾರದಂತಹ ಅನುಭವ. ಕೊಪ್ಪಳದ ಸಣ್ಣ ಪಟ್ಟಣಕ್ಕೆ ಸೀಮಿತನಾದ ನನ್ನನ್ನು ಗುರುತಿಸಿ ನೀಡಿದ ಜಾಗತಿಕ ಮಟ್ಟದ ಪ್ರಶಸ್ತಿ ನಮಗೆ ಜೀವನದ ಉತ್ಸಾಹ ಹೆಚ್ಚು ಮಾಡಿಸಿದೆ. ಈ ಪ್ರಶಸ್ತಿ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ನಮ್ಮ ಜೊತೆ ಇದ್ದ ಸಾಧಕರ ಸಾಧನೆ, ಅವರ ಜೀವನ, ವ್ಯಕ್ತಿತ್ವ ನನ್ನ ಮೇಲೂ ಪರಿಣಾಮ ಬೀರಿದೆ. ಇಂತಹ ಸಾಧಕರ ಸಮಾವೇಶ ನಡೆಸಿದ ವಿಶ್ವವಾಣಿ ಪತ್ರಿಕೆಗೆ, ಹಾಗೂ ವಿಶ್ವೇಶ್ವರ ಭಟ್ ರವರಿಗೆ ಅನಂತ ಧನ್ಯವಾದಗಳು.

- ಶೇಖರಪ್ಪ

ಸರಕಾರಿ ನೌಕರಿ ಬೇಡ

ಸಣ್ಣದೊಂದು ಸರಕಾರಿ ನೌಕರಿ ಪಡೆದರೂ ಅದೊಂದು ಸಾಧನೆ ಎಂಬ ಕಲ್ಪನೆ ನಮ್ಮ ಜನರಲ್ಲಿದೆ. ಆದರೆ, ಶೇಖರಪ್ಪ ಅವರು ಕಳೆದ 1999ರಲ್ಲಿ ಪೊಲೀಸ್ ಪೇದೆ ಆಗಿ ನೇಮಕ ಆಗಿದ್ದರೂ ಸರಕಾರಿ ಕೆಲಸದ ಕಡೆಗೆ ಮುಖ ಕೂಡ ಮಾಡಿಲ್ಲ. ಸರಕಾರಿ ಕೆಲಸದಲ್ಲಿ ನಾವು ಅಂದುಕೊಂಡ ರೀತಿಯಲ್ಲಿ ಸಾಧನೆ ಮಾಡಲು ಸಾಧ್ಯವಿಲ್ಲ ಎಂದುಕೊಂಡು ಪೊಲೀಸ್ ಇಲಾಖೆಗೆ ಸೇರಿಲ್ಲ ಎಂಬುದು ಶೇಖರಪ್ಪ ವಿಶೇಷತೆ.

ರೈತನ ಮಗ ಯಶಸ್ವಿ ಉದ್ಯಮಿಯಾದ ಕಥೆ

ಓದಿನ ಜೊತೆಗೆ ಕೆಲಸ

ಕಳೆದ 1999ರಲ್ಲೇ ತಾವರಗೇರ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಲ್ಲಿ ಪಿಗ್ಮಿ ಏಜೆಂಟ್ ಆಗಿ ತಮ್ಮ ವೃತ್ತಿ ಬದುಕು ಶುರು ಮಾಡಿ, ಬರೋಬ್ಬರಿ 5 ವರ್ಷ ಅಲ್ಲಿ ಕೆಲಸ ಮಾಡಿದ್ದಾರೆ. ನಂತರ 2003ರಲ್ಲಿ ಎಲ್ಐಸಿ ಏಜೆಂಟ್ ಆಗಿ ಕೆಲಸ ಆರಂಭಿಸಿ, ಯಶಸ್ವಿಯಾಗಿ ಕೆಲಸ ನಿರ್ವಹಿಸಿದ್ದಾರೆ. ಈ ವೇಳೆ ರಾಯಚೂರು ವಿಭಾಗದಲ್ಲೇ ಹೆಚ್ಚು ವಿಮೆ ಮಾಡಿಸಿದ ಎರಡನೇ ಏಜೆಂಟ್ ಎಂಬ ಹೆಗ್ಗಳಿಕೆ ಪಡೆದಿದ್ದಾರೆ. ಹಲವು ವರ್ಷ ಎಲ್ಐಸಿ ಏಜೆಂಟ್ ಆಗಿದ್ದ ಶೇಖರಪ್ಪ ಅವರು ರಿಯಲ್ ಎಸ್ಟೇಟ್ ಉದ್ಯಮದ ಕಡೆ ಮುಖ ಮಾಡಿ, ಆರಂಭದಲ್ಲೇ ಯಶಸ್ಸು ಕಂಡಿದ್ದಾರೆ.

ಎಲ್ಐಸಿ ಏಜೆಂಟ್ ಆಗಿದ್ದಾಗಲೇ 2001ರಲ್ಲೇ ತಾವರಗೇರ ಪಟ್ಟಣದಲ್ಲಿ ಜಮೀನು ಖರೀದಿ ಮಾಡಿ, ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೊಂಡಿದ್ದಾರೆ. ಸದ್ಯ ಕೊಪ್ಪಳ ಜಿಲ್ಲಾ ಕೇಂದ್ರ ಸೇರಿ ಜಿಲ್ಲೆಯ ಬೇರೆ ಬೇರೆ ಕಡೆಗೆ ಜಮೀನು ಖರೀದಿ ಮಾಡಿ, ಲೇ ಔಟ್ ಮಾಡುತ್ತಿದ್ದಾರೆ. ಯೋಗ್ಯ ದರದಲ್ಲಿ ನಿವೇಶನ ನೀಡುವ ಮೂಲಕ ಸ್ವಂತ ಮನೆ ಕಟ್ಟಿಕೊಳ್ಳುವ ಮಧ್ಯಮ ವರ್ಗದ ಜನರ ಕನಸು ನನಸು ಮಾಡುತ್ತಿದ್ದಾರೆ.

ಕ್ರೀಡೆ, ಶಿಕ್ಷಣಕ್ಕೆ ಸಹಕಾರ

ಕ್ರೀಡೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಹಕಾರ ನೀಡುವಲ್ಲಿಯೂ ಶೇಖರಪ್ಪ ಮುತ್ತೇನವರ್ ಸದಾ ಮುಂದಿದ್ದಾರೆ. ತಾವರಗೇರ ಪ್ರೀಮಿ ಯರ್ ಲೀಗ್‌ನ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಶೇಖರಪ್ಪ ಖರೀದಿಸಿದ್ದ ತಂಡವೇ ಕಪ್ ಪಡೆದಿತ್ತು. ಇನ್ನು ಕೊಪ್ಪಳದಲ್ಲಿ ಪ್ರತಿ ವರ್ಷ ನಡೆಯುವ ಕೊಪ್ಪಳ ಪ್ರೀಮಿಯರ್ ಲೀಗ್, ಗವಿಶ್ರೀ ಕ್ರಿಕೆಟ್ ಟೂರ್ನಮೆಂಟ್‌ಗೆ ನಿರಂತ ರವಾಗಿ ಆರ್ಥಿಕ ಸಹಾಯ ಮಾಡುತ್ತಿದ್ದಾರೆ. ಇನ್ನು ಅರ್ಹ ಮತ್ತು ಆರ್ಥಿಕವಾಗಿ ಹಿಂದುಳಿ ದಿರುವ ಸ್ಕೌಟ್ ಅಂಡ್ ಗೈಡ್ಸ್ ವಿದ್ಯಾರ್ಥಿ ಗಳಿಗೆ ಸಮವಸ್ತ್ರ, ಪುಸ್ತಕ, ನೋಟ್ ಬುಕ್ ಕೊಡಿಸುವ ಕೆಲಸ ನಿರಂತರ ಮಾಡುವ ಮೂ ಲಕ ಶೇಖರಪ್ಪ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ.

-ಶೇಖರಪ್ಪ

ಸಮಾಜ ಮುಖಿ ಕೆಲಸಕ್ಕೆ ಮುಂದು

ಕಳೆದ 2001ರಲ್ಲೇ ತಾವರಗೇರದಲ್ಲಿ ಲಿಯೋ ಯೂತ್ ಕ್ಲಬ್ ನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾಮಾಜಿಕ ಸೇವೆ ಆರಂಭಿಸಿದ್ದಾರೆ. ನಂತರವೂ ಶೇಖರಪ್ಪ ಸಾಮಾಜಿಕ ಕಾರ್ಯದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು, ನಿರಂತರವಾಗಿ ಸಮಾಜ ಮುಖಿ ಕೆಲಸ ಮಾಡುತ್ತಿದ್ದಾರೆ. ಸದ್ಯ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ನ ಜಿಲ್ಲಾ ಆಯುಕ್ತರಾಗಿ, ವಿವೇಕ ಜಾಗೃತಿ ಬಳಗ ತಂಡ, ಕೊಪ್ಪಳದ ಮಳೆ ಮಲ್ಲೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾಗಿ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಜತೆಯಲ್ಲೇ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಯುವ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸಮಾಜ ಸೇವೆ ಮಾಡುತ್ತಿದ್ದಾರೆ.

371(ಜೆ) ಹೋರಾಟದಲ್ಲೂ ಸಕ್ರಿಯ

ಕಲ್ಯಾಣ ಕರ್ನಾಟಕ ಭಾಗದ ಜನರ ಭಾಗ್ಯ ಎನ್ನುವಂತೆ ಸದ್ಯ ಜಾರಿಯಲ್ಲಿರುವ 371ಜೆ ಹೋರಾಟದಲ್ಲೂ ಶೇಖರಪ್ಪ ಅವರ ಪಾತ್ರ ಹಿರಿದಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಹೋರಾಟ ಮಾಡಿರುವ ಶೇಖರಪ್ಪ ಅವರು, ಹೋರಾಟ ಸಮಿತಿಯಲ್ಲಿ ಜಿಲ್ಲಾ ಕಾರ್ಯಕಾರಿಣಿ ಮಂಡಳಿಯಲ್ಲಿ ಕೆಲಸ ಮಾಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ 371ಜೆ ಜಾರಿಗೆ ಆಗ್ರಹಿಸಿ ಕುಷ್ಟಗಿ ತಾಲೂಕು ಕ್ಯಾದಿಗುಪ್ಪ ಗ್ರಾಮದ ಗಣೇಶ ಎಂಬುವರು ಕೊಪ್ಪಳದಿಂದ ದೆಹಲಿಗೆ ವರೆಗೆ ಬೈಕ್ ರ್‍ಯಾಲಿ ಮಾಡಿದ್ದರು. ಕೈ ಬಿಟ್ಟು ದೆಹಲಿವರೆಗೆ ಬೈಕ್ ಓಡಿಸುವ ಮೂಲಕ ಇಡೀ ದೇಶದ ಗಮನ ಸೆಳೆದಿದ್ದರು. ಈ ಸಾಹಸದ ಹಿಂದೆ ಮತ್ತು ಗಣೇಶ ಅವರಿಗೆ ನೆರವಾಗಿ ನಿಂತವರ ಪೈಕಿ ಶೇಖರಪ್ಪ ಪ್ರಮುಖರು. ಬೈಕ್ ನಲ್ಲಿ ತೆರಳಿದ ನಂತರ ಆಗಿನ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಸಲ್ಲಿಸಿ ಬಂದಿದ್ದಾರೆ. ಪ್ರಧಾನಿ ಕಚೇರಿಗೂ ಮನವಿ ಸಲ್ಲಿಸಿದ್ದು, 371ಜೆ ಹೋರಾಟದ ವಿಶೇಷತೆ.

ಆದರ್ಶವಾಗಿದ್ದು ಮುನ್ನಡೆಸು

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಜಗತ್ತಿನ ಬಗ್ಗೆ ತಿಳಿಯಲು ಹೊಸ ಹೊಸ ವಿಷಯಗಳನ್ನು ರೀತಿ ನೀತಿಗಳನ್ನು, ನಡವಳಿಕೆಯನ್ನು ಕಲಿಯಲು ಮಕ್ಕಳು ಸದಾ ತಮ್ಮ ಪಾಲಕರ ಕಡೆಗೆ ನೋಡುತ್ತಾರೆ. ಆದ್ದರಿಂದಲೇ ನಮ್ಮ ನಡೆ-ನುಡಿಗಳಿಂದ ನಾವು ಆದರ್ಶವಾಗಿದ್ದು ಮಕ್ಕಳನ್ನು ಬೆಳೆಸಬೇಕೆಂದು ಹೇಳುತ್ತಾರೆ. ಮುಂದಿನ ಹಂತಗಳಲ್ಲಿಯೂ ಇದೇ ಅವಲಂಬನೆ ಮುಂದುವರೆಯುತ್ತದೆ ಇದು ಮಿತ್ರರ, ಶಿಕ್ಷಕರ, ಮಾರ್ಗದರ್ಶಿಗಳ ಹಾಗೂ ಇತರರ ಮೇಲಿನ ಅವಲಂಬನೆ ಆಗಿರಬಹುದು. ಇದರ ಅರ್ಥ ಕೆಲವು ಜನರು ನಮ್ಮ ಮೇಲೆ ಅವಲಂಬಿತರಾಗಿದ್ದು ನಮ್ಮ ಮಾರ್ಗದರ್ಶನವನ್ನು ಎದುರು ನೋಡುತ್ತಿರುತ್ತಾರೆ. ನಾವೇನು ಮಾಡಿದರೂ ಅದು ಅವರನ್ನು ಪ್ರಭಾವಿತಗೊಳಿಸುತ್ತದೆ ಈ ಸಂದರ್ಭದಲ್ಲಿ ಕೃಷ್ಣ ಹೇಳುತ್ತಾನೆ. ಮೇಲಿನವರು ಮಾಡಿದ ಹಾಗೆ ಉಳಿದವರು ಮಾಡುತ್ತಾರೆ ಹಾಗಾಗಿ ಅವರಿಗೆ ಮೇಲಿನವರ ನಡವಳಿಕೆ ಉಳಿದವರಿಗೆ ಮಾದರಿ ಯಾಗುತ್ತದೆ.

ಕೃಷ್ಣ ಹೇಳುತ್ತಾನೆ, ಮೂರು ಜಗತ್ತಿನಲ್ಲಿಯೂ ನಾನು ಮಾಡ ಬೇಕಾದದ್ದು ಏನೂ ಇಲ್ಲ ಹಾಗೂ ನಾನು ಪಡೆಯಬೇಕಾದದ್ದು ಯಾವುದೂ ಇಲ್ಲ(3.22); ಆದರೂ ನಾನು ಕಾರ್ಯ ಪ್ರವೃತ್ತನಾಗಿರುತ್ತೇನೆ. ಯಾವುದೇ ಸಮಯ ನಾನು ಕಾರ್ಯ ಪ್ರವೃತ್ತನಾಗಿಲ್ಲದಿದ್ದರೆ ಜನರು ನನ್ನ ಮಾರ್ಗದಲ್ಲಿಯೇ ನಡೆಯುತ್ತಾರೆ(3.23). ನಾನು ಕಾರ್ಯ ಮಾಡದಿದ್ದರೆ ಈ ಜಗತ್ತುಗಳು ನಾಶ ಹೊಂದುತ್ತವೆ. ಜನರಲ್ಲಿಯ ಗೊಂದಲಕ್ಕೆ ನಾನು ಕಾರಣನಾಗಿ ಜಗವು ಹಾಳಾಗುತ್ತದೆ.(3.24)

ಮುಂದೆ ಕೃಷ್ಣ ಪರಮಾತ್ಮನಾಗಿ ಬಂದು ತನ್ನ ವಿಶ್ವರೂಪ ವನ್ನು ತೋರಿಸುತ್ತಾನೆ. ಸೃಷ್ಟಿ ಪಾಲನೆ ಹಾಗೂ ನಾಶಗಳನ್ನು ಒಳಗೊಂಡ ಒಂದು ಕ್ರಿಯಾಶಕ್ತಿಯಾಗಿ ಅವನು ಬರುತ್ತಾನೆ. ಒಮ್ಮೆ ಆ ಕ್ರಿಯಾಶಕ್ತಿಯು ಕಾರ್ಯಮಾಡದಿದ್ದರೆ ಆಗುವ ಪರಿಣಾಮಗಳನ್ನು ಕೃಷ್ಣ ಈ ಶ್ಲೋಕಗಳಲ್ಲಿ ತಿಳಿಸಿರುತ್ತಾನೆ. ರೈತನು ಗೋಧಿ ಬೀಜವನ್ನು ಬಿತ್ತಿದಾಗ ಈ ಕ್ರಿಯಾಶಕ್ತಿಯು ಮೊಳಕೆಯೊಡೆಯಲು ಕಾರಣವಾಗುತ್ತದೆ. ಮೊಳಕೆಯೊಡೆದ ನಂತರ ಬೆಳೆ ಬರದಿದ್ದರೆ ಅದು ಗೊಂದಲಕ್ಕೆ ಕಾರಣವಾಗುತ್ತದೆ. ಕ್ರಿಯಾಶೀಲತೆ ನಿಂತರೆ ಬೀಜ ವ್ಯರ್ಥವಾಗುತ್ತದೆ. ಬೆಳೆದ ನಂತರ ಬೀಜದ ಉತ್ಪಾದನೆಯಾಗದಿದ್ದರೆ ತಲೆಮಾರುಗಳೇ ನಾಶವಾಗುತ್ತವೆ.

ಈ ವಿಶ್ವದಲ್ಲಿ ರಚಿತವಾಗಿರುವ ಎಷ್ಟೋ ಗೋಚರ ಮತ್ತು ಅಗೋಚರ ವಸ್ತುಗಳ ಮೇಲೆ ನಮ್ಮ ಜೀವನ ಅವಲಂಬಿತವಾಗಿದೆ. ಈ ಕ್ರಿಯಾಶಕ್ತಿಯಿಂದ ಸತತವಾಗಿ ಮಾಡಲ್ಪಡುವ ಎಷ್ಟೋ ನಿರಾಯಾಸ ಚಟುವಟಿಕೆಗಳಿಂದಾಗಿ ಇದೆಲ್ಲವೂ ಸಾಧ್ಯವಾಗಿದೆ.

ದಾನವನಿಗೇಕೆ ಕೈ ಮುಗಿಯಬೇಕು?

● ರಾಘವೇಂದ್ರ ರಾಯಲಪಾಡು



ದೇವಾಲಯಗಳು ಶಕ್ತಿಕೇಂದ್ರಗಳು. ದೇವರಿಗೆ ಅಹವಾಲು ಮಾಡಿ, ಕಾಣಿಕೆ, ಹರಕೆ ಕೊಟ್ಟು ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವ ವಿನಿಮಯ ಕೇಂದ್ರಗಳಲ್ಲ. ಮನುಷ್ಯ ಜನ್ಮದ ಮಹತ್ವವನ್ನು ಅರಿತುಕೊಂಡು, ಅದನ್ನು ಸಾರ್ಥಕಪಡಿಸಿಕೊಳ್ಳಲು ಅಗತ್ಯವಾದ ಆಂತರಿಕ ಚೈತನ್ಯವನ್ನು ತುಂಬಿಕೊಳ್ಳಲು ದೇವಾಲಯಗಳಿಗೆ ಭೇಟಿ ನೀಡಬೇಕು.

ದೇವಾಲಯಗಳಲ್ಲಿ ದೇವರ ಪ್ರಭಾವಳಿಯ ನಡುವೆ ಹಾಗೂ ದ್ವಾರಗಳ ತೋರಣದ ನಡುವೆ, ಗೋಪುರಗಳಲ್ಲಿ, ತೋರಣಗಳ ಮಧ್ಯಭಾಗದಲ್ಲಿ, ಹೊಸ ಮನೆಗಳ ಮುಂದೆ ದಾನವನ ಮುಖವೊಂದನ್ನು ಕಾಣಬಹುದು. ಇದು ಕೀರ್ತಿ ಮುಖ ಎಂಬ ಹೆಸರಿನ ದಾನವನ ಮುಖ. ಈ ರಾಕ್ಷಸನು ದೇವರಿಂದ ವರಗಳನ್ನು ಪಡೆದು ಅವರನ್ನೇ ಪೀಡಿಸುವವನಾಗಿ ಕಡೆಗೆ ಈಶ್ವರನ ಕರುಣೆಯಿಂದ ದೇವಾಲಯಗಳಲ್ಲಿ ಸ್ಥಾನವನ್ನು ಪಡೆದುಕೊಂಡು, ಜನರಿಂದ ನಮಸ್ಕರಿಸಲ್ಪಡುತ್ತಿರುವ ಕುತೂಹಲಕಾರಿ ಕತೆಯು ಸ್ಕಾಂದಪುರಾಣದಲ್ಲಿ ಕಂಡುಬರುತ್ತದೆ.

ಬಹಳ ಹಿಂದೆ ಇದ್ದ ಕೀರ್ತಿಮುಖನೆಂಬ ಒಬ್ಬ ದಾನವನು ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಮಾಡುತ್ತಾನೆ. ಇವನ ತಪಸ್ಸಿಗೆ ಮೆಚ್ಚಿದ ಬ್ರಹ್ಮ ಪ್ರತ್ಯಕ್ಷನಾಗಿ ವರವನ್ನು ಬೇಡಲು ಹೇಳುತ್ತಾನೆ. ಬ್ರಹ್ಮನಿಂದ ತನಗೆ ಬೇಕಾದ ವರಗಳನ್ನು ಪಡೆದ ಕೀರ್ತಿಮುಖನು ಅಪಾರವಾದ ಬಲವನ್ನು ಪಡೆದೆನೆಂದು ಬೀಗುತ್ತಾನೆ. ಆನಂತರ ಅವನು ಭೂಮಂಡಲದ ಮೇಲೆಲ್ಲಾ ತನ್ನ ಆಧಿಪತ್ಯವನ್ನು ಸ್ಥಾಪಿಸುತ್ತಾನೆ. ಇವನ ಪರಾಕ್ರಮದ ಕೀರ್ತಿಯು ಭೂಮಿಯ ಎಲ್ಲೆಡೆಯೂ ಹರಡುತ್ತದೆ. ಇವನನ್ನು ಕಂಡರೆ ಎಲ್ಲರೂ ಭೀತಿಗೊಳಗಾಗುತ್ತಾರೆ. ಕೀರ್ತಿಮುಖ ಜನರನ್ನು ಕಾಡತೊಡಗುತ್ತಾನೆ. ಕಡೆಗೆ ತನ್ನ ಪ್ರಭಾವವನ್ನು ದೇವಲೋಕದ ಮೇಲೂ ಸ್ಥಾಪಿಸಲು ಹೋಗುತ್ತಾನೆ. ದೇವತೆಗಳೂ ಇವನ ಕಾಟವನ್ನು ಸಹಿಸಲಾಗದೆ ಇವನನ್ನು ಎದುರಿಸಲಾಗದೆ ಪರಿತಪಿಸುತ್ತಾರೆ. ಅಂತಿಮವಾಗಿ ದೇವತೆಗಳೆಲ್ಲಾ ಸೇರಿ ಪರಶಿವನ ಮೊರೆಹೋಗುತ್ತಾರೆ. ಪರಶಿವನು ಕ್ರೋಧಗೊಂಡು, ಕೀರ್ತಿಮುಖನನ್ನು ದಹಿಸಿಬಿಡುವಂತೆ ಅಗ್ನಿದೇವನಿಗೆ ಹೇಳುತ್ತಾನೆ. ಶಿವಅಗ್ನಿಯನ್ನು ಕಂಡು ಬೆದರಿದ ಕೀರ್ತಿಮುಖನು ಅವನಿಂದ ತಪ್ಪಿಸಿಕೊಳ್ಳಲು ಓಡಲಾರಂಭಿಸುತ್ತಾನೆ. ಒಬ್ಬರ ಹಿಂದೊಬ್ಬರು ಲೋಕಗಳನ್ನು ಸುತ್ತುತ್ತಾರೆ. ಕಡೆಗೆ ಬಸವಳಿದ ದಾನವನು, ತನ್ನನ್ನು ರಕ್ಷಿಸುವಂತೆ ಪರಮಶಿವನಲ್ಲಿಯೇ ಶರಣು ಹೋಗುತ್ತಾನೆ. ತನ್ನಿಂದ ಆಜ್ಞಾಪಿಸಲ್ಪಟ್ಟ ದೇವಹೂತಿಯನ್ನು ಶಾಂತಿಪಡಿಸಿದ ಶಿವನು ತನ್ನ ಲಲಾಟದ ನಡುವೆ ಅಗ್ನಿಯನ್ನು ಉಪಸಂಹಾರಗೊಳಿಸುತ್ತಾನೆ. ಇದರಿಂದ ವಿನೀತನಾದ ಕೀರ್ತಿಮುಖನು ಶಿವನಿಗೆ ಪ್ರಭು ನನಗೆ ತುಂಬಾ ಸುಸ್ತಾಗಿದೆ, ವಿಪರೀತ ಹಸಿವೆಯಾಗಿದೆ. ತಿನ್ನಲು ಸಾಕಷ್ಟು ಏನನ್ನಾದರೂ ಕೊಡಿ ಎಂದು ಬೇಡುತ್ತಾನೆ. ಇದಕ್ಕೆ ಶಿವನು ನಿನ್ನನ್ನೇ ನೀನು ತಿಂದುಕೋ. ಇದು ನಿನಗೆ ವರವೂ ಹೌದು ಶಾಪವೂ ಹೌದು' ಎಂದು ಹೇಳುತ್ತಾನೆ. ಆಗ ರಾಕ್ಷಸನು ಮಕರರೂಪವನ್ನು ತಾಳಿ ಪೃಚ್ಛದ ಕಡೆಯಿಂದ ತನ್ನನ್ನೇ ತಾನು ಭುಂಜಿಸತೊಡಗುತ್ತಾನೆ. ಪಾದ, ಹೊಟ್ಟೆಯ ಭಾಗಗಳು, ಕೈಗಳನ್ನು ತಿಂದ ನಂತರ ಕೇವಲ ತಲೆಯು ಮಾತ್ರ ಉಳಿದಿರುತ್ತದೆ. ಆಗ ತನ್ನ ತಲೆಯನ್ನು ತಾನೇ ತಿನ್ನುವುದು ಹೇಗೆಂದು ತಿಳಿಯದ ಆ ಶಿರವು ಪುನಃ ಶಿವನನ್ನೇ ಪ್ರಾರ್ಥಿಸುತ್ತದೆ.

ಆಗ ಶಿವನು ಸಾಕು, ಇನ್ನು ತಿನ್ನುವುದನ್ನು ನಿಲ್ಲಿಸು. ಇನ್ನು ಮುಂದೆ ನೀನು ಭೂಲೋಕದಲ್ಲಿ ದೇವಾಲಯಗಳ ಮಕರತೋರಣದ ಮಧ್ಯಭಾಗದಲ್ಲಿ ನೆಲೆಸು. ದೇವಾಲಯಕ್ಕೆ ಬರುವ ಭಕ್ತರ ದುಷ್ಟ ಆಲೋಚನೆ, ದುರಾಸೆ, ಅಹಂಕಾರ ಮುಂತಾದ ದುರ್ಗುಣಗಳನ್ನು ತಿಂದು ಅದರಿಂದ ನಿನ್ನ ಹೊಟ್ಟೆಯ ಹಸಿವನ್ನು ಹಿಂಗಿಸಿಕೋ' ಎಂದು ನುಡಿಯುತ್ತಾನೆ.

ಅಂದಿನಿಂದ ಕೀರ್ತಿಮುಖನು ಮಕರತೋರಣದ ಮಧ್ಯಭಾಗದಲ್ಲಿ ರಾಕ್ಷಸ ಮುಖವನ್ನು ಧರಿಸಿ ನಿಲ್ಲುತ್ತಾನೆ. ದೇವಾಲಯಕ್ಕೆ ಬರುವ ಭಕ್ತರ ಮನದ ದುಷ್ಟ ಆಲೋಚನೆಗಳನ್ನು, ಸ್ವಾರ್ಥ, ದುರಾಸೆಯ ಸಂಕಲ್ಪಗಳನ್ನು ತಿಂದು ಜೀರ್ಣಿಸಿಕೊಳ್ಳುತ್ತಿದ್ದಾನೆ. ಈಗಲೂ ಸಾಮಾನ್ಯವಾಗಿ ದೇವಾಲಯಗಳ ದೇವರುಗಳ ಪ್ರಭಾವಳಿಯ ನಡುವೆ, ಮಹಾದ್ವಾರದ ನಡುವೆ, ಗೋಪುರಗಳ ಮೇಲೆ, ಕೆಲವೊಮ್ಮೆ ಮನೆಗಳ ಮುಂದೆಯೂ, ಅಲಂಕಾರಾರ್ಥವಾಗಿ ಅಲ್ಲಲ್ಲಿ ಈ ದಾನವ ಕೀರ್ತಿಮುಖನ ಮುಖವನ್ನು ರಚಿಸಿಡುವುದನ್ನು ನಾವು ಕಾಣಬಹುದಾಗಿದೆ.

ದೇವರಿಗೆ ಕೈ ಮುಗಿಯುವುದು ಓಕೆ. ಆದರೆ ಈ ರಾಕ್ಷಸನಿಗೆ ಏಕೆ? ಎಂದು ಪುಟ್ಟ ಮಕ್ಕಳು ಕುತೂಹಲದಿಂದ ದೇವಾಲಯಗಳಲ್ಲಿ ಕಾಣುವ ದಾನವ ಮುಖವನ್ನು ಕಂಡು ಪ್ರಶ್ನಿಸುವುದನ್ನು ಕಾಣಬಹುದು. ಆಗ ಮಕ್ಕಳಿಗೆ ಈ ಕುತೂಹಲಕಾರಿ ಕತೆಯನ್ನು ಹೇಳುವವರಾಗಿ!

ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್

ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್ ತನ್ನ ಸಮಗ್ರ ಆರೈಕೆಯ ಮೇಲಿನ ನಿಷ್ಠೆಯನ್ನು ಮತ್ತೊಮ್ಮೆ ತೋರಿಸಿದೆ. ಬೆಂಗಳೂರಿನ ಗಡಿ ಭದ್ರತಾ ಪಡೆ ಘಟಕಕ್ಕಾಗಿ ಸಂಪೂರ್ಣ ವೈದ್ಯಕೀಯ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸುವ ಮೂಲಕ ಈ ನಿಷ್ಠೆಯನ್ನು ಪ್ರೂವ್ ಮಾಡಿದೆ. ಟ್ರಸ್ಟ್ ನ ಮುಖ್ಯ ಕಾರ್ಯದರ್ಶಿ ಹಾಗೂ ಶ್ರೀ ಪರಿಪೂರ್ಣ ಸನಾತನ ಆಯು ರ್ವೇದ ವೈದ್ಯಕೀಯ ಕಾಲೇಜು, ಆಸ್ಪತ್ರೆ, ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಪ್ರೊ. ಡಾ. ಎ.ವಿ. ಶ್ರೀನಿವಾಸನ್ ಅವರ ಮಾರ್ಗದರ್ಶನದಲ್ಲಿ, ಈ ಶಿಬಿರವನ್ನು 2025ರ ಫೆಬ್ರವರಿ 1ರಿಂದ 7ರವರೆಗೆ ನಡೆಸಲಾಯಿತು. ಆಯುರ್ವೇದ ಕಾಲೇಜಿನ ಅನುಭವಿ ವೈದ್ಯರು ಈ ಶಿಬಿರದಲ್ಲಿ ಭಾಗವಹಿಸಿ, ಪಾರಂಪರಿಕ ಮತ್ತು ಆಧುನಿಕ ವೈದ್ಯಕೀಯ ಪದ್ಧತಿಗಳನ್ನು ಸಮಗ್ರವಾಗಿ ಒಗ್ಗೂಡಿಸುವ ಟ್ರಸ್ಟ್‌ನ ದೃಢ ಸಂಕಲ್ಪವನ್ನು ತೋರಿಸಿದರು.

ಮರ್ಮ ಚಿಕಿತ್ಸೆ

ಈ ವಾರಪೂರ್ತಿ ನಡೆದ ವೈದ್ಯಕೀಯ ಶಿಬಿರದಲ್ಲಿ 400 ಗಡಿ ಭದ್ರತಾ ಪಡೆ ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರಿಗೆ ಅವಶ್ಯಕ ಆರೋಗ್ಯ ಸೇವೆಗಳನ್ನು ಒದಗಿಸಲಾಯಿತು. ಮರ್ಮ ಚಿಕಿತ್ಸೆಯ (ವರ್ಮೋಲಾಜಿ) ಮೂಲಕ ವಿವಿಧ ಆರೋಗ್ಯ ಸಮಸ್ಯೆ ಗಳಿಗೆ ಪರಿಹಾರ ನೀಡಲಾಯಿತು. ಮರ್ಮ ಚಿಕಿತ್ಸೆಯು ಸಿದ್ಧ ಮತ್ತು ಆಯುರ್ವೇದ ಪರಂಪರೆಯಲ್ಲಿನ ಅತ್ಯಂತ ಗೌರವಾನ್ವಿತ ಚಿಕಿತ್ಸೆ. ಈ ಚಿಕಿತ್ಸಾ ಪದ್ಧತಿ ಶರೀರದ ಜೀವಕೇಂದ್ರ ಬಿಂದುಗಳನ್ನು ಪ್ರೇರೇಪಿಸಿ, ನೈಸರ್ಗಿಕ ಆರೋಗ್ಯವನ್ನು ಪುನಃ ಸ್ಥಾಪಿಸಲು ಸಹಾಯ ಮಾಡುತ್ತದೆ. ಆಧುನಿಕ ವೈದ್ಯಕೀಯ ತಪಾಸಣಾ ಶಿಬಿರಗಳಲ್ಲಿ ಈ ಪಾರಂಪರಿಕ ಚಿಕಿತ್ಸೆಯನ್ನು ಅಳವಡಿಸುವ ಮೂಲಕ, ಶ್ರೀ ಪರಿಪೂರ್ಣ ಸನಾತನ ಆಯುರ್ವೇದ ಕಾಲೇಜು ಈ ಶೋಧನಾತ್ಮಕ ಚಿಕಿತ್ಸೆಯ ಮಹತ್ವವನ್ನು ಮತ್ತಷ್ಟು ಪ್ರಬಲಗೊಳಿಸಿದೆ, ವಿಶೇಷವಾಗಿ ರಾಷ್ಟ್ರಸೇವಕರಿಗಾಗಿ.

ಬಿ.ಎಸ್.ಎಫ್.ನೊಂದಿಗೆ ಬಲಿಷ್ಠ ಸಹಭಾಗಿತ್ವ

ಈ ಶಿಬಿರದ ಯಶಸ್ಸನ್ನು ಪರಿಗಣಿಸಿ, ಪ್ರೊ. ಡಾ. ಎ.ವಿ. ಶ್ರೀನಿವಾಸನ್ ಅವರು ಬಿ.ಎಸ್.ಎಫ್. ಬೆಂಗಳೂರು ಘಟಕದ ಗೌರವಾನ್ವಿತ ಇನ್ಸ್‌ಪೆಕ್ಟರ್ ಜನರಲ್ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಈ ಸಹಭಾಗಿತ್ವದ ಫಲವಾಗಿ, ಬಿ.ಎಸ್.ಎಫ್. ಮತ್ತು ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್‌ಲ ನಡುವಿನ ಸಮಜೋತಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದವು ರಾಷ್ಟ್ರೀಯ ಭದ್ರತಾ ಸಿಬ್ಬಂದಿಯ ಆರೋಗ್ಯ ನಿರ್ವಹಣಾ ಹಿತಕ್ಕಾಗಿ ಪಾರಂಪರಿಕ ಚಿಕಿತ್ಸಾ ಪದ್ಧತಿಗಳನ್ನು ಮುಖ್ಯವಾಹಿನಿಗೆ ತರಲು ಒಂದು ಮುಖ್ಯ ಹೆಜ್ಜೆಯಾಗಿದೆ. ಬಿ.ಎಸ್. ಎಫ್. ಅಧಿಕಾರಿಗಳ ಮತ್ತು ಸಿಬ್ಬಂದಿಯ ಸಹಕಾರದಿಂದ ಮೂಡಿಬಂದ ಈ ಒಪ್ಪಂದವು, ಭಾರತೀಯ ಭದ್ರತಾ ಪಡೆಗಳ ಕ್ಷೇಮಾಭಿವೃದ್ಧಿಗಾಗಿ ಆಯುರ್ವೇದದ ಬಳಕೆಯನ್ನು ಅಧಿಕೃತವಾಗಿ ಒಪ್ಪಿಕೊಳ್ಳುವ ಒಂದು ಪ್ರಮುಖ ಮುಂದಿರುತ್ತದೆ.

ಪಾರಂಪರಿಕ ಚಿಕಿತ್ಸೆಗಳ ಪಾತ್ರ

ಆಯುರ್ವೇದ, ಸಿದ್ಧ ಮತ್ತು ಮರ್ಮ ಚಿಕಿತ್ಸೆಯ ಪ್ರಭಾವ ಇದೀಗ ಹೆಚ್ಚುತ್ತಿರುವ ಒಲವು ಪಡೆದುಕೊಳ್ಳುತ್ತಿದೆ. ಬಿ.ಎಸ್.ಎಫ್. ಸಿಬ್ಬಂದಿಯಂತಹ ದೈಹಿಕ-ಮಾನಸಿಕ ಒತ್ತಡ ಎದುರಿಸುವ ವೃತ್ತಿಪರರು ವಿವಿಧ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುವ ಸಾಧ್ಯತೆಯಿದೆ. ಮರ್ಮ ಚಿಕಿತ್ಸೆಯಂತಹ ನೈಸರ್ಗಿಕ ಮತ್ತು ಪರಿಣಾಮಕಾರಿ ಚಿಕಿತ್ಸೆಗಳು ದೀರ್ಘಕಾಲಿಕ ಪರಿಹಾರ ಒದಗಿಸುತ್ತವೆ. ಇದನ್ನು ರಾಷ್ಟ್ರೀಯ ಭದ್ರತಾ ಸಿಬ್ಬಂದಿಯ ಆರೋಗ್ಯ ನಿರ್ವಹಣೆಯ ಮುಖ್ಯಭಾಗವಾಗಿ ಅಳವಡಿಸುವ ಮೂಲಕ ಚಿಕಿತ್ಸೆಯ ಬದಲಾವಣೆಗೆ ದಾರಿ ತೋರುತ್ತದೆ. ಶ್ರೀ

ಪರಿಪೂರ್ಣ ಸನಾತನ ಆಯುರ್ವೇದ ವೈದ್ಯಕೀಯ ಕಾಲೇಜು ಆಯುಶ್(ಆಯುರ್ವೇದ, ಯೋಗ, ಯುನಾನಿ, ಸಿದ್ಧ, ಮತ್ತು ಹೋಮಿಯೋಪಥಿ) ಪದ್ಧತಿಗಳನ್ನು ರಾಷ್ಟ್ರದ ಆರೋಗ್ಯ ಕಾರ್ಯಚಟುವಟಿಕೆಯಲ್ಲಿ ಸಮಗ್ರಗೊಳಿಸುವ ಮಾದರಿಯಾಗಿ ಕೆಲಸ ಮಾಡುತ್ತಿದೆ.

ರಾಷ್ಟ್ರೀಯ ಸುರಕ್ಷತಾ ಪಡೆಗಳ ಸಮಗ್ರ ಆರೈಕೆಗೆ ನಿಷ್ಠೆ

ಟ್ರಸ್ಟ್‌ನ ಭವಿಷ್ಯದ ದೃಷ್ಟಿಕೋನ

ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್ ಆಯುರ್ವೇದ ಆರೋಗ್ಯ, ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಮಹತ್ವದ ಕೊಡುಗೆ ನೀಡುತ್ತ ಬಂದಿದೆ. ಪ್ರೊ. ಡಾ. ಎ.ವಿ. ಶ್ರೀನಿವಾಸನ್ ಅವರ ನೇತೃತ್ವದಲ್ಲಿ, ಪಾರಂಪರಿಕ ಚಿಕಿತ್ಸೆಗಳ ಪ್ರಚಾರ ಮತ್ತು ಆಧುನಿಕ ತಂತ್ರಜ್ಞಾನಗಳೊಂದಿಗೆ ಅವುಗಳ ಸಮನ್ವಯಕ್ಕೆ ಈ ಸಂಸ್ಥೆ ಮುಂಚೂಣಿಯಲ್ಲಿದೆ. ಟ್ರಸ್ಟ್‌ನ ಪ್ರಮುಖ ಗುರಿ ಸಾಮಾಜಿಕ ಸೇವೆ, ವಿಶೇಷವಾಗಿ ರಾಷ್ಟ್ರ ರಕ್ಷಣೆಗೆ ತಮ್ಮ ಜೀವನವನ್ನು ಮುಡಿಪಾಗಿಡುವವರಿಗಾಗಿ ವಿಶೇಷ ಆರೋಗ್ಯ ಸೇವೆಗಳನ್ನು ಒದಗಿಸುವುದು. ಬಿ.ಎಸ್.ಎಫ್. ವೈದ್ಯಕೀಯ ಶಿಬಿರದ ಯಶಸ್ಸು ಈ ದೃಷ್ಟಿಕೋನವನ್ನು ಮತ್ತಷ್ಟು ಬಲಪಡಿಸಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವೈದ್ಯರು, ಇಂಟನ್‌ಗಳು ತಮ್ಮ ಸೇವೆಗೆ ಬಿ.ಎಸ್.ಎಫ್. ಮತ್ತು ಭಾರತ ಸರ್ಕಾರದಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಟ್ರಸ್ಟ್ ತನ್ನ ಸಮಗ್ರ ಆರೈಕೆ ಕಾರ್ಯಕ್ರಮಗಳನ್ನು ಮುಂದುವರಿಸಲು ಮತ್ತು ದೇಶದ ಇತರ ಭದ್ರತಾ ಹಾಗೂ ಪ್ಯಾರಾಮಿಲಿಟರಿ ಘಟಕಗಳಿಗೆ ವಿಸ್ತರಿಸಲು ನಿರ್ಧರಿಸಿದೆ.

ಆಯುರ್ವೇದದ ಶ್ರೇಷ್ಠತೆ ಮತ್ತು ಸಾರ್ವಜನಿಕ ಸೇವೆಯ ಸಾಕ್ಷ್ಯ: ಈ ಶಿಬಿರದ ಯಶಸ್ಸು ಶ್ರೀ ಪರಿಪೂರ್ಣ ಸನಾತನ ಆಯುರ್ವೇದ ವೈದ್ಯಕೀಯ ಕಾಲೇಜಿನ ಸಮಗ್ರ ಆರೋಗ್ಯ ಸೇವೆಯ ಗುಣಮಟ್ಟವನ್ನು ಪುನಃ ಸಾಬೀತು ಮಾಡಿದೆ. ಇದೇ ಸಮಯದಲ್ಲಿ, ಈ ಕಾರ್ಯಕ್ರಮ ಆಯುರ್ವೇದ ಆರೋಗ್ಯ ಸೇವೆಯ ಲಾಭವನ್ನು ವಿವಿಧ ವೃತ್ತಿಪರ ವರ್ಗಗಳಿಗೆ ವಿಸ್ತರಿಸುವ ಪ್ರೇರಣೆಯಾಗಿದೆ.

ಉಪಸಂಹಾರ

ಭದ್ರತಾ ಪಡೆಗಳ ಆರೋಗ್ಯ ನಿರ್ವಹಣೆಯಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿಗಳ ಪಾತ್ರವನ್ನು ಉತ್ತೇಜಿಸಲು ಈ ಬಿ.ಎಸ್.ಎಫ್. ವೈದ್ಯಕೀಯ ಶಿಬಿರವು ಹೊಸ ತಾರ್ಕಿಕತೆಯನ್ನು ಸ್ಥಾಪಿಸಿದೆ. ಭದ್ರತಾ ಸಂಘಟನೆಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಜಾಗತಿಕ ವೆಲ್‌ನೆಸ್ ಮಿಷನ್ಗಳೊಂದಿಗೆ ಸಹಭಾಗಿತ್ವವನ್ನು ಬಲಪಡಿಸಲು, ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್ ಮುಂದುವರಿಯಲಿದೆ.

ಸಂಪರ್ಕ: ಶ್ರೀ ಪರಿಪೂರ್ಣ ಸನಾತನ ಆಯುರ್ವೇದ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ರಿಸರ್ಚ್ ಸೆಂಟರ್, 91, ಅರ್ಜುನಬೆಟ್ಟಹಳ್ಳಿ, ಗೊಲ್ಲಹಳ್ಳಿ ಪಂಚಾಯತ್, ಕಸಬ ಹೋಬಳಿ, ನೆಲಮಂಗಲ ತಾಲೂಕು, ಬೆಂಗಳೂರು 562123

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಚತುರ್ದಶಿ ತಿಥಿ, ಶುಕ್ಲ ಪಕ್ಷ, ಪುಷ್ಯಮಿ ನಕ್ಷತ್ರ, ರವಿ ಯೋಗ, ರಾಹುಕಾಲ ಮಧ್ಯಾಹ್ನ 3.29ರಿಂದ 4.57ರವರೆಗೆ, ಅಭಿಜಿತ್ ಲಗ್ನ ಅಪರಾಹ್ನ 12.11ರಿಂದ 12.57ರವರೆಗೆ

ಮನೆಮದ್ದು

ಖರ್ಜೂರವು ಅಗ್ನಿಮಾಂದ್ಯ, ಪಿತ್ತವಿಕಾರ, ದಾಹ, ಶೂಲ ಇತ್ಯಾದಿಗಳನ್ನು ನಿವಾರಿಸುತ್ತದೆ. ಕ್ಷಯ ಮತ್ತು ರಕ್ತಪಿತ್ತವನ್ನೂ ಗುಣಪಡಿಸುತ್ತದೆ. ಗಾಯಮಾಡಿಕೊಂಡವರು ಖರ್ಜೂರವನ್ನು ನಿಯತವಾಗಿ ಸೇವಿಸುತ್ತಿದ್ದರೆ ಪ್ರಯೋಜನಗಳುಂಟು. ಆದರೆ ಇದು ಬೇಗನೆ ಜೀರ್ಣವಾಗುವುದಿಲ್ಲ ಎಂಬುದು ಗಮನದಲ್ಲಿರಲಿ.

ಸೌಂದರ್ಯ ಸೂತ್ರ

ಪ್ರತಿದಿನವೂ ಊಟವಾದ ನಂತರ ಸೇಬುಹಣ್ಣನ್ನು ಕಚ್ಚಿ ತಿನ್ನುವುದರಿಂದ ಹಲ್ಲುಗಳು ಉಜ್ವಲವಾಗಿ ಹೊಳೆಯುವುವು. ಒಂದೊಮ್ಮೆ ಸೇಬು ಸಿಗದಿದ್ದಲ್ಲಿ, ಕೆಂಪು ಮೂಲಂಗಿ, ಕ್ಯಾರೆಟ್ ಅನ್ನು ತಿನ್ನಬಹುದು.

ದಿನ ಭವಿಷ್ಯ

ಮೇಷ: ಕಟ್ಟಡ / ನಿವೇಶನ ಖರೀದಿಗೆ ಬಂಧು-ಮಿತ್ರರಿಂದ ಆರ್ಥಿಕ ಸಹಾಯ ಪಡೆಯುವುದು ಬೇಡ. ನಿಮ್ಮ ಆರ್ಥಿಕ ಸಾಮರ್ಥ್ಯಕ್ಕೆ ಹೊಂದುವಂಥದ್ದನ್ನೇ ಖರೀದಿಸಲು ಸಂಕಲ್ಪಿಸಿ.

ವೃಷಭ: ಬಿಡುವಿನ ಸಮಯದಲ್ಲಿ 'ವರ್ಕ್ ಫ್ರಮ್ ಹೋಮ್' ಶೈಲಿಯ ದುಡಿಮೆಯ ಮಾರ್ಗವನ್ನು ನೆಚ್ಚುವುದರಿಂದ, ಸಾಲದ ಹೊರೆ ಕಡಿಮೆ ಮಾಡಿಕೊಳ್ಳಬಹುದು.

ಮಿಥುನ: ನಿಮ್ಮ ಕಚೇರಿ ಕಾರ್ಯಭಾರದ ಅಂಗವಾಗಿ ನಿಮ್ಮನ್ನು ಮತ್ತೊಂದು ಊರಿನ ಶಾಖೆಗೆ ವರ್ಗಾಯಿಸಬಹುದು. ಇದು ನಿಮ್ಮ ಕಾರ್ಯಕ್ಷಮತೆಯ ಸಾಬೀತಿಗೆ ಕಂಪನಿಯ ಮುಖ್ಯಸ್ಥರು ನೀಡಿರುವ ಅವಕಾಶವೆಂದುಕೊಳ್ಳಿ.

ಕಟಕ: ದ್ರವ ಪದಾರ್ಥಗಳ (ನೀರು, ಎಣ್ಣೆ, ಹಾಲು ಇತ್ಯಾದಿ) ಮಾರಾಟದಿಂದ ನಿಮ್ಮ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಬರುತ್ತದೆ. ಆದರೆ ಏಕಾಏಕಿ ಭಾರಿ ಮೊತ್ತ ತೊಡಗಿಸದೆ, ಹಂತಹಂತವಾಗಿ ಮುನ್ನಡೆಯಿರಿ.

ಸಿಂಹ: ನಿಮ್ಮದು ಒಳಗೆ ವಿಷವನ್ನು ಇಟ್ಟುಕೊಳ್ಳದ ಸ್ವಭಾವವಾದರೂ, ನಿಮ್ಮ ನೇರ ಮಾತು ಕೆಲವೊಮ್ಮೆ ಎದುರಿನಲ್ಲಿರುವವರಿಗೆ ಕಸಿವಿಸಿ ಉಂಟುಮಾಡಬಹುದು.

ಕನ್ಯಾ: ಯಾರೋ ಮಾಟ-ಮಂತ್ರ ಮಾಡಿಸಿಬಿಟ್ಟಿದ್ದಾರೆ ಎಂಬ ಅನವಶ್ಯಕ ತಲ್ಲಣದಿಂದ ಮೊದಲು ಹೊರಬನ್ನಿ. ಕನಿಷ್ಠಪಕ್ಷ ವಾರಕ್ಕೆ ಒಮ್ಮೆಯಾದರೂ ದೇವಸ್ಥಾನ ಅಥವಾ ಗುರುಪೀಠಗಳಿಗೆ ತೆರಳಿ ಪ್ರದಕ್ಷಿಣೆ ಹಾಕಿ.

ತುಲಾ: ಪ್ರೇಮ ವಿವಾಹಕ್ಕಿಂತ ಮನೆಯವರು ನೋಡಿ ನಿಷ್ಕರ್ಷಿಸಿದವರನ್ನು ವರಿಸುವುದು ನಿಮಗೆ ಸೂಕ್ತವಾಗಬಲ್ಲದು. ಅತಿರೇಕದ ದುಡಿಮೆಯ ಹುಕಿಗೆ ಬಿದ್ದು ಆರೋಗ್ಯವನ್ನು ಕೆಡಿಸಿಕೊಳ್ಳದಿರಿ.

ವೃಶ್ಚಿಕ: ವ್ಯಾಪಾರ -ವ್ಯವಹಾರವನ್ನು ಶುರುಮಾಡುವುದಕ್ಕಿಂತ ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಸೂಕ್ತ ನಡೆಯಾದೀತು. ಮದುವೆಯ ಬಗ್ಗೆ ಮನಸ್ಸು ಮಾಡಿರುವವರಿಗೆ ಅನುಕೂಲ ಒದಗಬಹುದು.

ಧನು: ಕಚೇರಿಯ ಎಲ್ಲ ಬಾಬತ್ತುಗಳಲ್ಲೂ ಛಾಪು ಒತ್ತಬೇಕು ಎಂಬ ಹುರುಪಿಗೆ ಕೊಂಚ ಬ್ರೇಕ್ ಹಾಕಿ. ಸಹೋದ್ಯೋಗಿಗಳು ಇದನ್ನು ಬೇರೆಯದೇ ರೀತಿಯಲ್ಲಿ ಗ್ರಹಿಸುವ ಸಾಧ್ಯತೆಯಿದೆ. ಹೊಂದಾಣಿಕೆಯೇ ಯಶಸ್ಸಿಗೆ ದಾರಿ ಎಂಬುದನ್ನು ಮರೆಯದಿರಿ.

ಮಕರ: ಇನ್ನೂ ಕೆಲವು ದಿನಗಳವರೆಗೆ ಬಾಡಿಗೆ ಮನೆಯಲ್ಲೇ ಮುಂದುವರಿಯುವುದು ಒಳ್ಳೆಯದು. 2 ತಿಂಗಳ ನಂತರ ಅನುಕೂಲ ಒದಗಲಿದೆ. ಆಗ ಸ್ವಂತ ಮನೆಯ ಕುರಿತು ವ್ಯವಸ್ಥೆ ಮಾಡಿಕೊಳ್ಳಲು ಓಡಾಡುವಿರಂತೆ.

ಕುಂಭ: ಕಬ್ಬಿಣ ಮತ್ತು ಪೇಂಟ್ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುವವರು, ಭಾರಿ ಸಾಹಸಕ್ಕೆ ಮುಂದಾಗುವ ಮೊದಲು ವಿವೇಚನೆಯಿಂದ ಹೆಜ್ಜೆಯಿರಿಸಿ. ವ್ಯವಹಾರದ ವಿಸ್ತರಣೆ ಸದ್ಯಕ್ಕೆ ಬೇಡ, ಇರುವ ಮಳಿಗೆಯಲ್ಲೇ ವ್ಯಾಪಾರ ಮುಂದುವರಿಸಿ.

ಮೀನ: ಸಂಗಾತಿಯ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡಿ. ಕಚೇರಿಗೆ ಕೆಲ ದಿನಗಳವರೆಗೆ ರಜೆ ಹಾಕಿ, ಸಂಗಾತಿಯೊಂದಿಗೆ ವಿಹಾರಕ್ಕೆ ತೆರಳಿದಲ್ಲಿ ಪರಸ್ಪರ ಬಾಂಧವ್ಯದಲ್ಲಿ ಹೊಸತನ ಮೂಡುತ್ತದೆ. ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಹುರುಪೂ ದೊರೆಯುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಮಧುರ ಸ್ಮೃತಿ

'ಸ್ವರ ಸಾಮ್ರಾಜ್ಞಿ' ಎಂದೇ ಹೆಸರಾಗಿದ್ದ ಖ್ಯಾತ ಹಿನ್ನೆಲೆ ಗಾಯಕಿ ಲತಾ ಮಂಗೇಷ್ಕರ್ ಮತ್ತು ಅವರ ಸೋದರಿ, ಗಾಯಕಿ ಉಷಾ ಮಂಗೇಷ್ಕರ್ ಅವರುಗಳು 'ಸಂಸಾನ್' ಹಿಂದಿ ಚಲನಚಿತ್ರದ ಹಾಡುಗಳ ಧ್ವನಿಮುದ್ರಣದ ವೇಳೆ ಸಂಗೀತ ನಿರ್ದೇಶಕ ಚಿತ್ರಗುಪ್ತ್ ಅವರೊಂದಿಗೆ ಸೌಹಾರ್ದ ಸಂಭಾಷಣೆಯಲ್ಲಿ ತೊಡಗಿರುವುದು. 'ಹಮ್ ತೋ ಖರಾಬ್ ಹುವೇ ಸನಮ್' ಎಂಬ ಆ ಹಾಡು ಇಂದಿಗೂ ಜನಪ್ರಿಯ. ಅಚ್ಚರಿಯ ಸಂಗತಿಯೆಂದರೆ, ಚಿತ್ರಗುಪ್ತ್ ಅವರ ಮಕ್ಕಳಾದ ಮತ್ತು ಮುಂದೆ ಸಂಗೀತ ನಿರ್ದೇಶನಕ್ಕೂ ಇಳಿದ 'ಆನಂದ್-ಮಿಲಿಂದ್' ಜೋಡಿಯ ಸ್ವರ-ಚಮತ್ಕಾರವಿದ್ದ 'ಮೇರಾ ಪತಿ ಸಿರ್ಫ್ ಮೇರಾ ಹೈ' ಹಿಂದಿ ಚಲನಚಿತ್ರದಲ್ಲಿ ಕೂಡ ಲತಾ ಮಂಗೇಶ್ಕರ್ ಹಾಡಿದ್ದುಂಟು.

▶▶ ಚಿತ್ರಕೃಪೆ: ರಾಯಿಟರ್ಸ್

ಎತ್ತರದಲ್ಲಿ ಇರುವಾಗ ಎಚ್ಚರದಿಂದ ಇರಬೇಕು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಒಬ್ಬ ರಾಜಕುಮಾರ, ಮರವನ್ನು ಹತ್ತುವ ಕಲೆಯನ್ನು ಕಲಿಯಲೆಂದು ಸಂತರೊಬ್ಬರ ಬಳಿಗೆ ಬಂದ. ಎತ್ತರವಾಗಿ ನೇರವಾಗಿ ಬೆಳೆದಿದ್ದ ಒಂದು ಮರವನ್ನು ಅವನಿಗೆ ತೋರಿಸಿದ ಸಂತರು, ''ಇದನ್ನು ಹತ್ತು'' ಎಂದು ಹೇಳಿದರು. ಅವನು ಅದನ್ನು ಕಷ್ಟಪಟ್ಟು ಹತ್ತತೊಡಗಿದ, ಸಂತರು ಸುಮ್ಮನೆ ಮರದ ಕೆಳಗೆ ಕುಳಿತರು.

ಮರವನ್ನು ಏರುತ್ತಿದ್ದಂತೆ ರಾಜಕುಮಾರ ಸ್ವಲ್ಪ ಭಯದಿಂದ ಕೆಳಗೆ ನೋಡಿದರೆ, ಸಂತರು ಸುಮ್ಮನೆ ಕಣ್ಣುಮುಚ್ಚಿ ಕುಳಿತಿದ್ದರು. ಇವನ ಕಡೆ ನೋಡುತ್ತಲೇ ಇರಲಿಲ್ಲ. ರಾಜಕುಮಾರ ಅಂತೂ ಇಂತೂ ಸಾಕಷ್ಟು ಎತ್ತರದವರೆಗೂ ಏರಿದ. ಸ್ವಲ್ಪ ಜಾರಿದರೂ ಸಾಕು ಜೀವಕ್ಕೆ ಅಪಾಯ ತಪ್ಪಿದ್ದಲ್ಲ ಎನ್ನುವಂತಿತ್ತು ಸ್ಥಿತಿ. ಅವನಿಗೆ ಜೋರಾಗಿ ಉಸಿರಾಡಲೂ ಭಯವೆನ್ನಿಸುತ್ತಿತ್ತು. ಜೋರಾಗಿ ಗಾಳಿ ಬೀಸುತ್ತಿದ್ದುದರಿಂದ, ಮರದ ಕೊಂಬೆ ಅಲ್ಲಾಡಿ ಅದರ ತುದಿಯಲ್ಲಿರುವ ತಾನೇನಾದರೂ ಸ್ವಲ್ಪ ಎಚ್ಚರ ತಪ್ಪಿದರೂ ತನ್ನ ಕಥೆ ಮುಗಿದಂತೆಯೇ ಎನಿಸಿತು ರಾಜಕುಮಾರನಿಗೆ. ಹೀಗಾಗಿ ಬಹಳ ಎಚ್ಚರಿಕೆಯಿಂದ ಏರುತ್ತಾ ಮರದ ತುದಿಯವರೆಗೂ ಬಂದೇಬಿಟ್ಟ. ಮರದ ತುದಿಯವರೆಗೂ ಹತ್ತಿದ್ದೇನೋ ಆಯಿತು, ಇನ್ನು ಬಹಳ ಹುಷಾರಾಗಿ ಅಲ್ಲಿಂದ ಕೆಳಗಿಳಿದು ಬರಬೇಕು. ರಾಜಕುಮಾರನಿಗಂತೂ ಬಹಳ ಹೆದರಿಕೆಯಾಗತೊಡಗಿತು. ಆತ ಸಂತರ ಕಡೆಗೆ ನೋಡಿದರೆ, ಅವರು ಏನೂ ಮಾತನಾಡದೆ ಕಣ್ಣು ಮುಚ್ಚಿ ಕುಳಿತಿದ್ದಾರೆ! 'ಅವರಿಗೆ ನನ್ನ ಕಡೆಗೆ ಸ್ವಲ್ಪವೂ ಗಮನವೇ ಇಲ್ಲ' ಎಂದುಕೊಂಡು ರಾಜಕುಮಾರ ತಾನೇ ಬಹಳ ಜೋಪಾನವಾಗಿ ಕೆಳಗಿಳಿಯ ತೊಡಗಿದ. ಮರದಿಂದ ನೆಲಕ್ಕೆ ಇನ್ನೇನು 15 ಅಡಿ ಅಂತರ ಇದೆ ಎನ್ನುವಾಗ ಸಂತರು, ''ನಿಧಾನವಾಗಿ, ಎಚ್ಚರದಿಂದ ಇಳಿ'' ಎಂದು ಕೂಗಿ ಹೇಳಿದರು. ಅವರ ಆ ಕಾಳಜಿಯ ದನಿಯನ್ನು ಕೇಳಿ ರಾಜಕುಮಾರನಿಗೆ ಬಹಳ ಆಶ್ಚರ್ಯವಾಯಿತು. 'ನಾನು ಅಪಾಯದ ತುದಿಯಲ್ಲಿರುವಾಗ ಏನೂ ಎಚ್ಚರಿಸದೇ ಇದ್ದವರು, ಈಗ ಏನೂ ಅಪಾಯವಿಲ್ಲದಿರುವಾಗ, ಸುಲಭವಾಗಿ-ಸುರಕ್ಷಿತವಾಗಿ ಇಳಿಯುತ್ತಿರುವಾಗ ಎಚ್ಚರಿಸುತ್ತಿದ್ದಾರಲ್ಲಾ' ಎಂದು ಅವನಿಗೆ ಸ್ವಲ್ಪ ಸಿಟ್ಟೂ ಬಂತು.

ನೆಲದ ಮೇಲೆ ಇಳಿಯುತ್ತಿದ್ದಂತೆ ರಾಜಕುಮಾರ ಕಾರಣ ಕೇಳಿದಾಗ ಸಂತರು, ''ನೀನು ಮರದ ತುದಿಯಲ್ಲಿದ್ದಾಗ ಸ್ವತಃ ಎಚ್ಚರದಿಂದ, ಜೋಪಾನವಾಗಿಯೂ ಇದ್ದೆ. ಆಗ 'ನಿಧಾನ, ಮೆಲ್ಲಗೆ' ಎಂದು ಹೇಳುವ ಅವಶ್ಯಕತೆ ಇರಲಿಲ್ಲ. ಜೀವಕ್ಕೆ ಅಪಾಯ ಜಾಸ್ತಿ ಇರುವಾಗ ಸಾಮಾನ್ಯವಾಗಿ ಎಲ್ಲರೂ ಎಚ್ಚರದಿಂದಲೇ ಇರುತ್ತೇವೆ, ಆದರೆ ಇನ್ನೇನು ಅಷ್ಟು ಅಪಾಯವಿಲ್ಲ ಎಂದಾದಾಗ ಎಚ್ಚರ ತಪ್ಪುವ ಸಾಧ್ಯತೆ ಜಾಸ್ತಿ. ನೀನು ಮರದಿಂದ ಕೆಳಗಿಳಿಯುತ್ತಿರುವಾಗ ನೆಲಕ್ಕೆ ಹತ್ತಿರವಾಗುತ್ತಿದ್ದಂತೆ ಎಚ್ಚರ ತಪ್ಪುತ್ತಿರುವುದನ್ನು ನಾನು ನೋಡಿದೆ. ಅದಕ್ಕೆಂದೇ 'ನಿಧಾನ, ಜೋಪಾನ' ಎಂದೆಲ್ಲಾ ಹೇಳಿದೆ. ಇದು ನನ್ನ ಇಡೀ ಜೀವನದ ಅನುಭವ. ನೆಲ ಹತ್ತಿರವಾಗುತ್ತಿದ್ದಂತೆ ಜನರು ಥಟ್ಟೆಂದು ಬೀಳುವುದನ್ನು ನಾನು ಬಹಳವಾಗಿ ಕಂಡಿರುವೆ. ಆದರೆ, ಎತ್ತರದಲ್ಲಿರುವಾಗ ಜನರು ಬಹಳ ಎಚ್ಚರಿಕೆಯಿಂದ, ಜಾಗೃತರಾಗಿ ಇರುತ್ತಾರೆ; ಯಾರು ಕೂಡಾ ಮೇಲಿನಿಂದ ಬೀಳುವುದಿಲ್ಲ'' ಎಂದರು.

ನಂತರ ಸಂತರು, ''ನೋಡು, ಇದನ್ನೇ ನೀನು ತಿಳಿದುಕೊಳ್ಳಬೇಕಾಗಿರುವುದು. ಈ ರೀತಿಯಾಗಿ ನೀನು ದಿನವಿಡೀ ಜಾಗೃತನಾಗಿದ್ದಲ್ಲಿ, ಧ್ಯಾನಸ್ಥ ಸ್ಥಿತಿಯಲ್ಲಿ ಇರಲು ಸಾಧ್ಯವಾಗುತ್ತದೆ. ಈ ಸ್ಥಿತಿಯಲ್ಲಿರುವಾಗಲೇ ನಮ್ಮನ್ನು ನಾವು ತಿಳಿದುಕೊಳ್ಳಲು ಸಾಧ್ಯವಾಗುವುದು'' ಎಂದರು.

ಜೀವನದಲ್ಲಿ ಶ್ರಮ ವಹಿಸಿ ಯಶಸ್ಸಿನ ದಾರಿ ಕಂಡುಕೊಂಡಾಗ, ಅಲ್ಲಿ ಅನುಕ್ಷಣವೂ ನಾವು ಜಾಗೃತರಾಗಿರಬೇಕಾಗುತ್ತದೆ. ಯಶಸ್ಸು ಸಿಕ್ಕಿತು ಎಂದು ಮೈಮರೆತ ಮರುಕ್ಷಣವೇ ಸೋಲಿನ ಪ್ರಪಾತಕ್ಕೆ ಬಿದ್ದಿರುತ್ತೇವೆ. ಯಶಸ್ಸನ್ನು ಗಳಿಸುವುದು ಸುಲಭ, ಆದರೆ ಅದನ್ನು ನಮ್ಮ ಜೀವನದಲ್ಲಿ ಉಳಿಸಿಕೊಳ್ಳಲು ಒಂದು ಧ್ಯಾನಸ್ಥ ಮನಸ್ಥಿತಿ ಇರಬೇಕು. ಎಂಥ ಸಮಯದಲ್ಲೂ ವಿವೇಚನೆಯಿಂದ ನಿರ್ಧಾರಗಳನ್ನು ತೆಗೆದುಕೊಂಡು, ಆ ನಿರ್ಧಾರಗಳ ಪರಿಣಾಮ ಏನಾಗುತ್ತದೆ ಎನ್ನುವ ಮುಂದಾಲೋಚನೆಯಿದ್ದಾಗ ಪ್ರತಿ ಹೆಜ್ಜೆಯನ್ನೂ ಜೋಪಾನವಾಗಿ ಇಡುತ್ತೇವೆ. ಇಂಥ ಜಾಗೃತ ಮನಸ್ಥಿತಿ ನಮ್ಮೆಲ್ಲರದೂ ಆಗಲಿ. ಸರ್ವೇ ಜನಾ ಸುಖಿನೋ ಭವಂತು.

ಇಲ್ಲೊಂಚೂರು ಕೇಳ್ರೀ...

● ಉಡುಪುಗಳಿಗೆ ಶಾಯಿಯ ಕಲೆ ಮೆತ್ತಿಕೊಂಡರೆ ಟೆನ್ಷನ್ ಮಾಡಿಕೊಳ್ಳಬೇಡಿ. ಕಲೆಯಿರುವ ಭಾಗವನ್ನು ಸುಮಾರು 2 ಗಂಟೆಗಳ ಕಾಲ ಹಾಲಿನಲ್ಲಿ ಮುಳುಗಿಸಿಟ್ಟು, ಬಳಿಕ ಸಾಬೂನಿನ ನೀರಿನಿಂದ ತೊಳೆದರೆ, ಕಲೆ ಮಂಗಮಾಯ!

ಪ ದ ಬಂ ಧ

1			2	■	3			4
	■	■	5			■	■	
6		■		■	7			
	■	9	■	10		■		■
■	11		■			12		■
■		■	13		■		■	14
15				■	16	■	17	
	■	■	18			■	■	
19				■	20			

ಎಡದಿಂದಬಲಕ್ಕೆ
1. ಮೋಸದ ಬಲೆಯಿದು (4)
3. ಕೊಂಕಿರುವ ಸಾಧನ ಕೊಯ್ಯಲಿಕ್ಕಿರುವುದು (4)
5. ಯಕ್ಷಿಣಿ ವಿದ್ಯೆಗೆ ಮತ್ತೊಂದು ಹೆಸರು (3)
6. ಎರಡಕ್ಷರದ ಸರೋವರ (2)
7. ಇದು ನಿಜವಾದುದು ಎಂದರ್ಥ (4)
10. ಪ್ರಾಣಿಗಳಿಗಿರುವ ಲಾಂಗೂಲ (2)
11. ವಸ್ತುವಿನ ತೂಕ, ಹೊರೆ (2)
12. ಅತಿಯಾದ ಅಕ್ಕರೆ, ಮೈಮರೆಯುವಿಕೆ ಕೂಡ ಹೌದು (2)
13. ತೋಟದ ಕೆಲಸ ಮಾಡುವವನು (2)
15. ಕೊನೆಗೆ ಮತ್ತೊಂದು ಮರ್ಯಾದೆಯನ್ನು ಕಟ್ಟಿಕೊಂಡಿರುವ ಗಾಳಿ (4)
17. ಮೀನು ಹಿಡಿಯಲು ಬಳಸುವ ಕೊಕ್ಕೆ (2)
18. ಗಂಡ ಮತ್ತು ಹೆಂಡತಿ ಒಟ್ಟಾಗಿ ಬಂದಿದ್ದಾರೆ (3)
19. ಕೈಯಲ್ಲಿ ಹಿಡಿದ ಕೋಲು (4)
20. ಬಟ್ಟೆ ಒಗೆದು ಶುಚಿಮಾಡಿಕೊಡುವವನು (4)

ಮೇಲಿನಿಂದಕೆಳಕ್ಕೆ
1. ಮತ್ತೊಬ್ಬರಿಗೆ ವಾಗ್ದಾನ ಮಾಡು ಎನ್ನುವ ಪದ (4)
2. ನಿಯಂತ್ರಿಸಲು ಹಾಕುವ ಕಡಿವಾಣ (3)
3. ಬಾಲದ ತುದಿಗೆ ಹೀಗೆ ಹೇಳುವರು (4)
4. ತಲೆ ಕೆಳಗಾಗಿರುವ ಟಿಸಿಲು (3)
8. ದೇವರ ಮೂರ್ತಿಗೆ ಮತ್ತೊಂದು ಹೆಸರು (3)
9. ಒಳಗೆ /ಹೊರಗೆ ಹೋಗಲು ಬೇಕಾದ ಬಾಗಿಲು (2)
10. ರಾತ್ರಿ ಸಂಚರಿಸುವ ಕಪ್ಪಡಿ (3)
11. ಅಕ್ಕನ ಗಂಡನ ಮಧ್ಯೆ ಇರುವ ಪರಶುರಾಮ (3)
12. ವಂಚನೆಗೆ ಎರಡಕ್ಷರ ಸಾಕು (2)
13. ಗುಣಮಟ್ಟ ತಿಳಿಯಲು ಬೇಕಾದ ಅಳತೆಗೋಲು (4)
14. ಮನಸ್ಸಿನೊಳಗೆ ಉಂಟಾದ ಸಂಕಟ (4)
15. ಗೆದ್ದವರಿಗೆ ಸಿಗುವ ಬಿಲ್ಲೆ (3)
16. ಆರಂಭದ್ದಲ್ಲ, ಕೊನೆಯದ್ದು (3)

ಉತ್ತರಗಳು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ



▶▶ ಕೃಪೆ: ವ್ಯಂಗ್ಯಚಿತ್ರಕಾರ ಮಂಜುಲ್

ಹಲ್ ಬಿಡಿ ಶಾಸನ

ಯಾರು ಬುದ್ಧಿವಂತ..?

ಶಂಕರ್‌ನಾಗ್ ಅಭಿನಯದ 'ಗೀತಾ' ಚಿತ್ರದ ಹಾಡಿನಲ್ಲಿ ಬರುವಂತೆ, ಮಲ್ಲಿಗೆಪುರ ಮತ್ತು ಸಂಪಿಗೆಪುರ ಎಂಬ ಹೆಸರಿನ ಎರಡು ಊರುಗಳಿದ್ದವು. ಎರಡೂ ಊರಿನವರಿಗೂ ಪರಸ್ಪರರನ್ನು ಕಂಡರೆ ಆಗುತ್ತಿರಲಿಲ್ಲ, ಏನಾದರೊಂದು ಕಾರಣಕ್ಕೆ ಜಗಳ ಶುರುವಾಗಿ, ಹೊಡೆದಾಟ-ಬಡಿದಾಟ-ರಕ್ತಪಾತಕ್ಕೆ ಅದು ತಿರುಗುತ್ತಿತ್ತು.

ಹೀಗಿರುವಾಗ, ಮಲ್ಲಿಗೆಪುರದ ಒಂದಷ್ಟು ಜನರು ಸಂಪಿಗೆಪುರದ ಸಿಂಗ್ರೀಗೌಡರ ಮನೆ ಮೇಲೆ ದಾಳಿಮಾಡಲೆಂದು ಕೈಯಲ್ಲಿ ಒಂದಷ್ಟು ಕಲ್ಲುಗಳನ್ನು ಹಿಡಿದುಕೊಂಡು ಬಂದರು. ಇದರ ನಿರೀಕ್ಷೆಯಿಲ್ಲದ ಸಿಂಗ್ರೀಗೌಡರ ಮನೆಯ ಆಳುಗಳು, ''ಇವತ್ತು, ನಮ್ ಧಣಿಗೆ ಸರಿಯಾಗೇ ಪೂಜೆ ಆಗೋಹಂಗೆ ಕಾಣ್ತದೆ..'' ಎಂದು ಗೊಣಗಿಕೊಳ್ಳುತ್ತಾ, ಮರಗಳ ಮರೆಯಲ್ಲಿ ಅಡಗಿಕೊಂಡರು. ''ಏಯ್ ಸಿಂಗ್ರೀಗೌಡ, ಬಾರೋ ಆಚೆಗೇ...'' ಎಂದು ಮಲ್ಲಿಗೆಪುರದ ಜನರು ಅಬ್ಬರಿಸಿದರು. ಆ ದನಿ ಕೇಳಿದ್ದೇ ತಡ, ಮನೆಯ ಮುಂಬಾಗಿಲನ್ನು ಒದ್ದುಕೊಂಡು ಸಿಂಗ್ರೀಗೌಡರು ಹೊರಬಂದರು. ಆದರೆ ಅವರು ಮೈಗೆಲ್ಲಾ ಸೊಳ್ಳೆ ಪರದೆಯನ್ನು ಸುತ್ತಿಕೊಂಡು ಬಂದಿದ್ದು ಕಂಡು, ದಾಳಿ ಮಾಡಲು ಬಂದವರೆಲ್ಲಾ ಅರೆಕ್ಷಣ ಏನೂ ಗೊತ್ತಾಗದೆ ಗೊಂದಲಕ್ಕೀಡಾಗಿ ಸುಮ್ಮನೆ ನಿಂತುಬಿಟ್ಟರು. ಈ ಅವಕಾಶವನ್ನು ಬಳಸಿಕೊಂಡ ಸಿಂಗ್ರೀಗೌಡರು, ತಮ್ಮ ಕೈಯಲ್ಲಿದ್ದ ಬಂದೂಕಿನಿಂದ ಆಕಾಶಕ್ಕೆ ಒಂದು ಗುಂಡು ಹಾರಿಸಿದ್ದೇ ತಡ, ಅವರ ಮೇಲೆ ದಾಳಿಮಾಡಲು ಬಂದವರೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಿಹೋದರು.

ಮರಗಳ ಮರೆಯಲ್ಲಿದ್ದುಕೊಂಡೇ ಇದನ್ನೆಲ್ಲಾ ನೋಡುತ್ತಿದ್ದ ಸಿಂಗ್ರೀಗೌಡರ ಆಳುಗಳು ಅಲ್ಲಿಂದ ಓಡಿಬಂದು, ''ಅಲ್ ಕಣ್ ಬುದ್ಧೀ, ಸುಮ್ನೇ ತುಪಾಕಿ ಹಿಡ್ಕಂಡು ಬರೋ ಬದ್ಲು, ಮೈಗೆಲ್ಲಾ ಸೊಳ್ಳೆಪರದೆ ಯಾಕೆ ಸುತ್ಕಂಡು ಬಂದ್ರಿ?'' ಅಂತ ಕೇಳಿದರು. ಅದಕ್ಕೆ ಸಿಂಗ್ರೀಗೌಡರು ತಮ್ಮ ಗಿರಿಜಾಮೀಸೆಯನ್ನೊಮ್ಮೆ ತಿರುವುತ್ತಾ, ''ಈ ಸೊಳ್ಳೆ ಪರದೇಲಿ ಒಂದು ಸೊಳ್ಳೆನೂ ನುಗ್ಗೋಕ್ಕೆ ಆಗಲ್ಲ. ಅಂಥದ್ರಲ್ಲಿ ಅವರು ನನ್ನ ಮೇಲೆ ಎಸೆಯೋಕ್ಕೆ ತಂದಿದ್ದ ಕಲ್ಲುಗಳು ತೂರ್ತವೇನ್ಲಾ? ಅದಕ್ಕೇ ಸೊಳ್ಳೆಪರದೆ ಸುತ್ತಿಕೊಂಡು ಬಂದಿದ್ದೆ'' ಎಂದರು. ಸಿಂಗ್ರೀಗೌಡರ ಜಾಣತನಕ್ಕೆ ಆಳುಗಳೆಲ್ಲಾ 'ಶಭಾಷ್' ಎಂದು ಚಪ್ಪಾಳೆ ತಟ್ಟಿದರು.

ಇದಾದ ಒಂದು ವಾರದ ನಂತರ, ಮಲ್ಲಿಗೆಪುರದ ಅದೇ ಪುಂಡರು ಮತ್ತೆ ಸಿಂಗ್ರೀಗೌಡರ ಮನೆ ಮೇಲೆ ದಾಳಿಮಾಡಲು ಬಂದರು. ಆದರೆ ಅವತ್ತು ಸಿಂಗ್ರೀಗೌಡರು ಮನೆಯಲ್ಲಿರಲಿಲ್ಲ, ಅವರ ಸುಪುತ್ರ ಬಂಗಾರಿಗೌಡ ರೂಮಿನಲ್ಲಿ ಪಾಚ್ಕೊಂಡಿದ್ದ. ಮನೆಮೇಲೆ ದಾಳಿಗೆ ಬಂದಿರೋದು ಗೊತ್ತಾಗಿ, ಅಪ್ಪನಂತೆಯೇ ಮನೆಯ ಮುಂಬಾಗಿಲನ್ನು ಒದ್ದುಕೊಂಡು ಬಂಗಾರಿಗೌಡ ಹೊರಬಂದ. ಆದರೆ ಆತ ಕೇವಲ ಒಂದು ನಿಕ್ಕರ್ ಧರಿಸಿ ಮಿಕ್ಕಂತೆ ಬರಿಮೈಯಲ್ಲಿದ್ದ. ಇನ್ನೇನು ಆತ ತುಪಾಕಿ ಕೈಗೆತ್ತಿಕೊಳ್ಳಬೇಕು ಅನ್ನುವಷ್ಟರಲ್ಲಿ, ಅವನ ಕಡೆಗೇ ರಾಶಿಗಟ್ಟಲೆ ಕಲ್ಲುಗಳು ತೂರಿಬಂದವು ಮಲ್ಲಿಗೆಪುರದ ಪುಂಡರಿಂದ. ಗಾಯಗೊಂಡ ಬಂಗಾರಿಗೌಡನನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಅಲ್ಲಿ ಅವನನ್ನು ನೋಡಲು ಬಂದ ಆಳುಗಳು, ''ಏನಿದು ಚಿಕ್ಕಧಣಿ? ನಿಮ್ಮಪ್ಪ ಕಡೇಪಕ್ಷ ಸೊಳ್ಳೆಪರದೇನಾದರೂ ಮೈಗೆ ಸುತ್ಕೊಂಡು ಬಂದಿದ್ರು, ಅವರಿಗೆ ಅಷ್ಟಾದ್ರೂ ಬುದ್ಧಿಯಿತ್ತು. ನೀವು ಹಂಗೇ ಬರಿಮೈಯಲ್ಲಿ ಬರೋದಾ? ಅದಕ್ಕೇ ನಿಮ್ ಕಡೆ ಕಲ್ಲುಗಳು ತೂರಿಬಂದ್ವು'' ಎಂದು ತಮಗೆ ತೋಚಿದಂತೆ ಹೇಳಿದ್ರು.

ಈ ಮಾತು ಕೇಳುತ್ತಿದ್ದಂತೆಯೇ ಬಂಗಾರಿಗೌಡ ನೋವಿನಲ್ಲೂ ಕಿರುಚಿಕೊಂಡ: ''ಕಳ್ ನನ್ ಮಕ್ಕಳಾ... ನಾನೆಲ್ಲೋ ಬರೀ ಮೈಯಲ್ಲಿದ್ದೇ? ಸೊಳ್ಳೆ ಓಡಿಸೋ 'ಓಡೋಮಸ್ ಕ್ರೀಮ್'ನ ಮೈಗೆಲ್ಲಾ ಹಚ್ಕೊಂಡು ಬಂದಿದ್ದೆ ಕಣ್ರೋ....''

ಒಂದ್ಸಲ ಏನಾಯ್ತಪ್ಪಾ ಅಂದ್ರೇ...

ಗುರುವೇ ನಿನ್ನಾಟ ಬಲ್ಲವರಾರು?!

ಚಂದ್ರಶೇಖರತನಯ

ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದಲ್ಲಿ ಉಪನ್ಯಾಸ ನೀಡಲು ಒಮ್ಮೆ ಅವರು ತೆರಳಬೇಕಾಗಿ ಬಂತು. ಸರಿ, ಟ್ರೇನು ಹಿಡಿದು ಹೊರಟರು. ಅದು ಹೊಳಲ್ಕೆರೆ ನಿಲ್ದಾಣವನ್ನು ತಲುಪುವ ವೇಳೆಗೆ ಮುಂಜಾನೆ 5ರ ಚುಮುಚುಮು ಚಳಿಯ ವಾತಾವರಣ. ಅಧ್ಯಾಪಕರು ತಾವು ತಂದಿದ್ದ ಒಂದೆರಡು ಲಗೇಜುಗಳನ್ನು ಪ್ಲಾಟ್‌ಫಾರಂ ಮೇಲೆ ಹಾಕಿ, ಟ್ರೇನಿನಿಂದ ಇಳಿದು ಒಮ್ಮೆ ಸುತ್ತಮುತ್ತ ನೋಡಿದರು. ಹೊಸ ಜಾಗ, ಹೊಸ ವಾತಾವರಣ. ಹೊಳಲ್ಕೆರೆಯಿಂದ ಮಲ್ಲಾಡಿಹಳ್ಳಿಗೆ ಬಸ್ ಹಿಡಿದು ಹೋಗಬೇಕು, ಬಸ್ ನಿಲ್ದಾಣವೆಲ್ಲಿದೆ ಎಂದು ಯಾರನ್ನಾದರೂ ವಿಚಾರಿಸೋಣ ಎಂದು ಅಧ್ಯಾಪಕರು ಲೆಕ್ಕಾಚಾರ ಹಾಕುತ್ತಿದ್ದರು.

ಅಷ್ಟರಲ್ಲಿ, ಮೋಟು ಅಂಗಿ ಮತ್ತು ಚಲ್ಲಣವನ್ನು ಧರಿಸಿ ಕೈಯಲ್ಲಿ ಬ್ಯಾಟರಿ ಹಿಡಿದುಕೊಂಡಿರುವ ಆಸಾಮಿಯೊಬ್ಬ ತಮ್ಮ ಕಡೆಗೇ ನಡೆದು ಬರುತ್ತಿರುವುದು ಅಧ್ಯಾಪಕರಿಗೆ ಕಂಡಿತು. ಪ್ರಾಯಶಃ ಕೂಲಿಯವನಿರಬೇಕು ಎಂದು ಭಾವಿಸಿದ ಅಧ್ಯಾಪಕರು, ''ಲೋ ಅಣ್ಣಾ, ನಾನು ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮಕ್ಕೆ ಹೋಗಬೇಕು ಕಣಪ್ಪಾ. ನಾನು ಈ ಊರಿಗೆ ಹೊಸಬ. ನನ್ನ ಲಗೇಜುಗಳನ್ನು ಕೊಂಚ ಬಸ್ ನಿಲ್ದಾಣದವರೆಗೆ ತಂದುಕೊಡ್ತೀಯಾ? ದುಡ್ಡು ಕೊಡ್ತೀನಿ ಕಣಯ್ಯಾ...'' ಎಂದರು. ಅದಕ್ಕೆ ಆ ವ್ಯಕ್ತಿ, ''ಅಯ್ನೋರೇ, ತಾವು ಮೈಸೂರಿನಿಂದ ಬಂದವರು ಅಲ್ವೇ? ಬಸ್ ನಿಲ್ದಾಣಕ್ಕೆ ಹೋಗೋ ಅವಶ್ಯಕತೆಯಿಲ್ಲ, ಬನ್ನಿ ಆಶ್ರಮದಿಂದ ನಿಮಗಾಗಿ ಕಾರು ಬಂದಿದೆ'' ಎಂದು ಹೇಳಿ ಅಧ್ಯಾಪಕರ ಲಗೇಜುಗಳನ್ನೆಲ್ಲಾ ಸುಲಲಿತವಾಗಿ ಎತ್ತಿ, ಹೆಗಲಿಗೊಂದನ್ನು ಏರಿಸಿ ಎರಡೂ ಕೈಯಲ್ಲಿ ಒಂದೊಂದನ್ನು ಹಿಡಿದುಕೊಂಡು ಮುಂದೆ ಸಾಗಿದ. ಅಷ್ಟೂ ಲಗೇಜುಗಳು ಕಾರಿನ ಡಿಕ್ಕಿಯನ್ನು ಸೇರಿಕೊಂಡವು. ಮಲ್ಲಾಡಿಹಳ್ಳಿಗೆ ತಲುಪುವುದು ಹೇಗೆಂಬ ಆಲೋಚನೆಯಲ್ಲಿದ್ದ ಅಧ್ಯಾಪಕರಿಗೆ ತಮ್ಮ ಕೆಲಸ ಸುಸೂತ್ರವಾಗಿ ನೆರವೇರಿದ್ದು ಕಂಡು ನೆಮ್ಮದಿ-ಸಂತಸವಾದವು.

ಕಾರು ಹೊರಟಿತು. ಆ ಸೇವಕನು ಅಧ್ಯಾಪಕರನ್ನು ಉದ್ದೇಶಿಸಿ, ''ರೈಲಿನ ಪ್ರಯಾಣ ಆರಾಮದಾಯಕವಾಗಿತ್ತೇ, ರಾತ್ರಿ ಚೆನ್ನಾಗಿ ನಿದ್ರೆ ಬಂತೇ? ಮಾರ್ಗಮಧ್ಯದಲ್ಲಿ ಏನೂ ತೊಂದರೆಯಾಗಲಿಲ್ಲ ತಾನೇ?'' ಎಂದೆಲ್ಲಾ ಕಾಳಜಿಪೂರ್ವಕ ದನಿಯಲ್ಲಿ ಯೋಗಕ್ಷೇಮವನ್ನು ವಿಚಾರಿಸಿದ. ಅದಕ್ಕೆಲ್ಲಾ 'ಹೂಂ'ಗುಟ್ಟಿದ ಅಧ್ಯಾಪಕರು ನಂತರ ತಮ್ಮ ಸ್ವಭಾವ ಸಹಜ ಗಂಭೀರ ದನಿಯಲ್ಲೇ, ''ಏನಯ್ಯಾ ನಿನ್ನ ಹೆಸರು? ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಶ್ರೀರಾಘವೇಂದ್ರ ಸ್ವಾಮಿಗಳು ಕ್ಷೇಮವೇ? ಆಶ್ರಮ ತಲುಪುತ್ತಿದ್ದಂತೆಯೇ ಅವರನ್ನು ನಾನು ನೋಡಬಹುದಾ? ಯಾಕೆಂದರೆ ಅವರು ಯಾವಾಗಲೂ ಸಂಚಾರದಲ್ಲಿರುತ್ತಾರೆ ಎಂದು ಕೇಳ್ಪಟ್ಟೆ...'' ಎಂದು ಕೇಳಿದರು. ಅದಕ್ಕೆ ಆ ಸೇವಕ, ''ಸ್ವಾಮೀ, ನನ್ನ ಹೆಸರು ತಿರುಕಪ್ಪ ಅಂತ. ಮುಂಜಾನೆ 3 ಗಂಟೆಗೆಲ್ಲಾ ಎದ್ದುಬಿಡುವ ಸ್ವಾಮಿಗಳು ತಮ್ಮ ನಿತ್ಯಕರ್ಮಗಳು, ವ್ಯಾಯಾಮ ಇತ್ಯಾದಿಗಳನ್ನೆಲ್ಲಾ ಮುಗಿಸಿ ನಂತರ ಹೊರಬರುತ್ತಾರೆ. ನೀವು ಆಶ್ರಮ ತಲುಪುತ್ತಿದ್ದಂತೆಯೇ ಅವರೇ ನಿಮ್ಮನ್ನು ಭೇಟಿಯಾಗುತ್ತಾರೆ'' ಎಂದ.

ಅಷ್ಟು ಹೊತ್ತಿಗೆ ಆಶ್ರಮ ಬಂತು. ಕಾರಿನಿಂದ ಇಳಿಯುತ್ತಲೇ ಅಧ್ಯಾಪಕರು ''ಸ್ವಾಮಿಗಳ ದರ್ಶನ ಮಾಡಬೇಕು'' ಎಂದು ಹೇಳುತ್ತಿದ್ದರೂ ತಿರುಕಪ್ಪ, ''ಅಯ್ನೋರೇ, ಬಿಸಿನೀರಿದೆ, ಮೊದಲು ಮುಖ ತೊಳೆದುಕೊಳ್ಳಿ. ಕಾಫಿ ಕಳಿಸುತ್ತೇನೆ'' ಎನ್ನುತ್ತಾ ಅವರ ಮಾತು ಕೇಳಿಸಲಿಲ್ಲವೇನೋ ಎಂಬಂತೆ ಅಲ್ಲಿಂದ ತೆರಳಿದ. ಅಧ್ಯಾಪಕರಿಗೋ ಅಯೋಮಯ! ವಿಧಿಯಿಲ್ಲದೆ, ಆತ ಹೇಳಿದಂತೆಯೇ ಮುಖ ತೊಳೆದುಕೊಳ್ಳುವಷ್ಟರಲ್ಲಿ ಹಬೆಯಾಡುತ್ತಿರುವ ಕಾಫಿ ಪ್ರತ್ಯಕ್ಷವಾಯಿತು, ಅದರ ಹಿಂದೆಯೇ ತಿರುಕಪ್ಪ! ಮನದಣಿಯೆ ಕಾಫಿ ಹೀರಿದ ಅಧ್ಯಾಪಕರು, ''ಅಯ್ಯಾ, ಇನ್ನಾದರೂ ಸ್ವಾಮಿಗಳ ದರ್ಶನವಾಗಲಿ...'' ಎನ್ನುತ್ತಿದ್ದರೂ, ಅವರ ಮಾತನ್ನು ಅಷ್ಟಕ್ಕೇ ತುಂಡರಿಸಿದ ತಿರುಕಪ್ಪ, ''ಅಯ್ನೋರೇ, ನಿಮ್ಮ ಸ್ನಾನ-ತಿಂಡಿ-ತೀರ್ಥ ಮುಗಿಯಲಿ, ಅವರೇ ಬಂದು ನಿಮ್ಮನ್ನು ಕಾಣುತ್ತಾರೆ'' ಎಂದು ಹೇಳಿ ನಕ್ಕ. ಅವೆಲ್ಲವೂ ಮುಗಿಯುತ್ತಿದ್ದಂತೆ ಹಾಜರಾದ ತಿರುಕಪ್ಪ, ''ಬನ್ನಿ ಬುದ್ಧೀ, ಸ್ವಾಮಿಗಳ ಬಳಿಗೆ ಹೋಗೋಣ'' ಎನ್ನುತ್ತಾ ಅಧ್ಯಾಪಕರೊಂದಿಗೆ ಹೆಜ್ಜೆಹಾಕಿದ. ಆಶ್ರಮದ ಆವರಣದಲ್ಲಿ ಸಿಗುವ ವಿವಿಧ ಪಠ್ಯಕ್ರಮದ ಶಾಲಾ-ಕಾಲೇಜುಗಳು, ಶಿಕ್ಷಕರ ವಾಸಸ್ಥಳಗಳು, ಗೋಶಾಲೆ, ತಪೋವನ, ಗರಡಿಮನೆ, ಅನ್ನಪೂರ್ಣಾಲಯ, ದುರ್ಗಾಲಯ ಇತ್ಯಾದಿಗಳನ್ನು ತೋರಿಸುತ್ತಾ ತಿರುಕಪ್ಪ ಸಾಗಿದ. ತರುವಾಯ, ಸಭಾಂಗಣವನ್ನು ತೋರಿಸಿ, ''ಇಲ್ಲೇ ನಿಮ್ಮ ಉಪನ್ಯಾಸ ನಡೆಯೋದು'' ಎಂದ.

ಅಧ್ಯಾಪಕರಿಗೋ ರಾಘವೇಂದ್ರ ಸ್ವಾಮಿಗಳನ್ನು ನೋಡುವ ಹಂಬಲ. ಆದರೆ ತಿರುಕಪ್ಪ ಮಾತ್ರ ತೋರಿಸದೆ ಆಟವಾಡಿಸುತ್ತಿದ್ದ. ಅಷ್ಟರಲ್ಲಿ ಮಹಿಳೆಯೊಬ್ಬಳು ಧಾವಿಸಿ ಬಂದು, ''ಬುದ್ಧೀ, ನನ್ನ ಗಂಡನ ಪ್ರಾಣ ಉಳಿಸಿಬಿಟ್ಟಿರಿ'' ಎನ್ನುತ್ತಾ ತಿರುಕಪ್ಪನಿಗೆ ರಸ್ತೆಯಲ್ಲೇ ಅಡ್ಡಬಿದ್ದು ನಮಸ್ಕರಿಸಿದಳು. ಆಗ ಅಧ್ಯಾಪಕರು, 'ಅರೆ, ಈತನನ್ನು ಸೇವಕ ಎಂದುಕೊಂಡುಬಿಟ್ಟಿದ್ದೆನಲ್ಲಾ? ಪ್ರಾಯಶಃ ಈತ ಇಲ್ಲಿಯ ಆಯುರ್ವೇದ ವೈದ್ಯನಿರಬೇಕು' ಎಂದು ತಮ್ಮಲ್ಲೇ ಹೇಳಿಕೊಂಡರು. ಮುಂದೆ ತಿರುಕಪ್ಪ ಕಾರ್ಯಾಲಯವನ್ನು ಪ್ರವೇಶಿಸಿ ಕುರ್ಚಿಯೊಂದರ ಮೇಲೆ ಕುಳಿತು, ಎದುರಿನ ಕುರ್ಚಿಯಲ್ಲಿ ಕೂರುವಂತೆ ಅಧ್ಯಾಪಕರಿಗೆ ವಿನಂತಿಸಿದ. ಆಶ್ರಮದ ಸಿಬ್ಬಂದಿಯೊಬ್ಬ ಒಂದಷ್ಟು ಕಾಗದ-ಪತ್ರಗಳನ್ನು ತಂದು ತಿರುಕಪ್ಪನ ಮುಂದಿರಿಸಿದ. ಅವುಗಳ ಪರಿಶೀಲನೆಯಲ್ಲಿ ತಿರುಕಪ್ಪ ವ್ಯಸ್ತನಾಗಿದ್ದುದು ಕಂಡ ಅಧ್ಯಾಪಕರು, 'ಬಹುಶಃ, ಈತ ಆಶ್ರಮದ ಮ್ಯಾನೇಜರ್ ಇರಬಹುದು' ಎಂದು ಭಾವಿಸಿದರು. ನಂತರ ಧೈರ್ಯಮಾಡಿ, ''ನಾನು ಸ್ವಾಮಿಗಳನ್ನ, ನನ್ನ ಗುರುಗಳನ್ನ ಭೇಟಿಯಾಗಬೇಕಿತ್ತಲ್ಲಾ...'' ಎಂದು ವಿನಯಪೂರ್ವಕವಾಗಿ ನುಡಿದರು ಅಧ್ಯಾಪಕರು. ಆಗ ಕುರ್ಚಿಯಲ್ಲಿ ಕೂತಿದ್ದ ತಿರುಕಪ್ಪ, ''ಗುರುವನ್ನು ನೋಡಬೇಕೇ? ಇಷ್ಟೂ ಹೊತ್ತು ಅವರು ನಿಮ್ಮೊಂದಿಗೇ ಹೆಜ್ಜೆಹಾಕುತ್ತಾ ಬಂದ್ರಲ್ಲಾ ಅಯ್ನೋರೇ?!'' ಎನ್ನುತ್ತಾ ತುಂಟನಗೆ ಬೀರಿದ.

''ಅಂದ್ರೇ...?'' ಎಂದು ಉದ್ಗರಿಸಿದ ಅಧ್ಯಾಪಕರಿಗೆ ದಿಟದರ್ಶನವಾಗಿ, ಕುರ್ಚಿಯಿಂದೆದ್ದು ತಿರುಕಪ್ಪನಿಗೆ ದೀರ್ಘದಂಡ ನಮಸ್ಕಾರ ಮಾಡಿದರು. ತಾವು ರೈಲಿನಿಂದ ಇಳಿದ ನಂತರ ತಮ್ಮ ಲಗೇಜುಗಳನ್ನು ಹೊತ್ತು ಕಾರಿನವರೆಗೆ ತಂದಿದ್ದಲ್ಲದೆ, ಮಾರ್ಗದುದ್ದಕ್ಕೂ ಯೋಗಕ್ಷೇಮ ವಿಚಾರಿಸಿಕೊಂಡು, ಆಶ್ರಮಕ್ಕೆ ಬಂದ ನಂತರ ಊಟೋಪಚಾರಗಳ ಬಗ್ಗೆಯೂ ನಿಗಾವಹಿಸಿದ, ಆಶ್ರಮದ ಸಮಗ್ರ ಪರಿಚಯ ಮಾಡಿಸಿದ ನಂತರವಷ್ಟೇ ತನ್ನ ಪರಿಚಯವನ್ನು ಸೂಚ್ಯವಾಗಿ ಹೇಳಿಕೊಂಡ ತಿರುಕಪ್ಪನೇ ಸದರಿ ಅನಾಥ ಸೇವಾಶ್ರಮದ ಶ್ರೀ ರಾಘವೇಂದ್ರ ಸ್ವಾಮಿಗಳು ಎಂದರಿವಾಗಿ ಅಧ್ಯಾಪಕರಲ್ಲಿ ಪಶ್ಚಾತ್ತಾಪದ ಭಾವ ಮೂಡಿತು. ಒಂದು ಮೋಟು ಅಂಗಿ ಮತ್ತು ಚಲ್ಲಣವನ್ನು ಧರಿಸಿದ್ದ ರಾಘವೇಂದ್ರ ಸ್ವಾಮಿಗಳ ಸರಳತೆ ಅಧ್ಯಾಪಕರನ್ನು ಕೆಲಕಾಲ ದಿಕ್ಕುತಪ್ಪಿಸಿತ್ತು!

ಗುರುವಿನಾಟವನ್ನು ಬಲ್ಲವರಾರು? ಆತ ರೂಪ, ಅಂತಸ್ತು, ಸೌಂದರ್ಯ, ಪ್ರತಿಷ್ಠೆ, ದುಡ್ಡು ಮುಂತಾದ ಅಲಂಕಾರಗಳ ಹಿಡಿತಕ್ಕೆ ಸಿಗುವವನಲ್ಲ. ತನ್ನೆಡೆಗೆ ಒಂದು ಹೆಜ್ಜೆ ಹಾಕಿದವರ ಜತೆ ಅನುಗಾಲವೂ ಹೆಜ್ಜೆ ಹಾಕುವ ಈ ಸಹೃದಯಿ ನಮ್ಮ ಬದುಕಿನಲ್ಲಿ ಯಾವ ರೂಪದಲ್ಲಿ ಬೇಕಾದರೂ ಎದುರಾಗಬಹುದು. ಹೀಗಾಗಿ, ಕಣ್ಣುಗಳನ್ನು, ಅದರಲ್ಲೂ ಒಳಗಣ್ಣುಗಳನ್ನು 'ನಿಜಾರ್ಥದಲ್ಲಿ' ತೆರೆದಿಟ್ಟುಕೊಂಡಿರೋಣ!

ಅತ್ಯಾಧುನಿಕ ಅಪಾರ್ಥಕೋಶ...

'ಅಪಾರ್ಥ'ಸಾರಥಿ
naadigru@gmail.com

- **ಮಂಗ:** ತಾನು ಮೊಸರನ್ನವನ್ನು ಪುಷ್ಕಳವಾಗಿ ತಿಂದು, ಎಂಜಲು ಕೈಯನ್ನು ಮೇಕೆಯ ಬಾಯಿಗೆ ಒರೆಸುವ ಒಂದು ಪ್ರಾಣಿ.
- **ಕತ್ತೆ:** ಸರಕಾರಿ ಕಚೇರಿಗಳಲ್ಲಿ ಕೆಲವೊಮ್ಮೆ ನಮ್ಮ ಕೆಲಸಗಳು ಬೇಗನೆ ಆಗಬೇಕಾದಾಗ, ಇದರ ಕಾಲನ್ನು ಹಿಡಿಯಬೇಕಾಗುತ್ತದೆ!
- **ಪಾಣಿ'ಗ್ರಹಣ':** ಮದುವೆಯಾದ ದಿನದಿಂದ ಪುರುಷನೊಬ್ಬನನ್ನು ಆವರಿಸುವ 'ಮಂಕು'.
- **ವಿನಯ'ವಂತಿಕೆ':** ವಂತಿಕೆ ಪಡೆಯುವಾಗ ಅಥವಾ ಸಾಲ ಮಂಜೂರಾತಿಗೂ ಮುನ್ನ ಸಾಲಗಾರನ ಮುಖದಲ್ಲಿ ಇರಬೇಕಾದ ಬಲವಂತದ ಮರ್ಯಾದೆ.
- **ಕಲ್ಲು:** ಒಲ್ಲದ ಗಂಡನಿಗೆ 'ಮೃದು' ಮೊಸರಿನಲ್ಲೂ ಸಿಗುವ ಒಂದು 'ಕಠಿಣ' ವಸ್ತು.
- **ಮರೆಗುಳಿ ಪ್ರೊಫೆಸರ್:** ಮುಂಜಾನೆಯ ವಾಕಿಂಗ್ ಮುಗಿಸಿ ಮನೆಗೆ ಬಂದ ನಂತರ, ವಾಕಿಂಗ್ ಸ್ಟಿಕ್ ಅನ್ನು ಮಂಚದ ಮೇಲೆ ಮಲಗಿಸಿ, ತಾನು ಲಕ್ಷಣವಾಗಿ ಮನೆಯ ಮೂಲೆಯಲ್ಲೋ ಬಾಗಿಲ ಹಿಂಭಾಗದಲ್ಲೋ ನಿಲ್ಲುವ ಸಹೃದಯಿ.
- **ಅಪ್ರಬುದ್ಧ:** ಪ್ರಿಯತಮೆಗೆ ಪ್ರೇಮಪತ್ರವನ್ನು ಕಳಿಸುವಾಗ, ಅದನ್ನು ಹೊತ್ತೊಯ್ಯುವ ಆಕೆಯ ತಂಗಿಗೆ ಚಾಕೊಲೇಟ್ ಕೊಡಿಸಲು ಮರೆಯುವವ.
- **ಅಶ್ವಘೋಷ:** ಇಂದಿನ ರೇಸ್‌ನಲ್ಲಿ ಇಂಥದೇ 'ಕುದುರೆ' ಗೆಲ್ಲುತ್ತದೆ ಎಂದು ಘಂಟಾ'ಘೋಷ'ವಾಗಿ ಹೇಳುವ ಸಾಮರ್ಥ್ಯವುಳ್ಳವ.
- **ಹಾಲುಹಸುಳೆ:** ತನ್ನಪ್ಪ ಊರಲ್ಲಿ ಇಲ್ಲದ ಕಾರಣ ಹಾಲು ಮಾರಲು ಬರುವ ಶಿಶು.
- **ಅಕ್ಷಯ ತೃತೀಯ:** ಸಾಲ ಮಾಡಿಯಾದರೂ ಬಂಗಾರವನ್ನು ಕೊಳ್ಳಲೇಬೇಕಾದ ಒಂದು 'ತಿಥಿ'!
- **ಕ್ಷೀರಸಾಗರ ಶಯನ:** ಹಾಲಿನ ಡೈರಿಯೊಳಗಿನ ಕಲ್ಲುಬೆಂಚಿನ ಮೇಲೆ ಮಲಗಿದವನು.

ಇಲ್ಲೊಂಚೂರು ಕೇಳ್ರೀ...

● ಬಾಗಿಲುಗಳ ಹಿಡಿಕೆ ಮತ್ತು ಬೋಲ್ಟ್‌ಗಳಿಗೆ ತಿಂಗಳಲ್ಲಿ ಒಂದೆರಡು ಬಾರಿಯಾದರೂ ಟರ್ಪೆಂಟೈನ್ ಹಾಗೂ ನಿಂಬೆರಸವನ್ನು ಬೆರೆಸಿ ಹಚ್ಚುವುದರಿಂದ ಅವು ಉಜ್ವಲವಾಗಿ ಹೊಳೆಯುತ್ತವೆ.

ಸಮಾಚಾರ ಸಣ್ಣದಲ್ಲ

ಮೂರನೇ ಪಂದ್ಯ: ರಾಹುಲ್‌ಗೆ ಕೊಕ್?

ದೆಹಲಿ: ಇಂಗ್ಲೆಂಡ್ ವಿರುದ್ಧ ಆರಂಭಿಕ ಎರಡೂ ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಭಾರತ ತಂಡದ ವಿಕೆಟ್ ಕೀಪರ್ ಕೆಎಲ್ ರಾಹುಲ್ ಟೀಕೆಗಳಿಗೆ ಗುರಿಯಾಗಿದ್ದಾರೆ. ರಿಷಭ್ ಪಂತ್ ಅವರ ಬದಲು ವಿಕೆಟ್ ಕೀಪರ್ ಆಡಿದ್ದ ಕೆ.ಎಲ್ ರಾಹುಲ್, ಮೊದಲನೇ ಏಕದಿನ ಪಂದ್ಯದಲ್ಲಿ ಎರಡು ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಎರಡನೇ ಏಕದಿನ ಪಂದ್ಯದಲ್ಲಿ 10 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಆರಂಭಿಕ ಎರಡೂ ಪಂದ್ಯಗಳಲ್ಲಿ ಟೀಂ ಇಂಡಿಯಾ ಗೆಲುವು ಪಡೆದರೂ ಕೆಎಲ್ ರಾಹುಲ್ ಬ್ಯಾಟಿಂಗ್ ಪ್ರದರ್ಶನದ ಬಗ್ಗೆ ನಾಯಕ ರೋಹಿತ್ ಶರ್ಮಾ ಹಾಗೂ ಹೆಡ್ ಕೋಚ್ ಗೌತಮ್ ಗಂಭೀರ್‌ಗೆ ಅಸಮಾಧಾನವಿದೆ. ಐಸಿಸಿ ಚಾಂಪಿಯನ್ಸ್ ಟ್ರೋಫಿ ಕಾರಣದಿಂದಾಗಿ ಕೆಎಲ್ ರಾಹುಲ್ ಅವರು ಫಾರ್ಮ್‌ಗೆ ಮರಳಬೇಕೆಂದು ಟೀಮ್ ಮ್ಯಾನೇಜ್‌ಮೆಂಟ್ ನಿರೀಕ್ಷೆ ಮಾಡಿತ್ತು. ಆದರೆ ಅವರು ಆರಂಭಿಕ ಎರಡು ಪಂದ್ಯಗಳಲ್ಲಿ ತಮ್ಮ ನಿರೀಕ್ಷೆಯನ್ನು ಹುಸಿ ಮಾಡಿದ್ದಾರೆ. ಹಾಗಾಗಿ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಕೆಎಲ್ ರಾಹುಲ್ ಬದಲು ವಿಕೆಟ್ ಕೀಪರ್ ಸ್ಥಾನಕ್ಕೆ ರಿಷಭ್ ಪಂತ್‌ಗೆ ಅವಕಾಶ ನೀಡಿದರೂ ಅಚ್ಚರಿ ಇಲ್ಲ, ಚಾಂಪಿಯನ್ಸ್ ಟ್ರೋಫಿಗೂ ಭಾರತ ತಂಡಕ್ಕೆ ಇನ್ನುಳಿದಿರವುದು ಒಂದೇ 1 ಏಕದಿನ ಪಂದ್ಯ ಮಾತ್ರ. ನಾಗ್ಪುರದಲ್ಲಿ ನಡೆದಿದ್ದ ಮೊದಲನೇ ಏಕದಿನ ಪಂದ್ಯದಲ್ಲಿ ಕೆಎಲ್ ರಾಹುಲ್ 9 ಎಸೆತಗಳಲ್ಲಿ ಕೇವಲ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದ್ದರು. 2ನೇ ಏಕದಿನ ಪಂದ್ಯದಲ್ಲಿ 14 ಎಸೆತಗಳನ್ನು ಎದುರಿಸಿ ಕೇವಲ 10 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕಕ್ಕೆ ಬೆಳ್ಳಿ ಪದಕ

ಡೆಹ್ರಾಡೂನ್: ಕರ್ನಾಟಕದ ಮಹಿಳೆಯರ ರಿಲೆ ತಂಡವು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದಿದೆ. ಅಥ್ಲೆಟಿಕ್ಸ್ ಸ್ಪರ್ಧೆಯ ಮೂರನೇ ದಿನವಾದ ಸೋಮವಾರ ರಾಜ್ಯಕ್ಕೆ ದಕ್ಕಿದ ಏಕೈಕ ಪದಕ ಇದಾಗಿದೆ. ದೀಕ್ಷಿತಾ ಗೌಡ, ಅರ್ಪಿತಾ ಇ.ಬಿ, ಜ್ಯೋತಿಕಾ ಮತ್ತು ಪ್ರಾಂಜಾ ಅವರನ್ನು ಒಳಗೊಂಡ ಕರ್ನಾಟಕ ತಂಡವು 3 ನಿಮಿಷ 43 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ಪಂಜಾಬ್ ವನಿತೆಯರು ಚಿನ್ನ ಗೆದ್ದರೆ, ಹರಿಯಾಣ ತಂಡವು ಕಂಚನ್ನು ತನ್ನದನ್ನಾಗಿರಿಸಿತು. ಒಂದೇ ದಿನ ನಡೆದ ಎಂಟು ವಿಭಾಗಗಳ ಸ್ಪರ್ಧೆಗಳಲ್ಲಿ ಪಂಜಾಬ್ ಅಥ್ಲೀಟ್‌ಗಳು ಮೂರು ಚಿನ್ನದ ಪದಕಗಳನ್ನು ಬಾಚಿಕೊಂಡರೆ, ಮಧ್ಯಪ್ರದೇಶ, ಉತ್ತರಪ್ರದೇಶ, ಸರ್ವೀಸಸ್, ತಮಿಳುನಾಡು ಮತ್ತು ಅತಿಥೇಯ ಉತ್ತರಾಖಂಡದ ಸ್ಪರ್ಧಿಗಳು ತಲಾ ಒಂದು ಒಂದೊಂದು ಬಂಗಾರದ ಪದಕ ಗೆದ್ದರು.

ರಣಜಿ 3ನೇ ದಿನ: ಮುಂಬೈ ಪರ ಹಿರಿಯರ ಮಿಂಚು, ಶಾರ್ದೂಲ್‌ಗೆ 6 ವಿಕೆಟ್, ವಿದರ್ಭಕ್ಕೆ ಠಾಕರೆ ನೆರವು

ವಿದರ್ಭ, ಗುಜರಾತ್, ಮುಂಬೈ ಸೆಮಿ ಸಮೀಪಕ್ಕೆ

ರಣಜಿ ಸೆಮಿಫೈನಲ್ ಪ್ರವೇಶ ಪಡೆಯಲು ಎಂಟು ರಾಜ್ಯ ತಂಡಗಳ ನಡುವೆ ಬಿರುಸಿನ ಹಣಾಹಣಿ ಮುಂದುವರಿದಿದ್ದು, ಮೂರನೇ ದಿನವಾದ ಸೋಮವಾರ ಗುಜರಾತ್, ಮುಂಬೈ, ವಿದರ್ಭ ಮತ್ತು ಜಮ್ಮು ಮತ್ತು ಕಾಶ್ಮೀರ ಕ್ರಮವಾಗಿ ಸೌರಾಷ್ಟ್ರ, ಹರಿಯಾಣ, ತ.ನಾಡು, ಕೇರಳ ವಿರುದ್ಧ ಮೇಲುಗೈ ಸಾಧಿಸಿವೆ.

ವಿದರ್ಭ ಬಿಗಿ ಹಿಡಿತ

ನಾಗ್ಪುರ: ಇಲ್ಲಿ ನಡೆಯುತ್ತಿರುವ ರಣಜಿ ಕ್ವಾರ್ಟರ್ ಫೈನಲ್‌ನಲ್ಲಿ ಮೂರನೇ ದಿನ ವಿದರ್ಭ ತಂಡ ತಮಿಳುನಾಡು ವಿರುದ್ಧ 297 ರನ್‌ಗಳ ಬೃಹತ್ ಮುನ್ನಡೆ ದಾಖಲಿಸಿದೆ. ವಿದರ್ಭ ಪರ ಬೌಲರ್ ಆದಿತ್ಯ ಠಾಕರೆ ತಮಿಳುನಾಡಿನ ಐದು ವಿಕೆಟ್ ಕಬಳಿಸಿದರು. ಈ ಮೂಲಕ ಕನ್ನಡಿಗ ಕರುಣ್ ನಾಯರ್ ನೇತೃತ್ವದ ವಿದರ್ಭ ತಂಡ ಸೆಮಿಫೈನಲ್ ಪ್ರವೇಶಿಸುವುದು ಬಹುತೇಕ ಖಚಿತವಾಗಿದೆ.

ಆರು ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿ ಮೂರನೇ ದಿನದ ಆಟ ಮುಂದುವರಿಸಿದ ತಮಿಳುನಾಡು ಆದಿತ್ಯ ಠಾಕರೆ ದಾಳಿಗೆ ತತ್ತರಿಸಿ 225 ರನ್‌ಗಳಿಗೆ ಪತನ ಕಂಡಿತು. ಎರಡನೇ ಇನ್ನಿಂಗ್ಸ್ ಆರಂಭಿಸಿದ ವಿದರ್ಭ, ಐದು ವಿಕೆಟ್ ನಷ್ಟಕ್ಕೆ 169 ರನ್ ದಾಖಲಿಸಿ ಸುಸ್ಥಿತಿಯಲ್ಲಿದೆ. ಮೊದಲ ಇನ್ನಿಂಗ್ಸ್ ನಲ್ಲಿ 122 ರನ್ ದಾಖಲಿಸಿದ್ದ ನಾಯಕ ಕರುಣ್ ನಾಯರ್ ಎರಡನೇ ಇನ್ನಿಂಗ್ಸ್ ನಲ್ಲಿ 29 ರನ್‌ಗಳಿಗೆ ಔಟಾಗಿ ನಿರಾಶೆ ಅನುಭವಿಸಿದರು. ಆದರೆ ಯಶ್ ದುಬೆ ಮತ್ತು ಹರ್ಷ ದುಬೆ ತಲಾ 55 ಮತ್ತು 29 ರನ್‌ಗಳೊಂದಿಗೆ ನಾಲ್ಕನೇ ದಿನಕ್ಕೆ ಆಟ ಉಳಿಸಿಕೊಂಡಿದ್ದಾರೆ.



ಆದಿತ್ಯ ಠಾಕರೆ

ಮೊದಲ ಇನಿಂಗ್ಸ್ : ವಿದರ್ಭ: 353; ತಮಿಳುನಾಡು: 64.3 ಓವರುಗಳಲ್ಲಿ 225 (ಪ್ರದೋಷ್ ರಂಜನ್ ಪಾಲ್ 48, ಸೋನು ಯಾದವ್ 32; ಯಶ್ ಠಾಕೂರ್ 78ಕ್ಕೆ2. ಆದಿತ್ಯ ಠಾಕ್ರೆ 34ಕ್ಕೆ 5, ನಚಿಕೇತ್ ಭೂತೆ 54ಕ್ಕೆ 2): ಎರಡನೇ ಇನಿಂಗ್ಸ್ : ವಿದರ್ಭ: 62 ಓವರುಗಳಲ್ಲಿ 5 ವಿಕೆಟ್‌ಗೆ 169 (ಕರುಣ್ ನಾಯರ್ 29. ಯಶ್ ರಾಥೋಡ್ ಔಟಾಗದೇ 55, ಹರ್ಷ ದುಬೆ ಔಟಾಗದೇ 29; ಸಾಯಿ ಕಿಶೋರ್ 47ಕ್ಕೆ 2).

ಗುಜರಾತ್ ಮುನ್ನಡೆ

ಉರ್ವಿಲ್ ಪಟೇಲ್

ರಾಜ್‌ಕೋಟ್: ಇಲ್ಲಿನ ನಿರಂಜನ್ ಶಾ ಸ್ಟೇಡಿಯಂನಲ್ಲಿ ನಡೆದ ಸೌರಾಷ್ಟ್ರ ವಿರುದ್ಧದ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಉರ್ವಿಲ್ ಪಟೇಲ್ ಅವರ ಅದ್ಭುತ ಶತಕ (140)ದ ಬಲದಿಂದ ಗುಜರಾತ್‌ನ 540 ರನ್‌ಗಳ ಬೃಹತ್ ಮೊತ್ತ ದಾಖಲಿಸಿದೆ.

ಮೊದಲ ಇನಿಂಗ್ಸ್ : ಸೌರಾಷ್ಟ್ರ: 216, ಗುಜರಾತ್: 159.1 ಓವರುಗಳಲ್ಲಿ 511 (ಜಯಮಿತ್ ಪಟೇಲ್ 103. ಉರ್ವಿಲ್ ಪಟೇಲ್ 140. ಚಿಂತನ್ ಗಜ 39, ರವಿ ಬಿಷ್ಣೋಯಿ 45: ಚಿರಾಗ್ ಜಾನಿ 67ಕ್ಕೆ 4. ಧರ್ಮೇಂದ್ರಸಿನ್ಹಾ ಜಡೇಜ 120ಕ್ಕೆ 5), ಎರಡನೇ ಇನಿಂಗ್ಸ್ : ಸೌರಾಷ್ಟ್ರ: 16 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 33.

ಸೌರಾಷ್ಟ್ರ ತಂಡದ 216 ರನ್‌ಗಳ ಮೊದಲ ಇನ್ನಿಂಗ್ಸ್ ಉತ್ತರವಾಗಿ ಗುಜರಾತ್ ಉರ್ವಿಲ್ ಅವರ 140 ರನ್, ಜಯಮೀತ್ ಪಟೇಲ್ ಅವರ 103 ರನ್ ಜೊತೆಯಾಟದಿಂದ 511 ರನ್ ಗಳಿಸಿ ಸೆಮಿಫೈನಲ್‌ಗೆ ಹತ್ತಿರವಾಗಿದೆ. ಎರಡನೇ ಇನ್ನಿಂಗ್ಸ್ ನಲ್ಲಿ ಸೌರಷ್ಟ್ರ 295 ರನ್‌ಗಳ ಹಿನ್ನಡೆಯೊಂದಿಗೆ ಮೂರನೇ ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೆ 33 ರನ್ ಗಳಿಸಿದೆ. ಉರ್ವಿಲ್ ಪಾಲಿಗೆ ಇದು ಒಂಬತ್ತು ರಣಜಿ ಪಂದ್ಯಗಳಲ್ಲಿ ಮೊದಲ ಶತಕವಾಗಿದೆ. ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ 28 ಮತ್ತು 36 ಎಸೆತಗಳಲ್ಲಿ ಶತಕಗಳನ್ನು ಬಾರಿಸಿ ಅವರು ಸುದ್ದಿಯಾಗಿದ್ದರು.

ಕಾಶ್ಮೀರ ಮೇಲುಗೈ

ಪುಣೆ: ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿನ ಮೂರನೇ ದಿನದಂದು ಕೇರಳ 9 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ ಹಿನ್ನಡೆಯಲ್ಲಿದೆ. ಜಮ್ಮು- ಕಾಶ್ಮೀರದ 280 ರನ್‌ಗಳ ಮೊದಲ ಇನ್ನಿಂಗ್ಸ್‌ಗೆ ಉತ್ತರವಾಗಿ ಮೂರನೇ ದಿನ ಆಟ ಆರಂಭಿಸಿದ ಕೇರಳಕ್ಕೆ ಜಮ್ಮು- ಕಾಶ್ಮೀರದ ವೇಗಿ ಸೀಮರ್ ಔಕಿಬ್ ನಬಿ ಮರ್ಮಾಘಾತ ನೀಡಿದರು. 28 ವರ್ಷದ ನಬಿ 19 ಓವರ್‌ಗಳಲ್ಲಿ 36 ರನ್‌ಗಳಿಗೆ 5 ವಿಕೆಟ್ ಪಡೆದು ಕೇರಳದ ನಾಲ್ವರು ಅಗ್ರ ಕ್ರಮಾಂಕದ ಆಟಗಾರರನ್ನು ಪೆವಿಲಿಯನ್‌ಗೆ ಕಳುಹಿಸಿದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ನಬಿ ಎಂಟನೇ ಬಾರಿ ಐದು ವಿಕೆಟ್ ಸಾಧನೆ ಮಾಡಿದರು. ಇದಕ್ಕೂ ಮುನ್ನ 8 ವಿಕೆಟ್‌ಗೆ 228 ರನ್‌ಗಳಿಂದ ದಿನದಾಟವನ್ನು ಪುನರಾರಂಭಿಸಿದ ಜಮ್ಮು- ಕಾಶ್ಮೀರ ಬೌಲರ್ ನಬಿ ಅವರ ಉಪಯುಕ್ತ 32 ರನ್ ಮತ್ತು ಮತ್ತು ಉಮರ್ ನಜೀರ್ ಮಿರ್ ಅವರ 14 ರನ್‌ಗಳ ನೆರವಿನಿಂದ 52 ರನ್‌ಗಳನ್ನು ಸೇರಿಸಿ ಆಲೌಟ್ ಆಯಿತು. ಇದಕ್ಕೂ ಮುನ್ನ ಜಮ್ಮು ಮತ್ತು ಕಾಶ್ಮೀರ ನಾಯಕ ಪರಾಸ್ ಡೋಗ್ರಾ ಅವರ 73 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದ್ದರು.

ಔಕಿಬ್ ನಬಿ

ಮೊದಲ ಇನಿಂಗ್ಸ್ : ಜಮ್ಮು ಮತ್ತು ಕಾಶ್ಮೀರ: 85 ಓವರುಗಳಲ್ಲಿ 280 (ಎಂ.ಡಿ.ನಿಧೀಶ್ 75ಕ್ಕೆ 6): ಕೇರಳ: 85 ಓವರುಗಳಲ್ಲಿ 281 (ಜಲಜ್ ಸಕ್ಸೇನಾ 67, ಸಲ್ಮಾನ್ ನಜೀರ್ 112: ಔಕಿಬ್ ನಬಿ 53ಕ್ಕೆ 6, ಯುಧ್‌ವೀರ್ ಸಿಂಗ್ 78ಕ್ಕೆ2, ಸಾಹಿಲ್ ಲೂತ್ರ 41ಕ್ಕೆ2): ಎರಡನೇ ಇನಿಂಗ್ಸ್ : ಜಮ್ಮು ಮತ್ತು ಕಾಶ್ಮೀರ: 57 ಓವರುಗಳಲ್ಲಿ 3 ವಿಕೆಟ್‌ಗೆ 180 (ವಿಕ್ರಾಂತ್ ಶರ್ಮಾ 37, ಪರಾಸ್ ಡೋಗ್ರಾ ಔಟಾಗದೇ 73, ಕನ್ನಯ್ಯ ವಾಧ್ವಾನ್ ಔಟಾಗದೇ 42: ಎಂ.ಡಿ.ನಿಧೀಶ್ 45ಕ್ಕೆ 2

ಶಾರ್ದೂಲ ಬಲ

ಶಾರ್ದೂಲ್

ಕೋಲ್ಕತ್ತಾ: ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಮತ್ತೊಂದು ರಣಜಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮುಂಬೈ ತಂಡ ಶಾರ್ದೂಲ್ ಠಾಕೂರ್ ಅವರ 6 ವಿಕೆಟ್ ಸಾಧನೆ ಮತ್ತು ಅಜಿಂಕ್ಯ ರಹಾನೆ, ಸೂರ್ಯಕುಮಾರ್ ಯಾದವ್ ಅವರ 129 ರನ್‌ಗಳ ಜತೆಯಾಟದ ನೆರವಿನಿಂದ ಎರಡನೇ ಇನ್ನಿಂಗ್ಸ್‌ನಲ್ಲಿ ಹರಿಯಾಣ ವಿರುದ್ಧ 292 ರನ್‌ಗಳ ಮುನ್ನಡೆ ಸಾಧಿಸಿದೆ.

ಮೊದಲ ಇನ್ನಿಂಗ್ಸ್ ಆರಂಭಿಸಿದ ಹರಿಯಾಣ 2ನೇ ದಿನದಂತ್ಯಕ್ಕೆ ನಾಯಕ ಅಂಕಿತ್ ಕುಮಾರ್ ಅವರ 136 ರನ್‌ಗಳ ನೆರವಿನಿಂದ 5 ವಿಕೆಟ್‌ಗೆ 263 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿತ್ತು. ಆದರೆ ಮೂರನೇ ದಿನ ಹರಿಯಾಣ ತಂಡ ಶಾರ್ದೂಲ್ ಠಾಕೂರ್ ಅವರ ದಾಳಿಗೆ ತತ್ತರಿಸಿ 301 ರನ್‌ಗಳಿಗೆ ಸರ್ವ ಪತನ ಕಂಡಿತು. ಎರಡನೇ ಇನ್ನಿಂಗ್ಸ್ ಆರಂಭಿಸಿದ ಮುಂಬೈಗೆ ಆರಂಭಿಕ ಆಯುಷ್ ಮಹತ್ರೆ ಮತ್ತು ಸಿದ್ದೇಶ್ ಲಾಡ್ ತಲಾ 31 ಮತ್ತು 43 ರನ್‌ಗಳ ಕೊಡುಗೆ ನೀಡಿದರು.

ಮೊದಲ ಇನಿಂಗ್ಸ್ : ಮುಂಬೈ: 315; ಹರಿಯಾಣ: 84.5 ಓವರುಗಳಲ್ಲಿ 301 (ಅಂಕಿತ್ ಕುಮಾರ್ 136, ಯಶವರ್ಧನ್ ದಲಾಲ್ 36; ಶಾರ್ದೂಲ್ ಠಾಕೂರ್ 58ಕ್ಕೆ 6): ಎರಡನೇ ಇನಿಂಗ್ಸ್ : ಮುಂಬೈ: 67 ಓವರುಗಳಲ್ಲಿ 4 ವಿಕೆಟ್‌ಗೆ 278 (ಸಿದ್ದೇಶ್ ಲಾಡ್ 43, ಅಜಿಂಕ್ಯ ರಹಾನೆ ಬ್ಯಾಟಿಂಗ್ 88, ಸೂರ್ಯಕುಮಾರ್ ಯಾದವ್ 70, ಶಿವಂ ದುಬೆ ಬ್ಯಾಟಿಂಗ್ 30: ಅನುಜ್ ಟಕ್ರಾಲ್ 61ಕ್ಕೆ2).

ನಾಲ್ಕನೇ ವಿಕೆಟ್‌ಗೆ ಜತೆಯಾದ ಹಿರಿಯ ಆಟಗಾರರಾದ ಅಜಿಂಕ್ಯ ರಹಾನೆ, ಸೂರ್ಯಕುಮಾರ್ ಯಾದವ್ ಹಾಲಿ ಚಾಂಪಿಯನ್ ಪ್ರಾಬಲ್ಯವನ್ನು ಪ್ರದರ್ಶಿಸಿದರು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 129 ರನ್‌ಗಳ ಜೊತೆಯಾಟವನ್ನು ನಡೆಸಿದರು. 86 ಬಾಲ್‌ಗಳಲ್ಲಿ 70 ರನ್ ಬಾರಿಸಿದ ಸೂರ್ಯಕುಮಾರ್ ಔಟಾಗುವ ಮುನ್ನ ತಮ್ಮ ಫಾರ್ಮ್ ಕಂಡುಕೊಂಡರು. 142 ಬಾಲ್‌ಗಳಲ್ಲಿ 88 ರನ್‌ಗಳಿಸಿರುವ ಅಜಿಂಕ್ಯ ರಹಾನೆ ನಾಲ್ಕನೇ ದಿನಕ್ಕೆ ತಮ್ಮ ಆಟವನ್ನು ಉಳಿಸಿಕೊಂಡಿದ್ದಾರೆ.

ವಿಟಾಕೀಸ್

ಟೀಸರ್‌ನಲ್ಲಿ ಮನಗೆದ್ದ ಮಂಜುನಾಥ

ಇತ್ತೀಚೆಗೆ ಎಲ್ಲರನ್ನು ಅಗಲಿದ ನಿರ್ದೇಶಕ ಗುರುಪ್ರಸಾದ್ ಎದ್ದೇಳು ಮಂಜುನಾಥ 2 ಚಿತ್ರವನ್ನು ನಿರ್ದೇಶಿಸಿ ದ್ದರು. ಈ ಚಿತ್ರ ಇದೇ 21 ರಂದು ಬಿಡುಗಡೆಯಾಗಲಿದೆ. ಎದ್ದೇಳು ಮಂಜುನಾಥ ಸಿನಿಮಾದ ಮೂಲಕವೇ ಗುರುಪ್ರಸಾದ್ ಪ್ರಸಿದ್ಧಿ ಪಡೆದಿದ್ದರು. ಆ ಯಶಸ್ಸಿನ ಖುಷಿಯಲ್ಲಿ ಎರಡನೇ ಭಾಗವನ್ನು ನಿರ್ದೇಶನ ಮಾಡಿದ್ದರು. ಅದು ಬಿಡುಗಡೆಯಾಗುವುದಕ್ಕೂ ಮುನ್ನವೇ ಅವರು ದೂರವಾಗಿರುವುದರಿಂದ, ಚಿತ್ರದ ನಿರ್ಮಾಪಕರು ತಾವೇ ಮುಂದೆ ನಿಂತು ಸಿನಿಮಾವನ್ನು ತೆರೆಗೆ ತರಲು ನಿರ್ಧರಿಸಿದ್ದಾರೆ.

ಸಿನಿಮಾ ಬಿಡುಗಡೆಗೂ ಮುನ್ನ ಟ್ರೇಲರ್ ರಿಲೀಸ್ ಮಾಡೋದು ವಾಡಿಕೆ. ಆದರೆ ಅದನ್ನು ಕೊಂಚ ಮಟ್ಟಿಗೆ ಬ್ರೇಕ್ ಮಾಡಿ, ಟೀಸರ್ ರೂಪದಲ್ಲಿ ಚಿತ್ರದ ತುಣುಕುಗಳನ್ನು ಹರಿಬಿಡಲು ಚಿತ್ರತಂಡ ಪ್ಲಾನ್ ಮಾಡಿಕೊಂಡಿದೆ. ಇತ್ತೀಚೆಗಷ್ಟೇ ಈ ಚಿತ್ರದ ಕಿತ್ತೋದ ಪ್ರೇಮ... ಎಂಬ ಹಾಡನ್ನು ಬಿಡುಗಡೆ ಮಾಡಿದ್ದ ಮಂಜುನಾಥನ ತಂಡ, ಇದೀಗ ಟೀಸರ್ ರಿಲೀಸ್ ಮಾಡಲು ಮುಂದಾಗಿದೆ. ಹೇಗಿದ್ದರೂ ಮುಂದಿನ ವಾರ ತೆರೆಕಾಣುತ್ತಿರುವುದರಿಂದ ಮೂರು ದಿನಕ್ಕೊಂದರಂತೆ ಟೀಸರ್ ಬಿಡುಗಡೆ ಮಾಡಲು ತಯಾರಿ ನಡೆಸಿದೆ. ಈ ಚಿತ್ರದಲ್ಲಿ ಗುರುಪ್ರಸಾದ್ ಪ್ರದಾದ್ ಅವರೇ ನಾಯಕನಾಗಿ ನಟಿಸಿದ್ದು ರಚಿತಾ ಮಹಾಲಕ್ಷ್ಮಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಮಿಕ್ಕಂತೆ ಶರತ್ ಲೋಹಿತಾಶ್ವ, ಚೈತ್ರಾ, ಆಚಾರ್, ವಿಘ್ನೇಶ್ ಕಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ಅಶೋಕ್ ಸಾಮ್ರಾಟ್ ಛಾಯಾಗ್ರಹಣ, ಅನೂಪ್ ಸೀಳಿನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಬೆಳ್ಳಿತೆರೆಗೆ ಮೋಕ್ಷಿತಾ

ಬಿಗ್‌ಬಾಸ್ ಮನೆಗೆ ಹೋಗಿ ಬಂದ ಮೇಲೆ ಹಲವರ ಅದೃಷ್ಟವೇ ಬದಲಾಗಿದೆ. ಚಿತ್ರರಂಗದಲ್ಲಿ ಬೇಡಿಕೆಯೂ ಇದೆ. ಅಂತೆಯೇ ಈ ಬಾರಿ ಬಿಗ್‌ಬಾಸ್ ಮನೆಯಲ್ಲಿದ್ದ ಮೋಕ್ಷಿತಾ ಪೈ ಅಲ್ಲಿಂದ ಹೊರಬಂದ ಮೇಲೆ ಅದೃಷ್ಟವೇ ಬದಲಾ ಗಿದೆ. ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸಿ ಮನಗೆದ್ದಿದ ಮೋಕ್ಷಿತಾ, ಪ್ರೇಕ್ಷಕರಿಗೆ ಪಾರು ಎಂತಲೇ ಪರಿಚಯ. ಈಗ ಅದೇ ಪಾರು ಬೆಳ್ಳಿತೆರೆಗೂ ಎಂಟ್ರಿಕೊಡುತ್ತಿದ್ದಾರೆ. ಹೌದು, ವಿ.ಧನುಷ್ ನಿರ್ದೇಶಿಸುತ್ತಿರುವ ಮಿಡ್ಲುಕ್ಲಾಸ್ ರಾಮಾಯಣ ಚಿತ್ರ ದಲ್ಲಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಇಲ್ಲಿ ನಾಯಕಿಯ ಪಾತ್ರಕ್ಕೂ ಸಾಕಷ್ಟು ಒತ್ತು ನೀಡಿದ್ದು, ಮೋಕ್ಷಿತಾ ಚಿತ್ರದುದ್ದಕ್ಕೂ ಕಂಗೊಳಿಸಲಿದ್ದಾರಂತೆ. ಕಾಮಿಡಿ ಡ್ರಾಮಾ ಜಾನರ್‌ನ ಈ ಚಿತ್ರದಲ್ಲಿ ನವಿರಾದ ಲವ್ ಸ್ಟೋರಿಯೂ ಬೆರೆತಿದ್ದು, ವೇಣುಗೌಡ ನಾಯಕ ನಾಗಿ ನಟಿಸುತ್ತಿದ್ದಾರೆ. ಉಳಿದಂತೆ ವೀಣಾ ಸುಂದರ್, ಹುಲಿ ಕಾರ್ತಿಕ್, ತುಕಾಲಿ ಸಂತು ಹೀಗೆ ಹಲವರು ಮಿಡ್ಲು ಕ್ಲಾಸ್ ರಾಮಾಯಣ ಚಿತ್ರದಲ್ಲಿ ನಟಿಸಲಿದ್ದಾರೆ. ಅಂಜ ನಾದ್ರಿ ಪ್ರೊಡಕ್ಷನ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ. ಇದಿಷ್ಟೇ ಅಲ್ಲ, ಮೋಕ್ಷಿತಾಗೆ ಕೆಲವು ಧಾರಾವಾಹಿ ಗಳಲ್ಲಿಯೂ ನಟಿಸಲು ಅವಕಾಶಗಳು ಅರಸಿ ಬರುತ್ತಿವೆ. ಇದರ ಜತೆಗೆ ಹಲವು ಸಿನಿಮಾಗಳ ಕಥೆಗಳನ್ನು ಕೇಳಿ ಮೆಚ್ಚಿದ್ದಾರೆ. ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ. ಹಾಗಾಗಿ ಈ ವರ್ಷ ಪಾರು ಬೆಳ್ಳಿತೆರೆಯಲ್ಲಿಯೂ ಮಿಂಚಲಿದ್ದಾರೆ.

ದೇವಿ ಆರಾಧನೆಗೆ ಹೊರಟ ವಿನಯ್

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಹೊಸತನದ ಕಥೆಗಳತ್ತ ಹೊರಳಿದ್ದಾರೆ. ಪೆಪೆ ಬಳಿಕ ಅವರ ಗೆಟಪ್ ಕೂಡ ಬದಲಾಗಿದೆ. ಈಗ ವಿನಯ್‌ಗಾಗಿ ನಟ ದುನಿಯಾ ವಿಜಯ್ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. ಸಿಟಿ ಲೈಸ್ಟ್ ಶೀರ್ಷಿಕೆಯಲ್ಲಿ ಮೂಡಿಬರಲಿರುವ ಈ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ. ತಲೆಯ ಮೇಲೆ ಮಾರಮ್ಮನ ವಿಗ್ರಹ ಹೊತ್ತ ವಿನಯ್, ಕೈಯಲ್ಲಿ ಚಾವುಟಿ ಹಿಡಿದು ಗಂಭೀರ ನೋಟ ಬೀರಿದ್ದಾರೆ. ಮೋನೀಷಾ ವಾದ್ಯ ಬಾರಿಸುತ್ತಿರುವ ಲುಕ್ ಗಸಮನಸೆಳೆಯುತ್ತಿದೆ. ಇದನ್ನು ನೋಡಿದರೆ ಸಿಟಿ ಲೈಟ್ಸ್ ಅನಾಧಿಕಾಲದಿಂದಲೂ ಮಾರಮ್ಮನನ್ನು ಹೊತ್ತು ಆರಾಧಿಸುತ್ತಿರುವ ಸಮುದಾಯದ ಕಥೆ ಎಂಬುದು ಸ್ಪಷ್ಟವಾಗುತ್ತದೆ. ಸಾಮಾನ್ಯರ ಬದುಕು ಬವಣೆಯ ಸ್ಟೋರಿಯೂ ಚಿತ್ರದಲ್ಲಿದೆ ಎಂಬುದು ತಿಳಿಯುತ್ತದೆ.

ಪೆಪೆ ಚಿತ್ರದ ಸಂದರ್ಶನದ ವೇಳೆ ದುನಿಯಾ ವಿಜಯ್ ಈ ಚಿತ್ರದ ಬಗ್ಗೆ ಚರ್ಚಿಸಿದ್ದರು. ಬಳಿಕ ಚಿತ್ರದ ಒನ್ ಲೈನ್ ಸ್ಟೋರಿ ಹೇಳಿದ್ದರು. ಅದನ್ನು ಕೇಳಿದ ಮೇಲೆ ಸ್ಟೋರಿ ಬಿಡದೆ ಕಾಡಿತು. ಬೆಂಗಳೂರಿಗೆ ಬದುಕು ಕಟ್ಟಿಕೊಳ್ಳಲು ಸಾವಿರಾರು ಜನ ಬರುತ್ತಾರೆ. ಅದರಂತೆ ನಾನು ಹಾಗೂ ನಾಯಕಿ ಮಹಾನಗರಕ್ಕೆ ಬರುತ್ತೇವೆ. ಇಲ್ಲಿಗೆ ಬಂದ ಮೇಲೆ ನಮ್ಮ ಬದುಕು ಹೇಗೆ ಬದಲಾಗುತ್ತದೆ ಎಂಬುದೇ ಚಿತ್ರದ ಕಥೆ.

-ವಿನಯ್ ರಾಜ್‌ಕುಮಾರ್ ನಟ

ಪೆಪೆ ಚಿತ್ರದ ಸಂದರ್ಭದಲ್ಲಿಯೇ ದುನಿಯಾ ವಿಜಯ್, ವಿನಯ್‌ಗಾಗಿ ಸಿನಿಮಾ ನಿರ್ದೇಶನ ಮಾಡುವುದಾಗಿ ಹೇಳಿದ್ದರು. ಅಂತೆಯೇ ಈಗ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ವಿಜಯ್ ಪುತ್ರಿ ಮೋನಿಷಾ ಈ ಚಿತ್ರದಲ್ಲಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದು, ಈ ಚಿತ್ರದ ಮೂಲಕ ಚಂದನವಕ್ಕೆ ಎಂಟ್ರಿಯಾಗುತ್ತಿದ್ದಾರೆ. ಸದ್ಯ ಸಿಟಿ ಲೈಟ್ಸ್ ಚಿತ್ರದ ಮುಹೂರ್ತ ಬಂಡೆ ಮಹಾಕಾಳಿ ದೇವಾಲಯದಲ್ಲಿ ನೆರವೇರಿದೆ. ರಾಘವೇಂದ್ರ ರಾಜ್‌ಕುಮಾರ್, ಮಂಗಳಾ ರಾಘವೇಂದ್ರ ರಾಜ್‌ಕುಮಾರ್, ಯುವರಾಜ್ ಕುಮಾರ್ ಹೀಗೆ ಹಲವರು ಮುಹೂರ್ತ ಸಮಾರಂಭದಲ್ಲಿ ಪಾಲ್ಗೊಂಡು ಚಿತ್ರತಂಡಕ್ಕೆ ಶುಭ ಕೋರಿದರು.

ನಾನು ಅಣ್ಣಾವ್ರ ದೊಡ್ಡ ಅಭಿಮಾನಿ, ಅವರ ಸಿನಿಮಾಗಳನ್ನು ನೋಡಿ ಬೆಳೆದವನು. ಈಗ ಅವರ ಮೊಮ್ಮಗನಿಗೆ ಸಿನಿಮಾ ನಿರ್ದೇಶನ ಮಾಡುತ್ತಿರುವುದು ನನ್ನ ಭಾಗ್ಯ. ಈ ಚಿತ್ರದ ಕಥೆ ತುಂಬಾ ಎಮೋಷನಲ್ ಆಗಿ ಸಾಗುತ್ತದೆ. ಇದರಲ್ಲಿ ಹೊಸ ವಿಷಯ ಹೇಳಲು ಹೊರಟ್ಟಿದ್ದೇನೆ. ಜಾನಪದದ ಹಾಡು, ಸೊಗಡು ಇಲ್ಲಿರಲಿದೆ. ಮಾರಮ್ಮನ ಆರಾಧನೆ ಮಾಡುವ ಸಮುದಾಯದ ಪರವಾಗಿ ನಿಲ್ಲಬೇಕು ಎಂಬುದು ನನ್ನ ಆಸೆ.

ಅದಕ್ಕಾಗಿಯೇ ಈ ಸಿನಿಮಾದ ಕಥೆ ಹೆಣೆದು ನಿರ್ದೇಶನ ಮಾಡುತ್ತಿದ್ದೇನೆ ಎಂದು ದುನಿಯಾ ವಿಜಯ್ ಹೇಳಿದರು.

ನಾನು ಚಿತ್ರರಂಗಕ್ಕೆ ಯಾವ ಪಾತ್ರದ ಮೂಲಕ ಎಂಟ್ರಿಕೊಡಬೇಕು ಅಂದುಕೊಂಡಿದ್ದೆನೋ ಅಂತಹದ್ದೇ ಪಾತ್ರ ಸಿಕ್ಕಿದೆ. ದೊಡ್ಡ ತಂಡದೊಂದಿಗೆ ಕೆಲಸ ಮಾಡುತ್ತಿರುವುದು ಖುಷಿ ಕೊಟ್ಟಿದೆ. ನನ್ನ ತಂದೆ ನಿರ್ದೇಶನ ಮಾಡುತ್ತಿರುವ ಸಿನಿಮಾ ಇದು ಎಂಬುದು ಸಂತಸ ತಂದಿದೆ.

-ಮೋನಿಶಾ ನಟಿ

ಡೆವಿಲ್ ಟೀಸರ್ ದರ್ಶನ

ಕೊಲೆ ಆರೋಪದಲ್ಲಿ ಜೈಲು ಸೇರಿದ್ದ ನಟ ದರ್ಶನ್ ಜಾಮೀನು ಪಡೆದು ಹೊರಬಂದಿದ್ದಾರೆ. ತಮ್ಮ ಮುಂದಿನ ಸಿನಿಮಾ ಗಳ ಬಗ್ಗೆ ಗಮನಹರಿಸಿದ್ದಾರೆ. ಡೆವಿಲ್ ಚಿತ್ರದಲ್ಲಿ ದರ್ಶನ್ ಅಭಿನಯಿಸುತ್ತಿದ್ದರು, ದರ್ಶನ್ ಜೈಲು ಸೇರಿದ್ದರಿಂದ ಚಿತ್ರೀಕರಣ ಅರ್ಧಕ್ಕೆ ನಿಂತಿತ್ತು. ಈಗ ಉಳಿದ ಭಾಗದ ಚಿತ್ರೀಕರಣ ಆರಂಭವಾಗಲಿದ್ದು ದರ್ಶನ್ ಮತ್ತೆ ಸಿನಿಮಾ ತಂಡ ಸೇರಲಿದ್ದಾರೆ. ಇದೇ 16ರಂದು ದರ್ಶನ್ ಹುಟ್ಟುಹಬ್ಬ, ಅಂದು ಡೆವಿಲ್ ಚಿತ್ರದ ಟೀಸರ್ ರಿಲೀಸ್ ಆಗಲಿದೆ. ಕಳೆದ ವರ್ಷವೂ ಚಿತ್ರದ ಟೀಸರ್ ರಿಲೀಸ್ ಆಗಿ ಸಖತ್ ಸದ್ದು ಮಾಡಿತ್ತು. ಅಂತೆಯೇ ಈಗ ಮತ್ತೊಂದು ಟೀಸರ್ ರಿಲೀಸ್ ಆಗಲಿದ್ದು ದರ್ಶನ್ ಹುಟ್ಟುಹಬ್ಬಕ್ಕೆ ಅಭಿಮಾನಿ ಗಳಿಗೆ ಗಿಫ್ಟ್ ಸಿಗಲಿದೆ. ಪ್ರಕಾಶ್ ವೀರ್ ನಿರ್ದೇ ಶನದ ಚಿತ್ರ ಇದಾಗಿದ್ದು, ಜೆ.ಜಯಮ್ಮ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ದುಬಾರಿ ಟಾಕ್ಸಿಕ್

ಯಶ್, ಕೆಜಿಎಫ್ ಬಳಿಕ ನಟಿಸುತ್ತಿರುವ ಟಾಕ್ಸಿಕ್ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಚಿತ್ರೀಕರಣವೂ ಭರದಿಂದ ಸಾಗಿದೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದೆ. ವಿಶೇಷ ಎಂದರೆ ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗುತ್ತಿದೆ. ಸಾಮಾನ್ಯವಾಗಿ ಬೇರೆ ಭಾಷೆಗಳಿಗೆ ಸಿನಿಮಾವನ್ನು ಡಬ್ ಮಾಡಿ ಬಿಡುಗಡೆ ಮಾಡಲಾಗುತ್ತದೆ. ಆದರೆ ಟಾಕ್ಸಿಕ್ ಚಿತ್ರದ ಮಾತಿನ ಭಾಗವನ್ನು ಕನ್ನಡದ ಜತೆಗೆ ಇಂಗ್ಲೀಷ್ ನಲ್ಲಿಯೂ ಚಿತ್ರೀಕರಣ ನಡೆಸಲಾಗುತ್ತಿದೆ. ಹಾಗಾಗಿ ಹಾಲಿವುಡ್‌ನಲ್ಲಿಯೂ ಚಿತ್ರ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಟಾಕ್ಸಿಕ್ ಅದ್ದೂರಿ ವೆಚ್ಚದ ಚಿತ್ರವಾಗಿದ್ದು ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗುತ್ತಿದೆ. ಈಗ ಇಂಗ್ಲೀಷ್ ನಲ್ಲಿಯೂ ಸಿನಿಮಾ ಬಿಡುಗಡೆಯಾಗುತ್ತಿರುವುದರಿಂದ ಚಿತ್ರದ ಬಜೆಟ್ ಮತ್ತಷ್ಟು ದುಬಾರಿಯಾಗಲಿದೆ.